ಗುರುವಾರ, ನವೆಂಬರ್ 11, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೂರ್ಯನ ಆರಾಧನೆ

ಸೂರ್ಯ ದೇವರನ್ನು ಆರಾಧಿಸುವ 'ಛತ್ ಪೂಜೆ'ಯನ್ನು ಬೆಂಗಳೂರಿನ ಜೆಪಿ ಪಾರ್ಕ್‌ನಲ್ಲಿ ಬುಧವಾರ ಆಚರಿಸಲಾಯಿತು

*Accessories and features shown in the pictures may not be part of the standard equipment and may vary according to the variant. Images are for illustration purpose only. Colors shown may vary from actual body colors due to printing on paper. Terms and conditions apply. ^Claim supported by independent research agency-JATO Dynamics Limited and is applicable in the petrol category. **As certified by Test Agency Under Rule 115 (G) of CMVR 1989.

ಗುರುವಾರ, ನವೆಂಬರ್ 11, 2021 | ಬೆಂಗಳೂರು | ₹ 6.00 | ಸಂಪುಟ 74| ಸಂಚಿಕೆ 312 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೆಪಿಎಸ್‌ಸಿ ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳಿಗೆ ನಡೆಸಲಿರುವ ಸ್ಪರ್ಧಾತ್ಮಕ ಪರೀಕ್ಷೆಯ ಸಾಮಾನ್ಯ ಜ್ಞಾನ ವಿಭಾಗದಲ್ಲಿ ಸಾಂಸ್ಕೃತಿಕ ಇತಿಹಾಸ ವಿಷಯದ ಕುರಿತಾದ ಬಹುಆಯ್ಕೆ ಪ್ರಶ್ನೆಗಳು

ಆಳ-ಅಗಲ
ಬ್ಯಾಟರಿ ವಾಹನದ ಪರೋಕ್ಷ ಮಾಲಿನ್ಯ

ಶೇ 96ರಷ್ಟು ಮೌಲ್ಯ ಹೆಚ್ಚಿಸಿಕೊಂಡ ನೈಕಾ 9

ಟಿ20 ವಿಶ್ವಕಪ್: ಮೊದಲ ಸಲ ಫೈನಲ್‌ಗೆ ಕಿವೀಸ್ 10

ಸೆನ್ಸೆಕ್ಸ್	ನಿಫ್ಟಿ	₹/$
60,352	18,017	74.37

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ತಯಾರಕರು SDM ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
Ph: 0820-2520852, 8970977513

ಗೋಲ್ಡ್ ಲೋನ್ ಬಡ್ಡಿ 57 ಪೈಸೆ ಪ್ರತಿ ತಿಂಗಳು *6.9% ಪ್ರತಿ ವರ್ಷ
ಮಣಪ್ಪುರಂ ಫೈನಾನ್ಸ್ ಲಿಮಿಟೆಡ್
Make Life Easy
Toll Free : 1800-420-22-33

ಸುದರ್ಶನ್ ಜ್ಯುವೆಲರ್ಸ್
ಚಿನ್ನ • ಬೆಳ್ಳಿ • ಚಿನ್ನದ ಆಭರಣಗಳು
916 Hallmark Gold Rate
₹ 4430/-gm
ಬೆಳ್ಳಿ ₹ 60,000/-
ಚಿಕ್ಕಪೇಟೆ: 41300355

ನ.15: ಬುಡಕಟ್ಟು ಗೌರವ ದಿವಸ

ನವದೆಹಲಿ (ಪಿಟಿಐ): ಸ್ವಾತಂತ್ರ್ಯ ಹೋರಾಟಗಾರ ಹಾಗೂ ಬುಡಕಟ್ಟು ಜನರ ಜನಪ್ರಿಯ ನಾಯಕ ಬಿರ್ಸಾ ಮುಂಡಾ ಅವರ ಜನ್ಮದಿನವಾದ ನ. 15ಅನ್ನು 'ಜನ್‌ಜಾತೀಯ ಗೌರವ್ ದಿವಸ್' (ಬುಡಕಟ್ಟು ಗೌರವ ದಿನ) ಎಂದು ಘೋಷಿಸಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ.

ಹಿರಿಯ ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದ ತಂಡ • ರಹಸ್ಯ ಕಾರ್ಯಾಚರಣೆ

ಬಿಟ್ ಕಾಯಿನ್: 'ಅಮಿತ' ತನಿಖೆ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ರಾಜಕಾರಣದಲ್ಲಿ ತಲ್ಲಣ ಸೃಷ್ಟಿಸುತ್ತಿರುವ ಬಿಟ್ ಕಾಯಿನ್ ಮತ್ತು ಹಣಕಾಸು ಸಂಸ್ಥೆಗಳ ಸರ್ವರ್ ಹ್ಯಾಕಿಂಗ್ ಹಗರಣದ ಕುರಿತು ಕೇಂದ್ರ ಗೃಹ ಸಚಿವಾಲಯ ಪ್ರಾಥಮಿಕ ತನಿಖೆ ಆರಂಭಿಸಿದೆ.

ಕೇಂದ್ರದ ವಿವಿಧ ತನಿಖಾ ಸಂಸ್ಥೆಗಳ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಜಂಟಿ ತಂಡವೊಂದನ್ನು ರಾಜ್ಯಕ್ಕೆ ಕಳುಹಿಸಿದ್ದ ಕೇಂದ್ರ ಗೃಹ ಸಚಿವಾಲಯ, ಹಗರಣಕ್ಕೆ ಸಂಬಂಧಿಸಿದ ಮಹತ್ವದ ಮಾಹಿತಿಗಳನ್ನು ಸಂಗ್ರಹಿಸಿದೆ ಎಂಬ ಖಚಿತ ಮಾಹಿತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಸಿಬಿಐ, ಜಾರಿ ನಿರ್ದೇಶನಾಲಯ, ಕೇಂದ್ರ ಗುಪ್ತಚರ ಇಲಾಖೆ ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳ ಹಿರಿಯ ಅಧಿಕಾರಿಗಳನ್ನು ಒಳಗೊಂಡ ತಂಡ ನವೆಂಬರ್ 2ರಂದು ಬೆಂಗಳೂರಿಗೆ ಬಂದಿತ್ತು. ಮಹಿಳಾ ಅಧಿಕಾರಿಯೊಬ್ಬರ ನೇತೃತ್ವದ ಉನ್ನತಮಟ್ಟದ ತಂಡ, ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲೇ ಮೊಕ್ಕಾಂ ಹೂಡಿ ಕಾರ್ಯಾಚರಣೆ ನಡೆಸಿತ್ತು. ರಾಜ್ಯದ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳೂ ಸೇರಿದಂತೆ ಹಲವರ ಹೇಳಿಕೆ ಪಡೆದು ದೆಹಲಿಗೆ ವಾಪಸಾಗಿದ್ದ ಈ ತಂಡ ಕೇಂದ್ರ ಗೃಹ ಸಚಿವಾಲಯಕ್ಕೆ ವಿಸ್ತೃತವಾದ ವರದಿಯೊಂದನ್ನು ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ಹಲವು ಅಧಿಕಾರಿಗಳ ವಿಚಾರಣೆ: ಕೇಂದ್ರ ತಂಡವು, ರಾಜ್ಯದ ಹಲವರನ್ನು ಕರೆಸಿಕೊಂಡು ಅನೌಪಚಾರಿಕವಾಗಿ ಹೇಳಿಕೆ ಪಡೆದುಕೊಂಡಿದೆ. ಪ್ರಕರಣಕ್ಕೆ ಸಂಬಂಧಿಸಿದ ಕೆಲವು ದಾಖಲೆಗಳನ್ನೂ ಸಂಗ್ರಹಿಸಿದೆ. ಪ್ರಧಾನಿ ಸಚಿವಾಲಯದ ನಿರ್ದೇಶನದಂತೆ ಮಾಹಿತಿ ಸಂಗ್ರಹ ನಡೆದಿದೆ ಎಂದು ಗೊತ್ತಾಗಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಮಹತ್ವದ ಹುದ್ದೆಯಲ್ಲಿರುವ ಎಡಿಜಿಪಿಗಳು, ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಸೇರಿದಂತೆ ಹಲವು ಅಧಿಕಾರಿಗಳಿಂದ ಕೇಂದ್ರದ ತಂಡ ಮಾಹಿತಿ ಸಂಗ್ರಹಿಸಿದೆ. ಸಿಸಿಬಿ ಮತ್ತು ಸಿಐಡಿಯಲ್ಲಿ ಶ್ರೀಕೃಷ್ಣನಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆ ನಡೆಸಿದ್ದ ತಂಡಗಳಲ್ಲಿದ್ದ ಅಧಿಕಾರಿಗಳ ಹೇಳಿಕೆಯನ್ನೂ ಪಡೆಯಲಾಗಿದೆ. ಈ ಪ್ರಕರಣಗಳ ತನಿಖೆಯಲ್ಲಿ ನೆರವಾಗಿದ್ದ ಸೈಬರ್ ತಂತ್ರಜ್ಞರ ಹೇಳಿಕೆಯನ್ನೂ ಕೇಂದ್ರ ತಂಡ ಪಡೆದಿದೆ. ಹಲವು ಪ್ರತ್ಯೇಕ ತಂಡಗಳಲ್ಲಿ ಮಾಹಿತಿ ಸಂಗ್ರಹಿಸುವ ಕೆಲಸ ನಡೆದಿತ್ತು ಎಂದು ಮೂಲಗಳು ಹೇಳಿವೆ.

ಕೇಂದ್ರ ಗೃಹ ಸಚಿವಾಲಯದ ಸೂಚನೆಯಂತೆ ಈ ತಂಡಕ್ಕೆ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಪ್ರತ್ಯೇಕವಾಗಿ ಸ್ಥಳಾವಕಾಶ ಕಲ್ಪಿಸಲಾಗಿತ್ತು. ರಾಜ್ಯದ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸುವ ಸಂದರ್ಭದಲ್ಲಿ ಇತರ ಯಾವುದೇ ವ್ಯಕ್ತಿಗಳು ಅಲ್ಲಿಗೆ ಪ್ರವೇಶಿಸದಂತೆ ನಿರ್ಬಂಧಿಸಲಾಗಿತ್ತು.

ಬಿಟ್ ಕಾಯಿನ್, ಹಣಕಾಸು ಸಂಸ್ಥೆಗಳ ಸರ್ವರ್ ಹ್ಯಾಕ್ ಮಾಡಿ ಸಾವಿರಾರು ಕೋಟಿ ರೂಪಾಯಿಗಳನ್ನು ದೋಚಿದ ಆರೋಪ ಶ್ರೀಕೃಷ್ಣನ ಮೇಲಿದೆ. ಸರ್ಕಾರದ ಇಲಾಖೆಗಳು ಮತ್ತು ಸಂಸ್ಥೆಗಳ ಸರ್ವರ್‌ಗಳಿಗೂ ಕನ್ನಹಾಕಿ ಹಣ ಲಪಟಾಯಿಸಿದ್ದ. ಈ ಕೃತ್ಯಗಳಲ್ಲಿ ರಾಜ್ಯದ ಪ್ರಭಾವಿ ರಾಜಕಾರಣಿಗಳು ಮತ್ತು ಕೆಲವು ಹಿರಿಯ ಅಧಿಕಾರಿಗಳೂ ಪಾಲು ಪಡೆದಿದ್ದಾರೆ ಎಂಬ ಆಪಾದನೆಯೂ ಇದೆ. ಈ ಕುರಿತು ಮಾಹಿತಿ ಸಂಗ್ರಹಿಸುವುದಕ್ಕಾಗಿಯೇ ತಂಡವೊಂದನ್ನು ಕೇಂದ್ರ ಗೃಹ ಸಚಿವಾಲಯ ಕಳುಹಿಸಿತ್ತು ಎಂಬ ಮಾಹಿತಿಯೂ ಲಭಿಸಿದೆ.

2020ರ ನವೆಂಬರ್ 7ರಂದು ಶ್ರೀಕೃಷ್ಣನನ್ನು ಮಾದಕ ವಸ್ತು ಪ್ರಕರಣವೊಂದರಲ್ಲಿ ಕೆಂಪೇಗೌಡ ನಗರ ಠಾಣೆ ಪೊಲೀಸರು ಬಂಧಿಸಿದ್ದರು. ಬಳಿಕ ಆತನ ಹ್ಯಾಕಿಂಗ್ ಕೈಚಳಕದ ಕೃತ್ಯಗಳು ಹೊರಬಂದಿದ್ದವು. ಹಗರಣದ ಕುರಿತು ಸಿಸಿಬಿ ಮತ್ತು ಸಿಐಡಿ ಪೊಲೀಸರು ಪ್ರತ್ಯೇಕವಾದ ತನಿಖೆ ನಡೆಸಿದ್ದರು. ಆರೋಪಿಯ ಬಂಧನ ಮತ್ತು ತನಿಖೆಯ ಅವಧಿಯಲ್ಲಿ ನಡೆದಿದ್ದ ಬೆಳವಣಿಗೆಗಳ ಬಗ್ಗೆಯೂ ಕೇಂದ್ರದ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 04

ಸಚಿನ್ ಮಾಮನಿ ಪತ್ರದ ಸದ್ದು

ಬಿಟ್ ಕಾಯಿನ್ ಹ್ಯಾಕಿಂಗ್ ಹಗರಣಕ್ಕೆ ಸಂಬಂಧಿಸಿದಂತೆ ಸಚಿನ್ ಮಾಮನಿ ಎಂಬುವವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಿದ್ದಾರೆ ಎನ್ನಲಾದ ದೂರಿನ ಪ್ರತಿಯೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಜೋರಾಗಿ ಸದ್ದು ಮಾಡುತ್ತಿದೆ.

ರಾಜ್ಯದ ಅಧಿಕಾರಸ್ಥ ರಾಜಕಾರಣಿಗಳು, ಅವರ ಮಕ್ಕಳು, ಆಯಕಟ್ಟಿನ ಹುದ್ದೆಗಳಲ್ಲಿರುವ ಕೆಲವು ಹಿರಿಯ ಅಧಿಕಾರಿಗಳು ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ದೂರಿನಲ್ಲಿದೆ.

ಬೊಮ್ಮಾಯಿ ದೆಹಲಿಗೆ ಹೋಗಿದ್ದೇಕೆ?

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ದಿಢೀರ್ ದೆಹಲಿಗೆ ತೆರಳಿರುವುದು ಮತ್ತು ಗುರುವಾರ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡುತ್ತಿರುವುದು ರಾಜಕೀಯ ವಲಯದಲ್ಲಿ ಗಂಭೀರ ಚರ್ಚೆಗೆ ಕಾರಣವಾಗಿದೆ.

ಬಿಟ್‌ಕಾಯಿನ್ ಪ್ರಕರಣದಲ್ಲಿ ರಾಜಕೀಯ ವ್ಯಕ್ತಿಗಳೂ ಇದ್ದಾರೆ ಎಂಬ ವದಂತಿ ಬಗ್ಗೆ ಮೋದಿ, ಅಮಿತ್ ಶಾ ಮತ್ತು ನಡ್ಡಾ ಅವರಿಗೆ ಸಮಜಾಯಿಷಿ ನೀಡಲು ಬೊಮ್ಮಾಯಿ ಹೋಗಿದ್ದಾರೆ ಎಂಬ ಚರ್ಚೆ ಬಿಜೆಪಿಯಲ್ಲಿ ನಡೆಯುತ್ತಿದೆ.

ದೆಹಲಿಯಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಹೈಕಮಾಂಡ್ ಯಾವುದೇ ರೀತಿಯ ವಿವರಣೆ ಅಥವಾ ಮಾಹಿತಿ ಕೇಳಿಲ್ಲ' ಎಂದು ಹೇಳಿದರು.

'ಪ್ರಧಾನಿ ಭೇಟಿಗೆ ಗುರುವಾರ ಸಮಯ ನಿಗದಿಯಾಗಿದೆ. ಗೃಹ ಸಚಿವರು ಮತ್ತು ಪಕ್ಷದ ಅಧ್ಯಕ್ಷರ ಭೇಟಿಯೂ ನಿಗದಿ ಆಗಲಿದೆ' ಎಂದು ಬೊಮ್ಮಾಯಿ ಬೆಂಗಳೂರಿನಲ್ಲಿ ಸುದ್ದಿಗಾರರಿಗೆ ಹೇಳಿದ್ದರು.

'ಬಿಟ್ ಕಾಯಿನ್ ಯಾರಿಗೆಷ್ಟು ಪಾಲು'

ಇ.ಡಿಯಿಂದಲೂ ಕೇಂದ್ರಕ್ಕೆ ವರದಿ

ಅಕ್ಟೋಬರ್ 25ರಿಂದ ನಾಲ್ಕು ದಿನಗಳ ಕಾಲ ಶ್ರೀಕೃಷ್ಣನನ್ನು ಸತತ ವಿಚಾರಣೆ ನಡೆಸಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಕೇಂದ್ರ ಗೃಹ ಸಚಿವಾಲಯಕ್ಕೆ ಪ್ರತ್ಯೇಕ ವರದಿ ಸಲ್ಲಿಸಿದ್ದಾರೆ.

ಬಿಟ್ ಕಾಯಿನ್ ಮತ್ತು ಸರ್ವರ್ ಹ್ಯಾಕಿಂಗ್ ಹಗರಣದಲ್ಲಿ ಇ.ಡಿ ಅಧಿಕಾರಿಗಳು ಶ್ರೀಕೃಷ್ಣನ ವಿರುದ್ಧ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದರು. ಆಗಸ್ಟ್ ತಿಂಗಳಲ್ಲೇ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ತಾನು ಭಾಗಿಯಾಗಿರುವ ಹ್ಯಾಕಿಂಗ್ ಪ್ರಕರಣಗಳಲ್ಲಿ ದೋಚಿರುವ ಹಣವನ್ನು ರಾಜ್ಯದ ಕೆಲವು ಪ್ರಭಾವಿ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಉದ್ಯಮಿಗಳಿಗೆ ನೀಡಿರುವುದಾಗಿ ಇ.ಡಿ ಎದುರು ಆಗಲೇ ಹೇಳಿಕೆ ನೀಡಿದ್ದ. ಮತ್ತೆ ವಿಚಾರಣೆ ನಡೆಸಿದ ಇ.ಡಿ ಅಧಿಕಾರಿಗಳು ಸಾಕಷ್ಟು ಮಾಹಿತಿ ಕಲೆ ಹಾಕಿ, ವರದಿಯಲ್ಲಿ ಉಲ್ಲೇಖಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬಿಟ್ ಕಾಯಿನ್ ಹಗರಣದ ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತಲೆದಂಡ ಖಚಿತ
ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ

ಪಾಪ, ಪ್ರಿಯಾಂಕ್ ಖರ್ಗೆ ಅವರಿಗೆ ಗೊತ್ತಿದ್ದಂತಿಲ್ಲ. ಬಿಟ್ ಕಾಯಿನ್ ಹಗರಣದಲ್ಲಿ ಕಾಂಗ್ರೆಸ್ ನಾಯಕರ ಹೆಸರುಗಳೂ ಇವೆ. ಅದರ ಬಗ್ಗೆ ಅವರು ಮೊದಲು ಚಿಂತೆ ಮಾಡಲಿ.
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಈ ಪ್ರಕರಣದಲ್ಲಿ ನಾನು ಎಲ್ಲೂ ಬಸವರಾಜ ಬೊಮ್ಮಾಯಿ ಹೆಸರು ಹೇಳಿಲ್ಲ. ಆದರೂ, ಅವರು ಕಳ್ಳನ ಥರ ಹೆದರಿಕೊಳ್ಳುವುದನ್ನು ನೋಡಿದರೆ ಅನುಮಾನ ಬರುತ್ತಿದೆ.
ಸಿದ್ದರಾಮಯ್ಯ
ವಿರೋಧ ಪಕ್ಷದ ನಾಯಕ

ಈ ಹಗರಣದಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳು ಪರಸ್ಪರ ಆರೋಪ– ಪ್ರತ್ಯಾರೋಪ ಮಾಡುವ ಮೂಲಕ ಪ್ರಕರಣವನ್ನು ವ್ಯವಸ್ಥಿತವಾಗಿ ಮುಚ್ಚಿಹಾಕಲು ಪ್ರಯತ್ನಿಸುತ್ತಿವೆ
ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಇದೆಂಥಾ ಆಡಳಿತ...'

ಸಂಪುಟದ ಕಾರ್ಯವೈಖರಿಗೆ ತಪರಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಸರ್ಕಾರ ತಾನಾಗಿಯೇ ಏನೂ ಕೆಲಸ ಮಾಡುತ್ತಿಲ್ಲ, ಹೈಕೋರ್ಟ್ ಹೇಳಿದರೂ ಮಾಡುತ್ತಿಲ್ಲ. ಇವರ ವ್ಯವಹಾರಗಳು ಹೇಗೆ ನಡೆಯುತ್ತಿವೆ ಎಂಬುದೇ ಗೊತ್ತಾಗುತ್ತಿಲ್ಲ. ಇದೆಂಥಾ ಆಡಳಿತ ವೈಖರಿ' ಎಂದು ಹೈಕೋರ್ಟ್ ರಾಜ್ಯ ಸರ್ಕಾರದ ವಿರುದ್ಧ ಕೆಂಡ ಕಾರಿದೆ.

ಅತ್ಯಾಧುನಿಕ ಆಂಬುಲೆನ್ಸ್ ಟೆಂಡರ್ ವಿಚಾರಕ್ಕೆ ಸಂಬಂಧಿಸಿದಂತೆ, 'ಭಾರತ್ ಪುನರುತ್ಥಾನ ಟ್ರಸ್ಟ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯ ಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವೆಂಕಟೇಶ ಪಿ. ದಳವಾಯಿ, 'ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಆಂಬುಲೆನ್ಸ್ ನಿರ್ವಹಣಾ ವ್ಯವಸ್ಥೆ ಜಾರಿಗೆ ಈ ಮೊದಲು ಕರೆದಿದ್ದ ₹1,800 ಕೋಟಿ ಮೊತ್ತದ ಟೆಂಡರ್ ಅನ್ನು ಸರ್ಕಾರ ರದ್ದುಪಡಿಸಿತ್ತು. ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದ ನಂತರ ಆ ಆದೇಶ ಹಿಂಪಡೆದು ಹೊಸ ಟೆಂಡರ್ ಕರೆಯುವುದಾಗಿ ಹೇಳಿತ್ತು. ಆದರೆ, ಈವರೆಗೂ ಕರೆದಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಈ ಮಾತಿಗೆ ಕೆರಳಿದ ಮುಖ್ಯ ನ್ಯಾಯಮೂರ್ತಿಗಳು, 'ಇಂತಹ ವಿಚಾರಗಳನ್ನು ಸರ್ಕಾರ ಆದ್ಯತೆಯ ಮೇರೆಗೆ ಪರಿಗಣಿಸಿ ತುರ್ತು ಕ್ರಮ ಕೈಗೊಳ್ಳಬೇಕು. ಆದರೆ, ಈ ಪ್ರಕರಣದಲ್ಲಿ 2021ರ ಆಗಸ್ಟ್ 31ರಂದು ಯಾವ ಪರಿಸ್ಥಿತಿ ಇತ್ತೋ, ಅದೇ ಸ್ಥಿತಿ ಇಂದೂ ಇದೆ. ಸರ್ಕಾರದ ನಿರ್ಲಕ್ಷ್ಯದ ಪರಿಣಾಮವಾಗಿ ಹೈಕೋರ್ಟ್‌ಗೆ ಇಷ್ಟೊಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಹರಿದು ಬರುತ್ತಿವೆ. ಈ ಸರ್ಕಾರ ಏನು ಮಾಡುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲಿಕ್ಕೇ ಆಗುತ್ತಿಲ್ಲ' ಎಂದು ಕಿಡಿ ಕಾರಿದರು.

'ಎಲ್ಲಾ ಪ್ರಕರಣಗಳಲ್ಲೂ ಸರ್ಕಾರ ಇದೇ ರೀತಿ ಸಬೂಬು ಹೇಳುತ್ತಿದೆ. ನಾವು ನಿತ್ಯವೂ ಅಧಿಕಾರಿಗಳನ್ನು ಕೋರ್ಟ್‌ಗೆ ಕರೆಯಿಸಿ ಸೂಚನೆ ನೀಡಬೇಕೇ, ಸರ್ಕಾರದ ಈ ಧೋರಣೆ ನಿಜಕ್ಕೂ ಸರಿಯಲ್ಲ' ಎಂದು ಅಸಮಾಧಾನ ಹೊರಹಾಕಿದರು. ವಿಚಾರಣೆಯನ್ನು ಡಿಸೆಂಬರ್ 12ಕ್ಕೆ ಮುಂದೂಡಲಾಗಿದೆ.

'ಎಂಪಿ ಲ್ಯಾಡ್ಸ್' ಪುನರಾರಂಭ

ನವದೆಹಲಿ (ಪಿಟಿಐ): ಕೋವಿಡ್ ಕಾರಣಕ್ಕೆ ಅಮಾನತಿನಲ್ಲಿಟ್ಟಿದ್ದ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು (ಎಂಪಿ ಲ್ಯಾಡ್ಸ್) ಮರುಸ್ಥಾಪಿಸಿ, ಯೋಜನೆ ಮುಂದುವರಿಸಲು ಕೇಂದ್ರ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ.

'2021–22 ಹಣಕಾಸು ಸಾಲಿನ ಬಾಕಿ ಉಳಿದಿರುವ ಅವಧಿಗೆ ಪ್ರತಿ ಸಂಸದರಿಗೆ ತಲಾ ₹2 ಕೋಟಿ ಅನುದಾನವನ್ನು ಒಂದೇ ಕಂತಿನಲ್ಲಿ ಒದಗಿಸಲಾಗುವುದು. 2022–23ರಿಂದ 2025–26ರ ಅವಧಿಗೆ ಪ್ರತಿ ಸಂಸದರಿಗೆ ವಾರ್ಷಿಕ ₹5 ಕೋಟಿ ಅನುದಾನವನ್ನು 2 ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು' ಎಂದು ಸಭೆಯ ಬಳಿಕ ಸಚಿವ ಅನುರಾಗ್ ಠಾಕೂರ್ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

आज़ादी का अमृत महोत्सव

ನಾಳಿನ ಭಾರತಕ್ಕಾಗಿ ನಾವು ಬದಲಾವಣೆಗಳನ್ನು ತರುತ್ತಿದ್ದೇವೆ.

ನಮ್ಮ ಗ್ರಾಹಕರ ಆವಶ್ಯಕತೆಗಳು ಮತ್ತು ತಂತ್ರಜ್ಞಾನಗಳಲ್ಲಿನ ಬದಲಾವಣೆಗಳೇ ಕಳೆದ 103 ವರ್ಷಗಳಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಬದಲಾವಣೆಗಳಿಗೆ ಹೊಸ ಪ್ರೇರಣೆ ನೀಡುತ್ತಾ ಬಂದಿದೆ. ನಮ್ಮ ಯೋಜನೆಗಳು ಮತ್ತು ಸೇವೆಗಳಲ್ಲಿ ನಾವು ತರುತ್ತಾ ಬಂದಿರುವ ಹತ್ತು ಹಲವು ನಾವೀನ್ಯತೆಗಳು ನಿಮಗೊಂದು ಅತ್ಯಾಧುನಿಕತೆಯ ಅನುಭವ ನೀಡುತ್ತಾ ನಿಮ್ಮನ್ನು ನಮ್ಮತ್ತ ಬರುವಂತೆ ಮಾಡಿದೆ.

ಇಂದು ನಾವು ನಮ್ಮ 103ನೆಯ ಸ್ಥಾಪನಾದಿನಾಚರಣೆಯನ್ನು ಸಂಭ್ರಮದಿಂದ ಆಚರಿಸುತ್ತಿರುವ ಸಂದರ್ಭದಲ್ಲಿ, ನಾಳಿನ ಭಾರತಕ್ಕಾಗಿ ನಮ್ಮನ್ನು ನಾವೇ ಪರಿವರ್ತನೆಗಳಿಗೆ ಅರ್ಪಿಸಿಕೊಳ್ಳುತ್ತೇವೆ. ಈ ಆಶ್ವಾಸನೆಯೊಂದಿಗೆ ದೇಶ ಸೇವೆಗಾಗಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳುತ್ತಿದ್ದೇವೆ.

ಯೂನಿಯನ್ ವರ್ಚುವಲ್ ಕನೆಕ್ಟ್
ವಾಟ್ಸಾಪ್ ಬ್ಯಾಂಕಿಂಗ್ ಮೂಲಕ ನಮ್ಮ ಗ್ರಾಹಕರು ಖಾತೆಯ ಬ್ಯಾಲನ್ಸ್, ಮಿನಿ ಸ್ಟೇಟ್‌ಮೆಂಟ್, ಚೆಕ್ ಬುಕ್ ಕೋರಿಕೆ, ದೂರುಗಳ ಪರಿಹಾರ, ಎಮ್–ಪಿನ್ ಮತ್ತು ಟಿ–ಪಿನ್ ಮನಃ ಸೆಟ್ ಮಾಡುವುದು ಇತ್ಯಾದಿ ವಹಿವಾಟುಗಳನ್ನು ಸುಲಭವಾಗಿ ಮಾಡಬಲ್ಲರು.

ಯೂನಿಯನ್ ಡಿಜಿಕನೆಕ್ಟ್ ಶಾಖೆಗಳು
ಸ್ವ–ಸೇವೆ ಸಂಚಾಲಿತ ಕಾಗದ ರಹಿತ ಬ್ಯಾಂಕಿಂಗ್‌ನೊಂದಿಗೆ ನಮ್ಮ ಶಾಖೆಗಳಾಗಿವೆ ಅಪ್ಪಟ ಡಿಜಿಟಲ್

ಯೂನಿಯನ್ ಡಿಜಿ ಡಾಕ್ಸ್
ಸಾಲದ ದಸ್ತಾವೇಜುಗಳು, ಆಧಾರ್ ಬಳಕೆಯ ಮೂಲಕ ಈ–ಸ್ಟಾಂಪಿಂಗ್ ಮತ್ತು ಈ–ಸಿಗ್ನೇಚರ್ ಮುಂತಾದವುಗಳ ಸ್ವಯಂಚಾಲಿತ ಕಾಗದರಹಿತ ಪ್ರಕ್ರಿಯೆಗಳು

ಕಸ್ಟಮರ್ 360° ಸ್ಟೇಟ್‌ಮೆಂಟ್
ಈ ಆಲ್–ಇನ್–ಒನ್ ಅಕೌಂಟ್ ಸ್ಟೇಟ್‌ಮೆಂಟ್‌ನಲ್ಲಿ ನಿಮಗೆ, ನಿಮ್ಮ ಉಳಿತಾಯ ಖಾತೆ/ಗಳು, ಕರೆಂಟ್ ಖಾತೆ/ಗಳು, ಸಾಲದ ಖಾತೆ/ಗಳು ಮತ್ತು ನೀವು ಬ್ಯಾಂಕಿನಿಂದ ಪಡೆದುಕೊಂಡಿರುವ ಉಳಿದ ಎಲ್ಲ ಉತ್ಪನ್ನಗಳ ಸ್ಥಿತಿಗಳ ಸಮಗ್ರ ಮಾಹಿತಿ ಲಭ್ಯವಾಗುತ್ತದೆ.

ಯೂನಿಯನ್ ಗ್ರೀನ್ ಡಿಪಾಸಿಟ್
ಈ ಟರ್ಮ್ ಡಿಪಾಸಿಟ್ ಸ್ಕೀಮ್, ವೈಯಕ್ತಿಕ ಗ್ರಾಹಕರಿಗಾಗಿ ಅವರ ಸಮರ್ಥನೀಯತೆಯ ಗುರಿಗಳನ್ನು ಸಾಧಿಸಲು ನೆರವಾಗುವ ಒಂದು ವಿಶಿಷ್ಟ ವೇದಿಕೆಯನ್ನು ಕಲ್ಪಿಸುತ್ತದೆ.

ಯೂನಿಯನ್ ರೂಫ್ ಟು ಸೋಲರ್ ಸ್ಕೀಮ್
ಗ್ರಿಡ್‌ಗೆ ಜೋಡಿಸಲಾದ ಮನೆಯ ಛಾವಣಿ ಮೇಲಿನ ಸೋಲರ್ ಸಿಸ್ಟಮ್ ಅಳವಡಿಸುವಿಕೆಗಾಗಿ ಗ್ರಾಹಕರಿಗೆ ಸಾಲದ ಸೌಲಭ್ಯ

ಯೂನಿಯನ್ ಗ್ರೀನ್ ಮೈಲ್ಸ್
ಇಲೆಕ್ಟ್ರಾನಿಕ್ ವಾಹನಗಳ ಖರೀದಿ ಮತ್ತು ಅವಶ್ಯಕ ಚಾರ್ಜಿಂಗ್ ವ್ಯವಸ್ಥೆಗಳ ನಿರ್ಮಾಣಕ್ಕಾಗಿ ಸಾಲದ ಸೌಲಭ್ಯ

यूनियन बैंक ऑफ इंडिया Union Bank of India
भारत सरकार का उपक्रम A Government of India Undertaking
आन्ध्रा Andhra कार्पोरेशन Corporation

Trust but Always verify. Do your part, be Cyber Smart
@unionbankofindia | @UnionBankTweets | @unionbankofindia
UnionBankInsta | YouTube UnionBankofIndiaUtube

ಡೆಂಗಿ: 5 ಮರಣ, ಪ್ರಕರಣಗಳ ಸಂಖ್ಯೆ 5,185ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಜ್ವರ ಪೀಡಿತರಲ್ಲಿ ಐವರು ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ಈ ಜ್ವರಕ್ಕೆ ಒಳಪಟ್ಟವರ ಸಂಖ್ಯೆ 5,185ಕ್ಕೆ ಏರಿಕೆಯಾಗಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. 17 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಮೂರಂಕಿಯಲ್ಲಿದೆ. ಈ ವರ್ಷ ಮೊದಲ ಆರು ತಿಂಗಳ ಅವಧಿಯಲ್ಲಿ ಡೆಂಗಿ ನಿಯಂತ್ರಣದಲ್ಲಿತ್ತು. ಮಳೆ ಹೆಚ್ಚಳವಾದ ಬಳಿಕ ಈ ಜ್ವರಕ್ಕೆ ಒಳಪಡುವವರ ಸಂಖ್ಯೆ ಏರುಗತಿ ಪಡೆದುಕೊಂಡಿದೆ.

ಕಳೆದ ವರ್ಷ 3,823 ಮಂದಿಯಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿತ್ತು. ಅವರಲ್ಲಿ 5 ಮಂದಿ ಮೃತಪಟ್ಟಿದ್ದರು.

ಈ ವರ್ಷ ಬೆಂಗಳೂರಿನಲ್ಲಿ ಅತೀ ಹೆಚ್ಚು ಪ್ರಕರಣಗಳು ದೃಢಪಟ್ಟಿದ್ದು, 971 ಮಂದಿ ಡೆಂಗಿ ಜ್ವರ ಎದುರಿಸಿದ್ದಾರೆ. ಶಿವಮೊಗ್ಗದಲ್ಲಿ 381, ಕಲಬುರಗಿಯಲ್ಲಿ 369, ಉಡುಪಿಯಲ್ಲಿ 312, ಕೊಪ್ಪಳದಲ್ಲಿ 268, ದಾವಣಗೆರೆಯಲ್ಲಿ 245, ವಿಜಯಪುರದಲ್ಲಿ 237, ದಕ್ಷಿಣ ಕನ್ನಡದಲ್ಲಿ 231, ಬಳ್ಳಾರಿಯಲ್ಲಿ 227, ಹಾವೇರಿಯಲ್ಲಿ 198, ಮಂಡ್ಯದಲ್ಲಿ 188, ಗದಗದಲ್ಲಿ 184, ಚಿತ್ರದುರ್ಗದಲ್ಲಿ 152, ತುಮಕೂರಿನಲ್ಲಿ 143, ಯಾದಗಿರಿಯಲ್ಲಿ 142, ಬೀದರ್‌ನಲ್ಲಿ 128 ಹಾಗೂ ಕೋಲಾರದಲ್ಲಿ 113 ಮಂದಿ ಡೆಂಗಿ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗೆ ಇವೆ.

ರಾಜ್ಯದ 28 ಜಿಲ್ಲೆಗಳಲ್ಲಿ ಚಿಕೂನ್ ಗುನ್ಯಾ ಪ್ರಕರಣಗಳು ವರದಿಯಾಗಿವೆ. ಈವರೆಗೆ ಈ ಮಾದರಿಯ ಜ್ವರಕ್ಕೆ ಒಳಗಾದವರ ಸಂಖ್ಯೆ 1,621ಕ್ಕೆ ಏರಿಕೆಯಾಗಿದೆ.

ಚನ್ನಪಟ್ಟಣ ನಗರಸಭೆ
ರಾಮನಗರ ಜಿಲ್ಲೆ
ದೂರವಾಣಿ: 080–27251235, Janahitha (Helpline): 080-23108108
Website: www.channapatnacity.mrc.gov.in e-Mail: itstaff_ulb_channapatna@yahoo.co.in
ಸಂಖ್ಯೆ: ನಸಚ/ಕಾವಿ/ಟೆಂಡರ್/ಸಿಆರ್/06/2021–22 ದಿನಾಂಕ: 02.11.2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2021–22ನೇ ಸಾಲಿನ 15ನೇ ಹಣಕಾಸು (ಮುಕ್ತನಿಧಿ) ಅನುದಾನ, 2021–22ನೇ ಸಾಲಿನ ಎಸ್.ಎಫ್.ಸಿ. (ಕುಡಿಯುವ ನೀರು) ಅನುದಾನ, 2020–21ನೇ ಸಾಲಿನ ಎಸ್.ಎಫ್.ಸಿ. (ಕುಡಿಯುವ ನೀರು) ಅನುದಾನ, ಎಸ್.ಎಫ್.ಸಿ. (ಕುಡಿಯುವ ನೀರು) ಅನುದಾನದಲ್ಲಿ 2014–15ನೇ ಸಾಲಿನಿಂದ 2020–21ನೇ ಸಾಲಿನವರೆಗೆ ಉಳಿಕೆಯಾಗಿರುವ ಮೊತ್ತ, 2021–22ನೇ ಸಾಲಿನ ಎಸ್.ಎಫ್.ಸಿ. ಶೇ. 24.10ರ ಅನುದಾನ ಮತ್ತು 2021–22ನೇ ಸಾಲಿನ ಎಸ್.ಎಫ್.ಸಿ. ಶೇ. 7.25ರ ಅನುದಾನದಲ್ಲಿ ಈ ಕೆಳಕಂಡ ಇಂಡೆಂಟ್ ಸಂಖ್ಯೆಯ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರುಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in / ಮೂಲಕ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು KW-1 & KW-2 ರ ನಿಯಮಗಳಂತೆ **ದಿನಾಂಕ: 20.11.2021ರ ಸಂಜೆ 5.00 ಗಂಟೆಯೊಳಗೆ** ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ಪ್ಯಾಕೇಜ್ ಮೊತ್ತವು ಕ್ರಮವಾಗಿ **ರೂ. 4.00 ಲಕ್ಷಗಳಿಂದ 43.05 ಲಕ್ಷಗಳು** ಇರುತ್ತದೆ. ಟೆಂಡರ್‌ನ್ನು ತೆರೆಯುವ **ದಿನಾಂಕ: 23.11.2021 ರಂದು ಬೆಳಿಗ್ಗೆ 11:00 ಗಂಟೆಗೆ.** WORK INDENT No.: (1) 122390, (2) 122505 (SC), (3) 122506 (SC), (4) 122507, (5) 122508, (6) 122509, (7) 122510 (ST), (8) 122511. ಹೆಚ್ಚಿನ ವಿವರಗಳಿಗೆ ಚನ್ನಪಟ್ಟಣ ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಹಾಗೂ ನಗರಸಭೆಯ ವೆಬ್‌ಸೈಟ್ www.channapatnacity.mrc.gov.in ರ ಟೆಂಡರ್ ವಿಭಾಗದಲ್ಲಿ ವಿವರವಾದ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/– ಪೌರಾಯುಕ್ತರು
ನಗರಸಭೆ, ಚನ್ನಪಟ್ಟಣ
ವಾಸಾಸಂಇ/ರಾನ/ಬ್ರಾಂಚ್/290/2021–22

IN THE HON'BLE LXIII ADDITIONAL CITY CIVIL JUDGE AT BENGALURU (CCH-64)
P & S.C. No. 355 of 2021
In the matter of the estate of late Sri A.V. Keshavamurthy
Mr. C. GURU DUTT, Aged about 60 years, S/o. Late A.V. Chandra Shekariah, Residing at No. 537, 3rd Cross, 2nd Block, R.T Nagar, Bengaluru - 560 032. ...PETITIONER
AND: NIL ...RESPONDENT
PAPER PUBLICATION
Whereas the Petitioner has instituted the above petition under Part IX, Chapter IV, Section 278 of the Indian Succession Act, 1925 seeking grant of letters of administration with regard to the last Will and testament dated 09.02.2004 executed by Late A.V. Keshavamurthy in favour of his biological nephew, the Petitioner Mr. C Guru Dutt, before this Hon'ble Court. Mr. Late Sri A.V. Keshavamurthy, was a Hindu by religion and Indian National, aged about 89 years at the time of death which took place on 28.12.2012. The permanent residence of Late A.V. Keshavamurthy was at No. 537, 3rd Cross, 2nd Block, R.T. Nagar, Bengaluru - 560 032 where he resided until he passed away.
In case of any grievance with the above events, you are hereby summoned to appear as a claimant before the Hon'ble Court of the LXIII Additional City Civil and Sessions Judge, Bengaluru (CCH 64), in person **on 24.12.2021 at 11.00 AM**, failing which the case will be disposed off by placing you as ex-parte.
Given under my hand and seal of this Court, this 10.11.2021.
By order of the Court, Assistant Registrar, City Civil Court, Bangalore
Advocate for the Petitioner : Chambers of Bhat and Rao
307, 3rd Floor, Richmond Towers, 12, Richmond Road, Bangalore - 560025.
Mob : (+91) 9880508071
e : arjun@arjunrao.in

PUBLIC NOTICE
Our client has negotiated to purchase the Property scheduled below from the Sri Paras Suri, S/o. Sri Dave Raj Suri, Villa B3, Epsilon Layout, Yemalur main road, Bengaluru 560037.
Objections /claims if any to the proposed transaction of sale or in respect of below Schedule Property may be lodged with the undersigned with writing alongwith documentary proof within 10 days from hereof, failing which our client shall finalise the transaction. Objections received beyond the said period shall not be entertained.
SCHEDULE PROPERTY
All that piece and parcel of residential immovable property being the Epsilon Villa No. E-3, BBMP Katha of Property No.23/199/4/18/6/2, formed in the converted land in Sy.No. 119/4, totally measuring 7671 Sq.Ft., consisting of Ground and First Floor, having total built-up area of 6,278 Sq. Ft., Situated at Amani Bellandur Khane Village, Varthur Hobli, earlier Bangalore South Taluk, presently Bangalore East Taluk and bounded as follows: East by : Property bearing Epsilon Villa No. E2; West by : Property belonging to Ms. Sandhya Kasireddy; North by : Road ; South by : Private Property.
H.R. SREEPADA, Advocate
Ram Bhat & Sreepada Associates,
No.20, 6th Cross, 8th Main
Vasanthanagar, Bengaluru.
Mob: 9844076629
Bengaluru Date: 10.11.2021

‘ಪ್ರಾಥಮಿಕ ಶಿಕ್ಷಣದಲ್ಲಿ ಎನ್‌ಇಪಿ: ಮುಂದಿನ ವರ್ಷವೇ ಜಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ಶೈಕ್ಷಣಿಕ ವರ್ಷದಿಂದಲೇ ಪ್ರಾಥಮಿಕ ಶಿಕ್ಷಣದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸಲಾಗುತ್ತದೆ. ಇದಕ್ಕೆ ಸಿದ್ಧತೆಗಳೂ ನಡೆಯುತ್ತಿವೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಮಗ್ರ ಶಿಕ್ಷಣ ಕರ್ನಾಟಕದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ‘ರಾಷ್ಟ್ರೀಯ ಶಿಕ್ಷಣ ನೀತಿ-2020’ ಕುರಿತ ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನ ಉದ್ಘಾಟಿಸಿ ಬುಧವಾರ ಮಾತನಾಡಿದರು.

‘ಎನ್‌ಇಪಿ ಜಾರಿ ಸಂಬಂಧ ಕಾರ್ಯಪಡೆ ರಚಿಸಲಾಗಿದೆ. ನೀತಿಯನ್ನು ಯಾವ ತರಗತಿಯಿಂದ ಹೇಗೆ ಅನುಷ್ಠಾನಗೊಳಿಸಬೇಕು ಎಂಬುದರ ಕುರಿತು ಕಾರ್ಯಪಡೆಯ ತಜ್ಞರು ವರದಿ ನೀಡಲಿದ್ದಾರೆ. ಅದರ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

‘ಎನ್‌ಇಪಿಯಲ್ಲಿ ಅಡಕವಾಗಿರುವ ಹಲವು ಅಂಶಗಳ ಬಗ್ಗೆ ಅರಿಯದೆಯೇ ಅದನ್ನು ಹಲವರು ವಿರೋಧಿಸುತ್ತಿದ್ದಾರೆ. ಹಾಗೆ ವಿರೋಧಿಸುವವರನ್ನು ಮೂರು ಗುಂಪುಗಳನ್ನಾಗಿ ವಿಭಾಗಿಸಬಹುದು. ಅವರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಲೋಪಗಳಿವೆ. ಅದು ಬದಲಾಗಬೇಕು. ಅದು ಇಂದಿನ ಅಗತ್ಯ ಕೂಡ’ ಎಂದು ತಿಳಿಸಿದರು.

‘ಈಗಿನ ಶಿಕ್ಷಣ ಪದ್ಧತಿ ಕುಟುಂಬಗಳನ್ನು ವಿಭಾಗಿಸುವ ವ್ಯವಸ್ಥೆಗೆ ನಾಂದಿ ಹಾಡುತ್ತಿದೆ. 75 ವರ್ಷಗಳ ಶಿಕ್ಷಣ ವ್ಯವಸ್ಥೆಯು ಸ್ವಾರ್ಥದ ಬದುಕನ್ನು ಕಲಿಸಿಕೊಟ್ಟಿದೆ. ಭಾರತೀಯ ಜನಸಂಘದ ಸಂಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿ ಅವರು ಈ ಶಿಕ್ಷಣ ವ್ಯವಸ್ಥೆಯನ್ನು ಅಂದೇ ಟೀಕಿಸಿದ್ದರು. ಪಂಚಶೀಲ ಶಿಕ್ಷಣ ನೀತಿ ಜಾರಿಗೊಳಿಸುವಂತೆ ಆಗ್ರಹಿಸಿದ್ದ ಅವರು ಮೆಕಾಲೆ ಶಿಕ್ಷಣ ವ್ಯವಸ್ಥೆಯನ್ನು ವಿರೋಧಿಸಿದ್ದರು’ ಎಂದು ಹೇಳಿದರು.

ಸಮ್ಮೇಳನದಲ್ಲಿ ಶಿಕ್ಷಣ ತಜ್ಞ ಎಂ.ಕೆ. ಶ್ರೀಧರ್ (ಎಡದಿಂದ ಎರಡನೇಯವರು) ಹಾಗೂ ಸಚಿವ ಬಿ.ಸಿ.ನಾಗೇಶ್ ಸಮಾಲೋಚನೆ ನಡೆಸಿದರು. (ಎಡದಿಂದ)ಶಿಕ್ಷಣ ತಜ್ಞ ಗುರುರಾಜ ಕರಜಗಿ, ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಲೋಕ ಶಿಕ್ಷಣ ಇಲಾಖೆ ನಿರ್ದೇಶಕಿ ಸುಷ್ಮಾ ಗೋಡಬೋಲೆ ಇದ್ದರು – ಪ್ರಜಾವಾಣಿ ಚಿತ್ರ

‘ತರಾತುರಿಯಲ್ಲಿ ಜಾರಿಗೊಳಿಸಿಲ್ಲ’

‘ಎನ್‌ಇಪಿಯನ್ನು ತರಾತುರಿಯಲ್ಲಿ ಜಾರಿಗೊಳಿಸಿಲ್ಲ. ಇದು ಏಕಪಕ್ಷೀಯ ನಿರ್ಧಾರವೂ ಅಲ್ಲ’ ಎಂದು ರಾಷ್ಟ್ರೀಯ ಶಿಕ್ಷಣ ನೀತಿಯ ಕಾರ್ಯಪಡೆ ಸದಸ್ಯ ಎಂ.ಕೆ.ಶ್ರೀಧರ್ ಸ್ಪಷ್ಟಪಡಿಸಿದರು.

‘2015ರಲ್ಲಿ ಉನ್ನತ ಶಿಕ್ಷಣ ಇಲಾಖೆಗೆ 20 ಹಾಗೂ ಶಾಲಾ ಶಿಕ್ಷಣಕ್ಕೆ 13 ಪ್ರಶ್ನಾವಳಿಗಳನ್ನು ನೀಡಲಾಗಿತ್ತು. ಆ ಬಗ್ಗೆ ಎಲ್ಲಾ ಹಂತಗಳಲ್ಲೂ ಚರ್ಚಿಸಿ, ಸಲಹೆಗಳನ್ನೂ ಪಡೆಯಲಾಗಿತ್ತು. 2016ರಲ್ಲಿ ಟಿ.ಎಸ್.ಆರ್.ಸುಬ್ರಹ್ಮಣ್ಯ ಸಮಿತಿ ವರದಿ ನೀಡಿತ್ತು. 2017ರಲ್ಲಿ ಕಸ್ತೂರಿ ರಂಗನ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಅದರ ಆಧಾರದಲ್ಲಿ ಹಲವು ತಿಂಗಳು ಚರ್ಚೆ ನಡೆದು 2 ಲಕ್ಷಕ್ಕೂ ಅಧಿಕ ಅಭಿಪ್ರಾಯಗಳನ್ನು ಕ್ರೋಢೀಕರಿಸಲಾಗಿತ್ತು. ಇಷ್ಟೆಲ್ಲಾ ಪ್ರಕ್ರಿಯೆಗಳ ನಂತರವೇ ನೂತನ ನೀತಿ ಸಿದ್ಧಪಡಿಸಲಾಗಿತ್ತು’ ಎಂದು ತಿಳಿಸಿದರು.

ಪಾಲಿಕೆಯ ಮಾಜಿ ಸದಸ್ಯರ ವಿರುದ್ಧ ದೂರು

ಬೆಂಗಳೂರು: ‘ಕಳಪೆ ಕಾಮಗಾರಿಯಿಂದಾಗಿ ರಸ್ತೆಗಳಲ್ಲಿ ಗುಂಡಿಗಳು ಬೀಳುತ್ತಿವೆ. ಅವು ಅಮಾಯಕರ ಜೀವ ಬಲಿ ಪಡೆಯುತ್ತಿವೆ. ಇದಕ್ಕೆ ಕಾರಣರಾಗಿರುವ ಪಾಲಿಕೆಯ ಮಾಜಿ ಸದಸ್ಯರು ಹಾಗೂ ಅಧಿಕಾರಿಗಳ ವಿರುದ್ಧ ದೂರು ದಾಖಲಿಸುವ ಅಭಿಯಾನ ಕೈಗೊಳ್ಳಲಾಗಿದೆ. ಈವರೆಗೆ ಪಾಲಿಕೆಯ 30ಕ್ಕೂ ಹೆಚ್ಚು ಮಾಜಿ ಸದಸ್ಯರ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರು ನೀಡಲಾಗಿದೆ’ ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ‘ವಾಹನ ಸವಾರರ ಪ್ರಾಣಕ್ಕೆ ಸಂಚಕಾರ ತಂದೊಡ್ಡುತ್ತಿರುವ ಗುಂಡಿಗಳ ಬಗ್ಗೆ ಜನರೇ ಪಕ್ಷಕ್ಕೆ ಮಾಹಿತಿ ನೀಡುತ್ತಿದ್ದಾರೆ. ಅದನ್ನು ಆಧರಿಸಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಗುಂಡಿಗಳಿಗೆ ಕಾರಣರಾದವರ ವಿರುದ್ಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸುತ್ತಿದ್ದಾರೆ. ಇನ್ನು ಹತ್ತು ದಿನದೊಳಗೆ ನಗರದ ರಸ್ತೆಗಳೆಲ್ಲಾ ಗುಂಡಿ ಮುಕ್ತವಾಗಬೇಕು. ಇಲ್ಲದಿದ್ದರೆ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಲಾಗುತ್ತದೆ’ ಎಂದು ಎಚ್ಚರಿಸಿದರು.

‘ಜನರು ರಸ್ತೆ ಹಾಗೂ ಆಸ್ತಿ ತೆರಿಗೆಗಳನ್ನು ಕಟ್ಟುತ್ತಾರೆ. ರಸ್ತೆ ದುರಸ್ತಿಗಾಗಿ ಸರ್ಕಾರದ ಬೊಕ್ಕಸದಿಂದ ಕೋಟ್ಯಂತರ ಮೊತ್ತ ಖರ್ಚಾಗಿದ್ದರೂ ಗುಂಡಿಗಳು ಕಡಿಮೆಯಾಗಲಿಲ್ಲ. ಸರ್ಕಾರದ ಹಣವೆಲ್ಲಾ ಜನಪ್ರತಿನಿಧಿಗಳು, ಗುತ್ತಿಗೆದಾರರ ಪಾಲಾಗುತ್ತಿದೆ’ ಎಂದು ಆರೋಪಿಸಿದರು.

ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ ಸದಂ, ಬೆಂಗಳೂರು ನಗರ ಉಪಾಧ್ಯಕ್ಷ ಬಿ.ಟಿ.ನಾಗಣ್ಣ , ಮುಖಂಡರಾದ ಜಗದೀಶ್ ಚಂದ್ರ, ಗೋಪಿನಾಥ್, ಸುಹಾಸಿನಿ, ಅಶೋಕ್ ಮೃತ್ಯುಂಜಯ ಇದ್ದರು.

ಕೃಷ್ಣ ಸೆಟ್ಟಿ ನೇಮಕ

ಬೆಂಗಳೂರು: ಕಲಾವಿದ ಚಿ.ಸು. ಕೃಷ್ಣ ಸೆಟ್ಟಿ ಅವರನ್ನು ಭೋಪಾಲದ ಭಾರತ್ ಭವನದ ಟ್ರಸ್ಟಿಯಾಗಿ ನೇಮಕ ಮಾಡಲಾಗಿದೆ.



ಚಿ.ಸು. ಕೃಷ್ಣ ಸೆಟ್ಟಿ

ಸಂಗೀತ, ನೃತ್ಯ ಸೇರಿ ವಿವಿಧ ಕಲಾ ಪ್ರಕಾರಗಳ 6 ಸಾಧಕರನ್ನು ಟ್ರಸ್ಟಿಗಳಾಗಿ ಮಧ್ಯಪ್ರದೇಶ ಸರ್ಕಾರವು ನೇಮಕ ಮಾಡಿದೆ. ಪದ್ಮಾ ಸುಬ್ರಹ್ಮಣ್ಯಂ (ನೃತ್ಯ), ಮನೋಜ್ ಜೋಶಿ (ಚಲನಚಿತ್ರ), ವಿಶ್ವಮೋಹನ್ ಭಟ್ (ಸಂಗೀತ), ಭೂರೀ ಬಾಯಿ (ಚಿತ್ರಕಲೆ) ಹಾಗೂ ವಿಜಯ್ ಮನೋಹರ ತಿವಾರಿ (ಸಾಹಿತ್ಯ) ಇತರ ಟ್ರಸ್ಟಿಗಳಾಗಿದ್ದಾರೆ.

ಭಾರತ ಸರ್ಕಾರ
ಜಲಶಕ್ತಿ ಸಚಿವಾಲಯ
ಜಲ ಸಂಪನ್ಮೂಲಗಳು, ನದಿ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ ಇಲಾಖೆ
ನ್ಯಾಷನಲ್ ವಾಟರ್ ಮಿಷನ್
ಖಾಲಿ ಹುದ್ದೆಗೆ ಸುತ್ತೋಲೆ
ಜಲಶಕ್ತಿ ಸಚಿವಾಲಯದ ಜಲ ಸಂಪನ್ಮೂಲಗಳು, ನದಿ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ ಇಲಾಖೆಯ ನ್ಯಾಷನಲ್ ವಾಟರ್ ಮಿಷನ್‌ನಲ್ಲಿ ಸಮಾಲೋಚಕರು/ ಯುವ ವೃತ್ತಿಪರಿಣಿತರನ್ನು ಗುತ್ತಿಗೆ ಆಧಾರದಲ್ಲಿ ತೊಡಗಿಸಿಕೊಳ್ಳಲು ಆಸಕ್ತಿಯುಳ್ಳ ಮತ್ತು ಅರ್ಹ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಯೋಜನೆ ಸ್ಥಳ ನವದೆಹಲಿ ಆಗಿರುತ್ತದೆ. ಖಾಲಿ ಹುದ್ದೆ ಸುತ್ತೋಲೆಯ ಸಂಪೂರ್ಣ ವಿವರಗಳು mowr.gov.in ಮತ್ತು nwm.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 30 ದಿನಗಳು ಅರ್ಜಿ ಸ್ವೀಕರಿಸುವ ಅಂತಿಮ ದಿನವಾಗಿರುತ್ತದೆ.
davp 45101/11/0003/2122

‘ಹಕ್ಕಿ ಕಥೆ’ ನಾಟಕದ ದೃಶ್ಯ

ಇದೇ 14ಕ್ಕೆ ‘ಹಕ್ಕಿ ಕಥೆ’ ನಾಟಕ ಪ್ರದರ್ಶನ

ಬೆಂಗಳೂರು: ಶಿವಮೊಗ್ಗದ ರಂಗಾಯಣವು ಇದೇ 14ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7 ಗಂಟೆಗೆ ರಂಗ ಶಂಕರದಲ್ಲಿ ‘ಹಕ್ಕಿ ಕಥೆ’ ಬೊಂಬೆ ನಾಟಕ ಪ್ರದರ್ಶನವನ್ನು ಹಮ್ಮಿಕೊಂಡಿದೆ.

‘ಕವಿ ನಾ. ಡಿಸೋಜಾ ಅವರ ‘ಹಕ್ಕಿಗೊಂದು ಗೂಡು ಕೊಡಿ’ ಕಾದಂಬರಿಯನ್ನು ಈ ನಾಟಕ ಆಧರಿಸಿದೆ. ಎಸ್. ಮಾಲತಿ ಅವರು ಕಾದಂಬರಿಯನ್ನು ನಾಟಕಕ್ಕೆ ರೂಪಾಂತರಿಸಿದ್ದಾರೆ. ಪ್ರಕೃತಿಯ ಇತರ ಜೀವಗಳ ಜೀವನದ ಮೇಲೆ ಮನುಷ್ಯನ ಹಸ್ತಕ್ಷೇಪ, ಪ್ರಕೃತಿ ಕೊಡುವ ತಿರುಗೇಟನ್ನು ಈ ನಾಟಕ ಮನಗಾಣಿಸುತ್ತದೆ’ ಎಂದು ರಂಗಾಯಣದ ನಿರ್ದೇಶಕ ಸಂದೇಶ್ ಜವಳಿ ತಿಳಿಸಿದ್ದಾರೆ.

‘ಜಪಾನಿನ ಪ್ರಸಿದ್ಧ ಬುನಾರುಕ ಶೈಲಿಯ ಬೊಂಬೆಯಾಟದ ಕಲೆಯನ್ನು ಈ ನಾಟಕದಲ್ಲಿ ಅಳವಡಿಸಿರುವುದು ವಿಶೇಷ. ಗಣೇಶ್ ಮಂದಾರ್ತಿ ಮತ್ತು ಶ್ರವಣ್ ಹೆಗ್ಗೋಡು ಅವರು ಈ ನಾಟಕವನ್ನು ನಿರ್ದೇಶಿಸಿದ್ದಾರೆ. ಪ್ರತಿ ಪ್ರದರ್ಶನಕ್ಕೆ ₹ 200 ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ರಂಗಶಂಕರದ ಕೌಂಟರ್ ಹಾಗೂ bookmyshow.comನಲ್ಲಿ ಟಿಕೆಟ್‌ಗಳನ್ನು ಪಡೆಯಬಹುದು’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕಸಾಪ ಚುನಾವಣೆ: ಸುಧೀಂದ್ರ ರಾವ್ ಹಿಂದಕ್ಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಅಧ್ಯಕ್ಷ ಸ್ಥಾನದ ಚುನಾವಣೆ ಸ್ಪರ್ಧೆಯಲ್ಲಿದ್ದ ಅಭ್ಯರ್ಥಿ ನ.ಶ್ರೀ.ಸುಧೀಂದ್ರ ರಾವ್ ಅವರು ಚುನಾವಣಾ ಕಣದಿಂದ ಹಿಂದೆ ಸರಿದಿದ್ದು, ಮಹಿಳಾ ಅಭ್ಯರ್ಥಿ-ಸರಸ್ವತಿ ಚಿಮ್ಮಲಗಿ ಅವರಿಗೆ ಬೆಂಬಲ ನೀಡುವುದಾಗಿ ತಿಳಿಸಿದ್ದಾರೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಮೊದಲ ಬಾರಿಗೆ ಮಹಿಳೆಯೊಬ್ಬರು ಅಧ್ಯಕ್ಷ ಸ್ಥಾನವನ್ನುಅಲಂಕರಿಸಬೇಕುಎನ್ನುವಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದೇನೆ’ ಎಂದು ಹೇಳಿದರು.

‘ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಲ್ಲಿ ಹಣ ಮತ್ತು ಜಾತಿ ಬಲಗಳ ಪ್ರತಿಷ್ಠೆ ಪ್ರದರ್ಶನಕ್ಕೆ ವೇದಿಕೆಯಾಗುತ್ತಿದೆ. ಪರಿಷತ್ತಿನ ಘನತೆಯನ್ನು ಕಡಿಮೆ ಮಾಡುವ ಶಕ್ತಿಗಳು ಅಧಿಕಾರವನ್ನೇರುವ ಅಪಾಯದ ಸೂಚನೆಗಳು ಕಂಡುಬರುತ್ತಿವೆ’ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

AMRITAVIDYALAYAM, MANGALORE requires Principal (Female) Qualification: Trained (B.Ed.) Post Graduate Experience:At least 5 years of teaching experience in a CBSE school and also handling administrative Responsibilities. Candidates should have good leadership and excellent communication skills.The incumbent will be expected to maintain the high teaching standards aswell as Indian traditions of the school. Apply through email withpassport size photo and copies of relevant certificates, testimonials to hrd@amritavidyalayam.org

Wanted

HANDSOME EARNING opportunity Reputed organization is looking for Retired Gazetted officers and Income tax officers call Madhu- 7975812349

BUSINESS

Business to Business

Finance

INVESTMENT NEEDED on land which is on SALE. Owner ready to Share Rs 200/- perSqft as PROFIT. Contact 7676770503/ 9741019028

Financial Services

'AISHWARYA Group' (Bangalore). Invest Minimum 50K to 5Lakhs in Trading, Businesses. Monthly 10% Secured Fixed Returns. Investors, Referral Welcome. Regular Income. Contact:- 7892818780.

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

RENTAL PROPERTIES

Accommodation Available

Commercial

BUILDING AVAILABLE for rent 24000 sq feet 3 floors all together at prime location in Magadi Road right opposite to Magadi metro station Suitable for pharmacy godown , Distributors ,godown Bangalore 560023. 9448471340, 9900021340

HEALTH SPECIAL

REAL ESTATE SELLING

Sites

Out-Station

MANDYA:PRIME RESIDENTIAL site 100x60ft for sale in BandiGowda Layout Mandya Contact 8105077555

PERSONAL

Change of Name

I, JUJARAY AMARNATH S/o. J. Vishwanatha Rao R/a #156, Dwarakamayee, 1st Lane, G Ramaiah Enclave, Hesaragatta Road, Vidyaranyapura, Bangalore North- 560097 Declare That in My Son Birth Certificate, My Son Name Wrongly Mentioned as SAI TEJAS JUJARAY Instead of JUJARAY SAI TEJAS and My Wife Name Wrongly Mentioned as NAGAVENI AMARNATH J. instead of JUJARAY NAGAVENI Vide Affidavit Dated: 22.10.2021 Before Notary H.K. Gopala Gowda, Bengaluru.

I BAPUJEE. B, residing at No. 533/25, 13th Cross, 10th Main Road, Vyalikaval, Bangalore 560 003, declare that my minor daughter's old name was B.K. Mokitha Varsha (bearing Passport No. N5771596). Her new name will be spelt as B.K. Mokitha Varsa and both the names are of one and the same person as executed vide affidavit dated: 09.11.2021 sworn before Notary B.R. Shashikala.

I, ASHAJABINA, D/o Mahaboobsab, W/o Parveez Ahmed, residing at No.40,3rd Cross, Kurlappa Layout, Kogilu Cross, Yelahanka, Bengaluru-560064 have changed my name to AYESHA JABINA, vide affidavit dated 09-11-2021 before Notary SIVAKUMARA M N, Bengaluru.

I, R. VINAY/ VINAY. R have changed my name as VISHAL CHIRANJIVI, vide affidavit dated 10-11-2021 before Notary H.S. Dharma Prasad, Bangalore

I, K. GAYATHRI, daughter of late Krishnappa. S resident of Shri Manjunatha Nilaya, Near Nandshree Chowtry, Basaveshwara Layout, Hosakote, Bangalore-562114 have changed my name to RANJITHA. K vide affidavit 10/11/2021 sworn before notary Ambika. S, Bangalore.

I, A.RAJASHEKAR aged 42 years, residing at No.69/1, Sarjapura Main Road, Kaikondrahalli, Bangalore-560035 have changed my to K.A. RAJASHEKAR vide affidavit dated10.11.2021 before Notary K.V.Mani, Bangalore. Henceforth I shall be called as K.A. RAJASHEKAR only.

I, ROHIET SUCHDDEV, Residing at No. 3, Flat No. 304, 3rd Floor, Express Residency, Basappa Road, Shanthinagar, Near Saibaba Store, Wilson Garden, Bengaluru- 560027, Karnataka India. have changed my name from ROHIT RAJU SUCHDEV to ROHIET SUCHDDEV vide affidavit dated 10/11/2021 before notary H.G. VENKATARAMU, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
(ಕಂಪನಿಗಳ ಕಾಯಿದೆ 2013ರಡಿಯಲ್ಲಿ ಸ್ಥಾಪಿತವಾಗಿರುವ ಸಂಸ್ಥೆ)
ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175
Bengaluru SMART CITY
ವ್ಯವಸ್ಥಾಪಕ ನಿರ್ದೇಶಕರವರ ಕಚೇರಿ, #30/1, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.
ಸಂಖ್ಯೆ: ಬೆಂಸ್ಮಾಸಿಲಿ/ಟಿಎಸ್/ಕಾಪಾಅ–02/ದರಪಟ್ಟಿ–11/2021–22 ದಿನಾಂಕ: 09.11.2021

ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ ಜಂಕ್ಷನ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಕ್ತ ದರಗಳಿಗಾಗಿ ಕೊಟೇಷನ್ ಆಹ್ವಾನ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು–02ರವರು **“ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ ಜಂಕ್ಷನ್‌ನಲ್ಲಿ ಉದ್ದೇಶಿಸಿರುವ ಅಭಿವೃದ್ಧಿ ಕಾಮಗಾರಿ ಯೋಜನೆಗಾಗಿ** ಗುರುತಿಸಲ್ಪಟ್ಟಿರುವ ಸಂಸ್ಥೆಗಳಿಂದ ಅನುಬಂಧದಲ್ಲಿ ವಿವರಿಸಿರುವ ಅಂಶಗಳಿಗೆ ದರಪಟ್ಟಿ / ಕೊಟೇಷನ್‌ಗಳನ್ನು ಆಹ್ವಾನಿಸಿದ್ದಾರೆ. ಸಲ್ಲಿಸುವ ದರಗಳನ್ನು ಅಂದಾಜುಪಟ್ಟಿ ಸಿದ್ಧಪಡಿಸುವುದಕ್ಕಾಗಿ ಮಾತ್ರ ಪರಿಗಣಿಸಲಾಗುತ್ತದೆ. (ಜಿಎಸ್‌ಟಿ ಹೊರತುಪಡಿಸಿ) **ವೇಳಾಪಟ್ಟಿಗಳ ವಿವರ**

ಕ್ರ ಸಂ	ದರಪಟ್ಟಿಗಳ ವಿವರಣೆ	ಅನುಬಂಧ ಬುಕ್‌ಲೆಟ್ ವಿತರಣೆ ಮಾಡುವ ದಿನಾಂಕ	ದರ ಪಟ್ಟಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ದರ ಪಟ್ಟಿಗಳನ್ನು ತೆರೆಯುವ ದಿನಾಂಕ	ಇತರೆ ವಿವರಣೆಗಳು
1.	ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ ಜಂಕ್ಷನ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಳು	12.11.2021ರಂದು ಬೆಳಿಗ್ಗೆ 10:00 ರಿಂದ ಸಂಜೆ 4:00 ಗಂಟೆಯವರೆಗೆ – ಮೆ॥ ಐಡೆಕ್ ಪಿಎಂಸಿ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, #30/1, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052	19.11.2021 ರ ಸಂಜೆ 4:00 ಗಂಟೆಗೆ	19.11.2021 ರ ಸಂಜೆ 4:30 ಗಂಟೆಗೆ	ಕೊಟೇಷನ್‌ನಲ್ಲಿ ಸ್ಪರ್ಧಾತ್ಮಕವಾಗಿ ನಮೂದಿಸುವ ದರಗಳನ್ನು ಅಂದಾಜುಪಟ್ಟಿ ಸಿದ್ಧಪಡಿಸಲು ಪರಿಗಣಿಸಲಾಗುತ್ತದೆ

ಟಿಪ್ಪಣಿ:– ಯಾವುದೇ ಮಾಹಿತಿ ಮತ್ತು ಆಕ್ಷೇಪಣೆಗಳಿಗಾಗಿ ಸಂಪರ್ಕಿಸಿರಿ, ಶ್ರೀ ಕುಮಾರ್ ಎಸ್‌ಆರ್‌ಎಸ್, 9343709790 ಮೆ॥ ಐಡೆಕ್ ಪಿಎಂಸಿ, ವ್ಯವಸ್ಥಾಪಕ ನಿರ್ದೇಶಕರ ಕಚೇರಿ,ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಇ–ಮೇಲ್: kumar.srs@ideck.in
ಸಹಿ/– ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

AstraZeneca
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್
CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ
ಔಟರ್ ರಿಂಗ್ ರೋಡ್, ಬೆಂಗಳೂರು – 560045
ದೂ.: +91 80 6774 8000. ವೆಬ್: www.astrazeneca.com/india

30ನೇ ಸೆಪ್ಟೆಂಬರ್, 2021ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಆರು ತಿಂಗಳಿಗೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಲಕ್ಷಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	30/09/2021ಕ್ಕೆ ಕೊನೆಗೊಂಡ 3 ತಿಂಗಳಿಗೆ	30/9/2021ಕ್ಕೆ ಕೊನೆಗೊಂಡ ಪ್ರಸಕ್ತ ಅವಧಿಯ ವರ್ಷದಲ್ಲಿನ ಅಂಕಿಅಂಶಗಳು	30/09/2020ಕ್ಕೆ ಕೊನೆಗೊಂಡ 3 ತಿಂಗಳಿಗೆ ಹಿಂದಿನ ಹಿಂದಿನ ಅವಧಿಯಂತೆ
		ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	20,055.09	37,885.27	21,418.96
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	1,623.71	2,974.11	3,556.99
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	1,194.70	2,219.03	2,633.84
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	1,160.05	2,175.16	2,630.65
5	ಈಕ್ವಿಟಿ ಷೇರು ಬಂಡವಾಳ	500.00	500.00	500.00
6	ಮೀಸಲುಗಳು (ಬ್ಯಾಲೆನ್ಸ್ ಷೀಟ್‌ನಲ್ಲಿ ತೋರಿಸಿರುವ ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)	–	–	–
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	4.78	8.88	10.54

ಟಿಪ್ಪಣಿ:
1. ಇಲ್ಲಿ ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಬಂಧನೆಗಳು, 2015 ನಿಬಂಧನೆ 33ರ ಅನ್ವಯ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಸವಿವರವಾದ ವರದಿಯ ಉದ್ಧೃತ ಭಾಗ. ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ವರದಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟುಗಳಲ್ಲಿ (www.nseindia.com, www.bseindia.com) ಮತ್ತು ಕಂಪನಿಯ ವೆಬ್‌ಸೈಟಿನಲ್ಲಿ (www.astrazeneca.com/india) ಲಭ್ಯವಿದೆ.
2. ಈ ಹೇಳಿಕೆಯನ್ನು ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 133ರಲ್ಲಿ ಹೇಳಲಾಗಿರುವ ಕಂಪನಿಗಳ (ಭಾರತೀಯ ಅಕೌಂಟಿಂಗ್ ಮಾನಗಳು) ನಿಯಮಗಳು, 2015 (Ind AS) ಹಾಗೂ ಅನ್ವಯಿಸುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಅಕೌಂಟಿಂಗ್ ಅಭ್ಯಾಸಗಳು ಮತ್ತು ಪಾಲಿಸಿಗಳ ಅನುಸಾರ ಸಿದ್ಧಪಡಿಸಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ
ಗಗನ್‌ದೀಪ್ ಸಿಂಗ್ ಬೇಡಿ
ಮ್ಯಾನೇಜಿಂಗ್ ಡೈರೆಕ್ಟರ್
ಸ್ಥಳ: ಬೆಂಗಳೂರು
ದಿನಾಂಕ: 09 ನವಂಬರ್, 2021

ಮೇಳಕ್ಕೆ ಇಂದು ಚಾಲನೆ • ರೈತರಿಗಾಗಿ ಸಿದ್ಧಗೊಂಡಿರುವ ಪ್ರಾತ್ಯಕ್ಷಿಕೆಗಳು

‘ಕೃಷಿ ಮೇಳ’ಕ್ಕೆ ಸಜ್ಜಾದ ಜಿಕೆವಿಕೆ ಆವರಣ

ಪ್ರಜಾವಾಣಿ ವಾರ್ತೆ

‘ಕೃಷಿ ಮೇಳ’ಕ್ಕಾಗಿ ಜಿಕೆವಿಕೆ ಆವರಣದಲ್ಲಿ ಸಿದ್ಧಗೊಂಡಿರುವ ಸೂರ್ಯಕಾಂತಿ ತೋಟದಲ್ಲಿ ವಿದ್ಯಾರ್ಥಿಗಳು ಬುಧವಾರ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯವು ನ.11ರಿಂದ 14ರವರೆಗೆ ಆಯೋಜಿಸಿರುವ ‘ಕೃಷಿ ಮೇಳ’ಕ್ಕಾಗಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣ ಸಜ್ಜಾಗಿದೆ.

ಬುಧವಾರವೇ ಮೇಳಕ್ಕೆ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದ್ದು, ವೇದಿಕೆ ಕಾರ್ಯಕ್ರಮ ನಡೆಯುವ ಬೃಹತ್ ಸಭಾಂಗಣ ಹಾಗೂ 500ಕ್ಕೂ ಹೆಚ್ಚು ಮಳಿಗೆಗಳನ್ನು ಸಿದ್ಧಪಡಿಸಲಾಗಿದೆ.

ಮೇಳಕ್ಕೆ ಬರುವವರ ವಾಹನಗಳ ನಿಲುಗಡೆಗಾಗಿ ಅಲ್ಲಲ್ಲಿ ಸ್ಥಳಗಳನ್ನು ನಿಗದಿಪಡಿಸಲಾಗಿದ್ದು, ಒಂದೇ ಕಡೆ ಹೆಚ್ಚು ಜನ ಸೇರುವುದನ್ನು ತಡೆಯಲು ಸಭಾಂಗಣ ಹಾಗೂ ಮಳಿಗೆಗಳನ್ನು ವಿಶಾಲವಾದ ಸ್ಥಳದಲ್ಲಿ ನಿರ್ಮಿಸಲಾಗಿದೆ.

ಮೇಳಕ್ಕೆ ಬರುವ ರೈತರಿಗೆ ತೋಟದಲ್ಲೇ ಮಾಹಿತಿ ನೀಡುವ ಉದ್ದೇಶದಿಂದ ಆವರಣದಲ್ಲಿ ಬೆಳೆಗಳ ಪ್ರದರ್ಶನ ತಾಕುಗಳನ್ನು ಹಲವು ತಿಂಗಳ ಹಿಂದಿನಿಂದಲೇ ಸಿದ್ಧಪಡಿಸಲಾಗಿದೆ. ತೋಟದಲ್ಲಿ ರೈತರು ಸಂಚರಿಸಲು ಅನುಕೂಲವಾಗುವಂತೆ ಮಾರ್ಗಗಳನ್ನು ಸಜ್ಜುಗೊಳಿಸಲಾಗಿದೆ.

ವಿಶ್ವವಿದ್ಯಾಲಯದ ಕೆಲಸಗಾರರು ಬುಧವಾರವೇ ಎಲ್ಲ ಪ್ರದರ್ಶನ ತಾಕುಗಳನ್ನು ಸ್ವಚ್ಛಗೊಳಿಸಿದರು. ಪ್ರತಿ ತೋಟದಲ್ಲಿ ವಿಶ್ವವಿದ್ಯಾಲಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ರೈತರಿಗೆ ಮಾಹಿತಿ ನೀಡಲಿದ್ದಾರೆ. ದೂರದ ಊರಿನ ರೈತರಿಗಾಗಿ ಈ ಬಾರಿಯೂ ಆನ್‌ಲೈನ್ ಮೂಲಕ ಕೃಷಿ ಮೇಳ ವೀಕ್ಷಣೆಗೆ ತಾಂತ್ರಿಕ ವ್ಯವಸ್ಥೆಗಳನ್ನೂ ಕೈಗೊಳ್ಳಲಾಗಿದೆ.

ಮೇಳಕ್ಕೆ ಮಳೆ ಅಡ್ಡಿಯಾಗದು: ಹವಾಮಾನ ಇಲಾಖೆಯ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಗುರುವಾರ (ನ.11) ಮಳೆಯಾಗುವ ಮುನ್ಸೂಚನೆ ಇದೆ. ಆದರೆ. ಮಳೆಯಿಂದ ಕೃಷಿ ಮೇಳಕ್ಕೆ ಯಾವುದೇ ರೀತಿ ಅಡ್ಡಿಯಾಗುವುದಿಲ್ಲ. ಅದಕ್ಕೆ ಬೇಕಾದ ಎಲ್ಲ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

‘ಮೇಳಕ್ಕೆ ಬರುವ ಜನರಿಗೆ ಮಳೆಯಿಂದ ಸಮಸ್ಯೆಯಾಗದಂತೆ ಈ ಬಾರಿ ವೇದಿಕೆ ಕಾರ್ಯಕ್ರಮ ನಡೆಯುವ ಸಭಾಂಗಣ ಹಾಗೂ ಮಳಿಗೆಗಳನ್ನು ಜಲನಿರೋಧಕ (ವಾಟರ್‌ಪ್ರೂಫ್) ಹೊದಿಕೆಗಳಿಂದ ಸಿದ್ಧಪಡಿಸಲಾಗಿದೆ. ಜಿಕೆವಿಕೆ ಆವರಣದಲ್ಲಿ ಸಂಚಾರಕ್ಕೆ ಯೋಗ್ಯವಾದ ಡಾಂಬರು ರಸ್ತೆಗಳೇ ಇವೆ. ಒಂದು ವೇಳೆ ಮಳೆ ಬಂದರೂ ಜನ ಆತಂಕ ಪಡುವ ಅಗತ್ಯವಿಲ್ಲ’ ಎಂದು ವಿಶ್ವವಿದ್ಯಾಲಯದ ಕೃಷಿ ಮಾಹಿತಿ ಘಟಕದ ಮುಖ್ಯಸ್ಥ ಕೆ.ಶಿವರಾಮು ತಿಳಿಸಿದರು.

ಕೃಷಿ ಮೇಳದ ಮುನ್ನಾದಿನವಾದ ಬುಧವಾರ ಕಾರ್ಮಿಕರು ಅಂತಿಮ ಸಿದ್ಧತೆಯಲ್ಲಿ ತೊಡಗಿರುವ ದೃಶ್ಯ ಕಂಡುಬಂತು

ಪ್ರದರ್ಶನ ಮಳಿಗೆಗಳಲ್ಲಿ ಏನೇನು?

ರೈತರಿಗಾಗಿ ಮೇಳದಲ್ಲಿ 500ಕ್ಕೂ ಹೆಚ್ಚು ಪ್ರದರ್ಶನ ಮಳಿಗೆಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ. ಕೃಷಿ ಪರಿಕರ ಸಂಸ್ಥೆಗಳ ನವೋದ್ಯಮಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆ ಮತ್ತು ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳ ಮಳಿಗೆಗಳು, ಕೃಷಿ ಮತ್ತು ನೀರಾವರಿ ಉಪಕರಣಗಳು, ಟ್ರ್ಯಾಕ್ಟರ್ ಹಾಗೂ ಕೃಷಿ ಯಂತ್ರೋಪಕರಣಗಳು, ಸಾವಯವ ವಸ್ತುಗಳು, ಅಲಂಕಾರಿಕ, ಔಷಧೀಯ ಹಾಗೂ ಹಣ್ಣಿನ ಸಸಿಗಳು, ಬೇಕರಿ ಮತ್ತು ತಿನಿಸುಗಳು, ವಿಚಾರಣೆ, ವೈದ್ಯಕೀಯ, ಸಮಾಲೋಚನೆಯ ಮಳಿಗೆಗಳು ಈ ಬಾರಿ ಇರಲಿವೆ.

ಹಜ್ ಯಾತ್ರೆ: ಅರ್ಜಿ ಸಲ್ಲಿಸಲು ಜ.31ರವರೆಗೆ ಅವಕಾಶ– ಜೊಲ್ಲೆ

ಬೆಂಗಳೂರು: ಕೋವಿಡ್ ಕಾರಣದಿಂದ ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದ ಹಜ್ ಯಾತ್ರೆ ಪ್ರಕ್ರಿಯೆಗೆ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ನಗರದ ಹಜ್ ಭವನದಲ್ಲಿ ಬುಧವಾರ ಚಾಲನೆ ನೀಡಿದರು.

‘ಯಾತ್ರೆಗೆ ಇದೇ 1ರಿಂದಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕಾರ್ಯ ಆರಂಭವಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿರುವ ಸುಲಭವಾಗಿ ಅರ್ಜಿ ಸಲ್ಲಿಸಬಹುದು. ಮುಂದಿನ ಜ. 31ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ಮುಂದಿನ ಜುಲೈ ತಿಂಗಳಲ್ಲಿ ಮುಖ್ಯಮಂತ್ರಿ ಸಮ್ಮುಖದಲ್ಲಿ ಲಾಟರಿ ನಡೆಸಿ, ಯಾತ್ರಿಕರನ್ನು ಆಯ್ಕೆ ಮಾಡಿ ಯಾತ್ರೆ ಆಯೋಜಿಸಲಾಗುವುದು’ ಎಂದು ಜೊಲ್ಲೆ ತಿಳಿಸಿದರು.

ಸಭೆ: ಯಾತ್ರೆಗೆ ಸಂಬಂಧಿಸಿದಂತೆ ರಾಜ್ಯ ಹಜ್ ಸಮಿತಿಯ ಜೊತೆ ಹಜ್ ಭವನದಲ್ಲಿ ಸಚಿವರು ಸಭೆ ನಡೆಸಿದರು. ಸಭೆಯಲ್ಲಿ ಸಮಿತಿಯ ನೂತನ ಅಧ್ಯಕ್ಷ ರವೂಫುದ್ದೀನ್ ಕಚೇರಿವಾಲೆ, ಸಮಿತಿಯ ಸದಸ್ಯರೂ ಆಗಿರುವ ರಾಜ್ಯಸಭಾ ಸದಸ್ಯ ಸೈಯದ್ ನಾಸಿರ್ ಹುಸೇನ್, ಶಾಸಕಿ ಹಾಗೂ ಸಮಿತಿ ಸದಸ್ಯೆ ಖಾನಿಜ್ ಫಾತಿಮಾ ಇದ್ದರು.

8 ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡು ಹಾಗೂ ಆಂಧ್ರಪ್ರದೇಶ ರಾಜ್ಯಗಳ ಕರಾವಳಿ ಭಾಗದಲ್ಲಿ ವಾಯುಭಾರ ಕುಸಿತ ಆಗುವ ಸಾಧ್ಯತೆ ಇರುವುದರಿಂದ ನ.11ರಂದು ರಾಜ್ಯದ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಬಂಗಾಳಕೊಲ್ಲಿಯಲ್ಲಿ ಉಂಟಾಗಿದ್ದ ವಾಯುಭಾರ ಕುಸಿತವು ತಮಿಳುನಾಡು ಹಾಗೂ ಆಂಧ್ರಪ್ರದೇಶ ರಾಜ್ಯಗಳ ಕರಾವಳಿ ಕಡೆಗೆ ಗುರುವಾರ ಬರಲಿದೆ. ಇದರ ಪ್ರಬಲತೆಯೂ ಹೆಚ್ಚಾಗಿರುವುದರಿಂದ ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಳೆಯಾಗುವ ಸಂಭವ ಹೆಚ್ಚಾಗಿದೆ. ಎರಡು ದಿನಗಳ ನಂತರ ಇದರ ಪ್ರಬಲತೆ ತಗ್ಗಿ, ಮಳೆ ಕಡಿಮೆಯಾಗಲಿದೆ’ ಎಂದು ಹವಾಮಾನ ತಜ್ಞ ಸದಾನಂದ ಅಡಿಗ ವಿವರಿಸಿದರು.

ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಅನ್ವೇಷಣೆ

ಬರಲಿದೆ ರೇಷ್ಮೆಗೂಡು ಬಿಡಿಸುವ ಯಂತ್ರ

• ಮನೋಹರ್ ಎಂ.

ಬೆಂಗಳೂರು: ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗುವಂತೆ ಚಂದ್ರಿಕೆಯಿಂದ ಗೂಡು ಬಿಡಿಸುವ ಬ್ಯಾಟರಿ ಚಾಲಿತ ಯಂತ್ರವನ್ನು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿರುವ (ಜಿಕೆವಿಕೆ) ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಸಂಸ್ಕರಣೆ ಮತ್ತು ಆಹಾರ ಎಂಜಿನಿಯರಿಂಗ್ ವಿಭಾಗ ಅಭಿವೃದ್ಧಿಪಡಿಸಿದೆ.

ರೇಷ್ಮೆ ಗೂಡನ್ನು ಚಂದ್ರಿಕೆಯಿಂದ ಬಿಡಿಸಲು ಸಾಕಷ್ಟು ಸಮಯ ಬೇಕಿತ್ತು. ಈ ಯಂತ್ರದಿಂದ ಕೆಲವೇ ನಿಮಿಷಗಳಲ್ಲಿ ಚಂದ್ರಿಕೆಯಲ್ಲಿರುವ ರೇಷ್ಮೆಗೂಡನ್ನು ಸುಲಭವಾಗಿ ಬಿಡಿಸಬಹುದು.

‘ರೇಷ್ಮೆ ಬೆಳೆಗಾರರು ಗೂಡನ್ನು ಬರಿಗೈನಲ್ಲೇ ಬಿಡಿಸುತ್ತಾರೆ. ಚಂದ್ರಿಕೆಯಲ್ಲಿರುವ ಮುಳ್ಳಿನಂತಹ ವಸ್ತುಗಳನ್ನು ಕೈಗೆ ಹಾನಿ ಮಾಡುತ್ತವೆ. ಈ ವೇಳೆ ಹಲವರು ಗಾಯಗೊಳ್ಳುತ್ತಾರೆ. ಗೂಡು ಬಿಡಿಸುವ ಪ್ರಕ್ರಿಯೆಯೂ ವಿಳಂಬವಾಗುತ್ತದೆ. ಈ ಕಾರಣಗಳಿಂದ ಗೂಡು ಬಿಡಿಸಲು ಕಾರ್ಮಿಕರ ಲಭ್ಯತೆಯೂ ಕ್ಷೀಣಿಸುತ್ತಿದೆ. ರೇಷ್ಮೆ ಬೆಳೆಗಾರರ ಈ ಎಲ್ಲ ಸಂಕಷ್ಟಗಳೇ ಈ ಯಂತ್ರವನ್ನು ಅಭಿವೃದ್ಧಿಪಡಿಸಲು ನನಗೆ ಪ್ರೇರಣೆ ನೀಡಿತು’ ಎಂದು ಈ ಸಾಧನ ಅಭಿವೃದ್ಧಿಪಡಿಸಿರುವ ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಸಂಸ್ಕರಣೆ ಮತ್ತು ಆಹಾರ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ದ್ರೋಣಾಚಾರಿ ಮಾನ್ವಿ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಜಾವಾಣಿ ವಿಶೇಷ

‘ನಾಲ್ಕು ವರ್ಷಗಳ ಪರಿಶ್ರಮದಿಂದಾಗಿ ಯಂತ್ರ ಸಿದ್ಧಗೊಂಡಿದೆ. ರೇಷ್ಮೆ ಬೆಳೆಗಾರರ ಅನುಕೂಲಕ್ಕಾಗಿ ಇಂತಹ ಯಂತ್ರ ಈವರೆಗೆ ಎಲ್ಲಿಯೂ ಅಭಿವೃದ್ಧಿಗೊಂಡಿಲ್ಲ. ಈ ಯಂತ್ರಕ್ಕೆ ಪೇಟೆಂಟ್ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ. ಹಾಗಾಗಿ, ತಾಂತ್ರಿಕ ವಿವರಗಳನ್ನು ಬಹಿರಂಗಪಡಿಸಲಾರೆ. ಶೀಘ್ರದಲ್ಲೇ ಈ ಯಂತ್ರ ರೇಷ್ಮೆ ಬೆಳೆಗಾರರ ಕೈಸೇರಲಿದೆ’ ಎಂದು ಸಂತಸ ಹಂಚಿಕೊಂಡರು.

‘ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಸಮಸ್ಯೆ ಇರುವ ಕಾರಣಕ್ಕೆ ವಿದ್ಯುತ್ ಚಾಲಿತ ಯಂತ್ರದ ಬದಲಿಗೆ, ಬ್ಯಾಟರಿ ಚಾಲಿತ ಯಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ಒಂದು ಚಂದ್ರಿಕೆಯಿಂದ ಗೂಡು ಬಿಡಿಸಲು ಗರಿಷ್ಠ 35 ನಿಮಿಷಗಳಷ್ಟು ಸಮಯ ಬೇಕು. ಆದರೆ, ಈ ಯಂತ್ರದಿಂದ ಕೇವಲ 7 ನಿಮಿಷಗಳಲ್ಲಿ ಗೂಡನ್ನು ಸುಲಭವಾಗಿ ಬಿಡಿಸಬಹುದು. ಇದರಿಂದ ರೇಷ್ಮೆ ಬೆಳೆಗಾರರ ಸಮಯವೂ ಉಳಿಯಲಿದೆ’ ಎಂದು ವಿವರಿಸಿದರು.

‘ಈ ಯಂತ್ರವನ್ನು ಸುಲಭವಾಗಿ ಒಬ್ಬ ವ್ಯಕ್ತಿ ಕೈಯಲ್ಲಿ ಹಿಡಿದು ನಿರ್ವಹಿಸಬಹುದು. ಹಾಗಾಗಿ, ಹೆಚ್ಚು ಭಾರವೂ ಇರುವುದಿಲ್ಲ. ಇದೇ ಸಾಧನದಿಂದ ಚಂದ್ರಿಕೆಗಳನ್ನು ಶುಚಿಗೊಳಿಸಬಹುದು. ಒಂದು ಯಂತ್ರ ಹಲವು ರೀತಿಯಲ್ಲಿ ಕೆಲಸ ಮಾಡುವಂತೆ ಸಿದ್ಧಪಡಿಸಿದ್ದೇನೆ. ಸದ್ಯ ಈ ಯಂತ್ರ ಅಂದಾಜು ₹9 ಸಾವಿರ ದರಕ್ಕೆ ರೇಷ್ಮೆ ಬೆಳೆಗಾರರಿಗೆ ಲಭ್ಯವಾಗಲಿದೆ’ ಎಂದರು.

ಒಸಿಐ: ಅರ್ಜಿ ಪುರಸ್ಕರಿಸಲು ನಕಾರ

ಬೆಂಗಳೂರು: ‘2021ರ ಸಾಲಿನ ಸಿಇಟಿ ಪರೀಕ್ಷೆ ಎದುರಿಸಲು ಅವಕಾಶ ಕಲ್ಪಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಸಾಗರೋತ್ತರ ಭಾರತೀಯ ನಾಗರಿಕರು (ಒಸಿಐ) ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ ನಗರದ ಅಲೇಖ್ಯಾ ಪೊನ್ನೇಕಂತಿ ಸೇರಿದಂತೆ 100ಕ್ಕೂ ಹೆಚ್ಚು ಒಸಿಐ ಕಾರ್ಡುಗಳನ್ನು ಹೊಂದಿದ ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠವು, ‘ಪರದೇಶಿಯರಿಗೆ ಯಾವ ಹಕ್ಕುಗಳನ್ನು ಕೊಡಬೇಕು ಎಂಬುದು ಕೇಂದ್ರ ಸರ್ಕಾರಕ್ಕೆ ಬಿಟ್ಟ ವಿಷಯ. ಇಂತಹ ವಿಷಯಗಳಲ್ಲಿ ಕೋರ್ಟ್ ತಲೆ ಹಾಕಲು ಬರುವುದಿಲ್ಲ’ ಎಂದಿದೆ.

‘ವಿದೇಶಗಳಲ್ಲಿ ನೆಲೆಸಿರುವ ಭಾರತೀಯರಿಗೆ ಆಯಾ ದೇಶಗಳಲ್ಲಿ ಯಾವ ಹಕ್ಕುಗಳನ್ನು ಕೊಡಲಾಗಿದೆ ಎಂಬುದರ ಮೇಲೆ ಇಂತಹ ವಿಷಯಗಳು ಅವಲಂಬಿತವಾಗಿರುತ್ತವೆ.’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನ.29ರಿಂದ ಆರಂಭ • ಆಡಳಿತ ಮಂಡಳಿಯಿಂದ ಸಿದ್ಧತೆ

ಕಡಲೆಕಾಯಿ ಪರಿಷೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ದೊಡ್ಡ ಗಣಪತಿ ದೇವಸ್ಥಾನದ ಆವರಣದಲ್ಲಿ ಈ ಬಾರಿ ಕಡಲೆಕಾಯಿ ಪರಿಷೆ ಕಳೆಗಟ್ಟಲಿದ್ದು, ಪರಿಷೆಗೆ ಬಿಬಿಎಂಪಿ ಮತ್ತು ಮುಜರಾಯಿ ಇಲಾಖೆ ಸಮ್ಮತಿ ಸೂಚಿಸಿವೆ.

ಕಾರ್ತಿಕ ಮಾಸದ ಕೊನೆಯ ಸೋಮವಾರದಿಂದ(ನ.29) ಮೂರು ದಿನಗಳ ಕಾಲ ಈ ಪರಿಷೆ ನಡೆಸಲು ಆಡಳಿತ ಮಂಡಳಿ ತಯಾರಿ ನಡೆಸುತ್ತಿದೆ.

ಆರೋಗ್ಯ ಇಲಾಖೆ, ಪೊಲೀಸ್, ಬೆಸ್ಕಾಂ ಸೇರಿ ಹಲವು ಇಲಾಖೆಗಳ ಸಹಕಾರ ಪಡೆಯಬೇಕಾಗಿದೆ. ಇನ್ನು ಎರಡು– ಮೂರು ದಿನಗಳಲ್ಲಿ ಎಲ್ಲಾ ಇಲಾಖೆಗಳ ಜತೆ ಚರ್ಚೆ ನಡೆಸಿ ಅಂತಿಮ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಶಾಸಕ ಎಲ್.ಎ.ರವಿ ಸುಬ್ರಹ್ಮಣ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆ ಆಗಿರುವುದರಿಂದ ಬಿಬಿಎಂಪಿ ಅನುಮತಿ ನೀಡಿದೆ. ಉಳಿದೆಲ್ಲಾ ಸಿದ್ಧತೆ ಬಗ್ಗೆ ಪ್ರಾಥಮಿಕವಾಗಿ ಒಂದು ಸುತ್ತಿನ ಸಭೆ ನಡೆಸಲಾಗಿದೆ ಎಂದು ವಿವರಿಸಿದರು.

2019ರಲ್ಲಿ ನಡೆದಿದ್ದ ಕಡಲೆಕಾಯಿ ಪರಿಷೆ

ಮೂರು ಶಿಫ್ಟ್‌ನಲ್ಲಿ ಕಾರ್ಯನಿರ್ವಹಿಸಲು ಪೊಲೀಸ್ ಮತ್ತು ಹೋಮ್‌ಗಾರ್ಡ್ ಸಿಬ್ಬಂದಿ ಅಗತ್ಯವಿದೆ. ಆಂಬುಲೆನ್ಸ್, ಅಗ್ನಿಶಾಮಕ ದಳ, ವಿದ್ಯುತ್ ದೀಪಗಳ ಅಲಂಕಾರ ಆಗಬೇಕಿದೆ, ಸಂಬಂಧಪಟ್ಟ ಇಲಾಖೆಗಳ ಜತೆ ಮಾತುಕತೆ ಈಗ ನಡೆಯುತ್ತಿದೆ ಎಂದೂ ತಿಳಿಸಿದರು.

‘ಕೋವಿಡ್ ಕಾರಣದಿಂದ ಎಲ್ಲಾ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಚಟುವಟಿಕೆಗಳನ್ನು ನಿಲ್ಲಿಸಿದ್ದೆವು. ಸದ್ಯದ ಪರಿಸ್ಥಿತಿಯಲ್ಲಿ ಕೋವಿಡ್ ಪ್ರಕರಣ ಕಡಿಮೆ ಆಗಿರುವುದರಿಂದ ಈ ರೀತಿಯ ಆಚರಣೆಗಳಿಗೆ ಪ್ರತಿಬಂಧ ವಿಧಿಸುವುದಿಲ್ಲ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದರು.

‘ಕೋವಿಡ್ ನಿಯಮಾವಳಿಗೆ ಒಳಪಟ್ಟು ಆಚರಣೆ ಮಾಡಬಹುದಾಗಿದೆ. ಆಚರಣೆ ಹೇಗಿರಬೇಕು ಎಂಬುದರ ಕುರಿತು ಆ ವಲಯದ ಜಂಟಿ ಆಯುಕ್ತರು ಸಂಘಟಕರ ಜತೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ’ ಎಂದು ಅವರು ತಿಳಿಸಿದರು.

ಹೆಸರು ಸೂಚಿಸಲು ಹೈಕೋರ್ಟ್ ನಿರ್ದೇಶನ

ಬೆಂಗಳೂರು: ‘ಅಪೌಷ್ಟಿಕ ಮಕ್ಕಳು, ಗರ್ಭಿಣಿಯರು, ಬಾಣಂತಿಯರು, ಹಾಲುಣಿಸುವ ತಾಯಂದಿರು, ಕಿಶೋರಾವಸ್ಥೆಯ ಹೆಣ್ಣುಮಕ್ಕಳನ್ನು ಗುರುತಿಸುವ, ಆರೋಗ್ಯ ತಪಾಸಣೆ ಮಾಡುವ ಮತ್ತು ಪೌಷ್ಟಿಕಾಂಶ ಒದಗಿಸುವ ಕಾರ್ಯಕ್ರಮಗಳ ಮೇಲ್ವಿಚಾರಣಾ ಸಮಿತಿಗೆ ಹೊಸ ಅಧ್ಯಕ್ಷರನ್ನು ನೇಮಕ ಮಾಡುವ ದಿಸೆಯಲ್ಲಿ, ಹೈಕೋರ್ಟ್‌ನ ಮೂವರು ನಿವೃತ್ತ ನ್ಯಾಯಮೂರ್ತಿಗಳ ಹೆಸರು ನೀಡಿ’ ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ವಿಚಾರಕ್ಕೆ ಸಂಬಂಧಿಸಿದಂತೆ ಅಥಣಿಯ ‘ವಿಮೋಚನಾ ಸಂಘ’ ಸ್ವಯಂಸೇವಾ ಸಂಸ್ಥೆಯ ಅಧ್ಯಕ್ಷ ಬಿ.ಎಲ್. ಪಾಟೀಲ್ 2011ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರಕರಣದ ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಕ್ಲಿಫ್ಟನ್ ಡಿ. ರೊಜಾರಿಯೊ, ‘ಸಮಿತಿಯ ಅಧ್ಯಕ್ಷರಾಗಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ಅವರು ರಾಜೀನಾಮೆ ಕೊಟ್ಟಿದ್ದಾರೆ. ಆದ್ದರಿಂದ, ಬೇರೊಬ್ಬ ಅಧ್ಯಕ್ಷರನ್ನು ನೇಮಕ ಮಾಡುವುದು ಸೂಕ್ತ’ ಎಂದು ತಿಳಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ‘ಹೈಕೋರ್ಟ್‌ನ ಮೂವರು ನಿವೃತ್ತ ನ್ಯಾಯಮೂರ್ತಿಗಳ ಹೆಸರನ್ನು ನೀಡಿ’ ಎಂದು ಪ್ರಾಧಿಕಾರಕ್ಕೆ ನಿರ್ದೇಶಿಸಿ, ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ಘಟಿಕೋತ್ಸವ ಪ್ರಮಾಣ ಪತ್ರ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು 2020ರ ಅಕ್ಟೋಬರ್–ನವೆಂಬರ್‌ನಲ್ಲಿ ನಡೆದಿದ್ದ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ 56ನೇ ಮಿನಿ ಘಟಿಕೋತ್ಸವ ಪ್ರಮಾಣ ಪತ್ರ ಪಡೆಯದೇ ಇರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಈಗಾಗಲೇ ಪದವಿ ಪರೀಕ್ಷಾ ಶುಲ್ಕದ ಜೊತೆಯಲ್ಲಿ ಘಟಿಕೋತ್ಸವ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳು ಪುನಃ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಟ್ಟಿರುವ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.ac.in ನಲ್ಲಿ ಅರ್ಜಿ ನಮೂನೆಗಳು ದೊರೆಯಲಿವೆ.

‘ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ದಂಡ ರಹಿತವಾಗಿ ಇದೇ 30ರೊಳಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಿಗೆ, ಸ್ನಾತಕ/ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರಿಗೆ ಸಲ್ಲಿಸಬೇಕು. ₹200 ದಂಡ ಸಹಿತವಾಗಿ ಅರ್ಜಿ ಸಲ್ಲಿಸಲು ಡಿಸೆಂಬರ್ 6 ಕೊನೆಯ ದಿನ. ವಿ.ವಿ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು ಹಾಗೂ ಸ್ನಾತಕ/ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರು ಪರಿಶೀಲಿಸಿದ ಅರ್ಜಿಗಳನ್ನು ಡಿಸೆಂಬರ್ 10ರೊಳಗೆ ಆನ್‌ಲೈನ್ ರಶೀದಿ ಸಮೇತ ವಿಶ್ವವಿದ್ಯಾಲಯಕ್ಕೆ ಕಳುಹಿಸಬೇಕು’ ಎಂದು ಪ್ರಕಟಣೆ ತಿಳಿಸಿದೆ.

ಪ್ರಮಾಣ ಪತ್ರಕ್ಕೆ ನಿಗದಿಪಡಿಸಿರುವ ಶುಲ್ಕ (ಅರ್ಜಿ ಶುಲ್ಕವೂ ಸೇರಿ)

ಪದವಿ	ಶುಲ್ಕ (₹ಗಳಲ್ಲಿ)
ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ	
ಸ್ನಾತಕ ಮತ್ತು ಸ್ನಾತಕೋತ್ತರ (ಭಾರತೀಯ ವಿದ್ಯಾರ್ಥಿಗಳು)	1,300
ಸ್ನಾತಕ ಮತ್ತು ಸ್ನಾತಕೋತ್ತರ (ವಿದೇಶಿ ವಿದ್ಯಾರ್ಥಿಗಳು)	4,970
ಸ್ನಾತಕ ಮತ್ತು ಸ್ನಾತಕೋತ್ತರ–ಪಿ.ಎಚ್‌ಡಿ (ಭಾರತೀಯ)	1,620
ಸ್ನಾತಕ ಮತ್ತು ಸ್ನಾತಕೋತ್ತರ–ಪಿ.ಎಚ್‌ಡಿ (ವಿದೇಶಿ)	6,450
ಸ್ವಾಯತ್ತ ಕಾಲೇಜುಗಳ ಅಭ್ಯರ್ಥಿಗಳಿಗೆ	
ಸ್ನಾತಕ ಮತ್ತು ಸ್ನಾತಕೋತ್ತರ (ಭಾರತೀಯ)	2,585
ಸ್ನಾತಕ ಮತ್ತು ಸ್ನಾತಕೋತ್ತರ (ವಿದೇಶಿ)	9,670

ಈವರೆಗೂ ಪದವಿ ಪ್ರಮಾಣ ಪತ್ರಕ್ಕಾಗಿ ನಿಗದಿತ ಶುಲ್ಕದ ಜೊತೆ ಅರ್ಜಿ ಸಲ್ಲಿಸದಿರುವವರಿಗೆ ವಿಧಿಸಲಾಗುವ ದಂಡ ಶುಲ್ಕ

ವರ್ಷ	ದಂಡ ಶುಲ್ಕ (₹ಗಳಲ್ಲಿ)
2ನೇ ವರ್ಷದಿಂದ 5 ವರ್ಷದೊಳಗೆ	500
5ನೇ ವರ್ಷದಿಂದ 10ವರ್ಷದೊಳಗೆ	985
10ನೇ ವರ್ಷದಿಂದ 15ವರ್ಷದೊಳಗೆ	1,430
15ನೇ ವರ್ಷದಿಂದ 20 ವರ್ಷದೊಳಗೆ	1,965
20ನೇ ವರ್ಷದಿಂದ 25ನೇ ವರ್ಷದೊಳಗೆ	2,400

14ರಂದು ಸೈಕ್ಲಿಂಗ್ ಜಾಗೃತಿ ರ್‍ಯಾಲಿ

ಬೆಂಗಳೂರು: ರೋಟರಿ ಬೆಂಗಳೂರು ಐಟಿ ಕಾರಿಡಾರ್ (ಆರ್‌ಬಿಐಟಿಸಿ) ಸಂಸ್ಥೆಯು ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್), ಪಾಲಿಕೆ ಹಾಗೂ ನಗರ ಸಂಚಾರ ಪೊಲೀಸರ ಸಹಯೋಗದಲ್ಲಿ ಸೈಕಲ್ ಬಳಕೆಗೆ ಉತ್ತೇಜನ ಹಾಗೂ ಜನರಲ್ಲಿ ಜಾಗೃತಿ ಮೂಡಿಸಲು ನ.14ರಂದು ‘ಸೈಕಲ್ ಬೆಂಗಳೂರು ಸೈಕಲ್’ ಘೋಷಣೆಯಡಿ ಸೈಕಲ್ ರ್‍ಯಾಲಿ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್‌ಬಿಐಟಿಸಿ ಅಧ್ಯಕ್ಷ ಪವನ್ ಸೇಠ್, ‘ಸೈಕಲ್ ರ್‍ಯಾಲಿ ನ.14ರ ಬೆಳಿಗ್ಗೆ 7 ಗಂಟೆಗೆ ಸಿಲ್ಕ್ ಬೋರ್ಡ್ ಜಂಕ್ಷನ್‌ನ ಹೊರವರ್ತುಲ ರಸ್ತೆಯಿಂದ ಆರಂಭಗೊಂಡು ಕೆ.ಆರ್.ಪುರದ ಲೌರಿ ಅಡ್ವೆಂಟಿಸ್ಟ್ ಕಾಲೇಜಿನವರೆಗೆ 16 ಕಿ.ಮೀವರೆಗೆ ಕ್ರಮಿಸಲಿದೆ. 700ಕ್ಕೂ ಹೆಚ್ಚು ಮಂದಿ ಸೈಕಲ್ ತುಳಿಯಲಿದ್ದಾರೆ’ ಎಂದರು.

ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಆರ್‌ಬಿಐಟಿಸಿನಿಂದ ನೆರವು ಪಡೆಯುತ್ತಿರುವ ಸರ್ಕಾರಿ ಶಾಲೆಗಳ ವಿದ್ಯಾರ್ಥಿನಿಯರಿಗೆ ‘ಯುಲು’ ಸಂಸ್ಥೆಯು 50 ಬೈಸಿಕಲ್‌ಗಳನ್ನು ದೇಣಿಗೆಯಾಗಿ ನೀಡಲಿದೆ.

‘ಸೈಕಲ್ ಬೆಂಗಳೂರು ಸೈಕಲ್’ನಲ್ಲಿ ಭಾಗವಹಿಸಲು https://rbitc.org/ನಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು’ ಎಂದು ಹೇಳಿದರು.

ಸಂಪರ್ಕ:9663455366

‘ಕ್ರಿಪ್ಟೊಕರೆನ್ಸಿಗೆ ವಿರೋಧ’

ಮುಂಬೈ (ಪಿಟಿಐ): ‘ಕ್ರಿಪ್ಟೊಕರೆನ್ಸಿಗಳಿಗೆ ಅನುಮತಿ ನೀಡುವುದಕ್ಕೆ ಈಗಲೂ ನನ್ನ ವಿರೋಧ ಇದೆ’ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಬುಧವಾರ ಪುನರುಚ್ಚರಿಸಿದರು.

ಆರ್. ಕೆ. ರಮೇಶ್ ಅಭಿಮಾನಿಗಳಿಂದ ದಿನಸಿ ಕಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸಮಿತಿ ಹಾಗೂ ಆರ್.ಕೆ.ರಮೇಶ್ ಅಭಿಮಾನಿ ಬಳಗದಿಂದ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಲಚೇನಹಳ್ಳಿ, ಉತ್ತರಹಳ್ಳಿ, ಕೋಣನಕುಂಟೆ, ಬೇಗೂರು, ಗೊಟ್ಟಿಗೆರೆ, ದೊಡ್ಡತೋಗೂರು, ಹೊಸರೋಡ್, ಚುಂಚಘಟ್ಟ, ಕಲ್ಕೆರೆ, ಜಿಗಣಿ, ದೊಡ್ಡನಾಗಮಂಗಲ, ಗೋವಿಂದಶೆಟ್ಟಿಪಾಳ್ಯ, ಅಂಜನಾಪುರ ಹಾಗೂ ದೊಡ್ಡಕಲ್ಲಸಂದ್ರದ ಸಾವಿರಾರು ಕುಟುಂಬಗಳಿಗೆ ಉಚಿತ ದಿನಸಿ ಕಿಟ್ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ನೋಟ್ ಬುಕ್, ಬ್ಯಾಗ್ ಮತ್ತು ಲೇಖನ ಸಾಮಾಗ್ರಿಗಳನ್ನು ವಿತರಿಸಲಾಯಿತು.

ಆರೋಗ್ಯ ತಪಾಸಣಾ ಶಿಬಿರವನ್ನೂ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಭಾಗವಹಿಸಿದ್ದ ಅನೇಕರು ಔಷಧಿಗಳನ್ನು ಉಚಿತವಾಗಿ ಪಡೆದುಕೊಂಡರು. ಹಲವರು ಕಣ್ಣಿನ ಪರೀಕ್ಷೆ ಮಾಡಿಸಿಕೊಂಡರು. ಕೆಲ ಯುವಕರು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದರು.

ಆರ್.ಕೆ.ರಮೇಶ್, ‘ಕೋವಿಡ್‌ನಿಂದಾಗಿ ಅನೇಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಉದ್ಯೋಗ ಕಳೆದುಕೊಂಡು ಜೀವನ ನಡೆಸಲೂ ಪರದಾಡುವಂತಹ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಇಂತಹ ಸಮಯದಲ್ಲಿ ಜನರಿಗೆ ಆಸರೆಯಾಗಬೇಕಿದ್ದ ಆಡಳಿತಾರೂಢ ಬಿಜೆಪಿ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ. ಹೀಗಾಗಿ ಕಾಂಗ್ರೆಸ್ ಪಕ್ಷವು ಬಡವರು ಹಾಗೂ ಸಂಕಷ್ಟಕ್ಕೆ ಸಿಲುಕಿದವರಿಗೆ ಕೈಲಾದಷ್ಟು ಸಹಾಯ ಮಾಡುವ ಮೂಲಕ ಧೈರ್ಯ ತುಂಬುತ್ತಾ ಬಂದಿದೆ’ ಎಂದರು.

ಯಲಚೇನಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರ್.ಕೆ.ರಮೇಶ್ ಅವರು ನಿವಾಸಿಗಳಿಗೆ ಉಚಿತ ದಿನಸಿ ಕಿಟ್, ಶಾಲಾ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಹಾಗೂ ಬ್ಯಾಗ್ ವಿತರಿಸಿದರು. ಪಾಲಿಕೆ ಮಾಜಿ ಸದಸ್ಯ ಓ.ಮಂಜುನಾಥ್, ಎಂ.ಸದಾನಂದ, ವಸಂತರೆಡ್ಡಿ ಇದ್ದರು.

ಪಾಲಿಕೆ ಮಾಜಿ ಸದಸ್ಯರಾದ ಆಂಜನಪ್ಪ, ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಂತೋಣಿ ಕಿರಣ್, ಶ್ರೀಧರ್ ಲಕ್ಷ್ಮಣ್, ಕೆ.ಕುಮಾರ್, ಪ್ರಧಾನ ಕಾರ್ಯದರ್ಶಿ ಸುಂದರೇಶ್, ವಾರ್ಡ್ ಕಾಂಗ್ರೆಸ್ ಅಧ್ಯಕ್ಷರಾದ ರಮೇಶ್, ವಸಂತರೆಡ್ಡಿ, ಆಂಜನರೆಡ್ಡಿ, ಕ್ಷೇತ್ರದ ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷ ಕಾಂತರಾಜ್, ಮುಖಂಡರಾದ ಕಮ್ಮನಹಳ್ಳಿ ಎ.ಮಂಜುನಾಥ್, ವಿಜಯಕುಮಾರ್, ಉಮಾದೇವಿ ಹಾಗೂ ಸಮಿವುಲ್ಲಾ ಇದ್ದರು.

ನಗರದಲ್ಲಿ ಇಂದು

ಕೃಷಿ ಮೇಳ–2021: ಉದ್ಘಾಟನೆ ಮತ್ತು ರೈತ ಪ್ರಶಸ್ತಿಗಳ ಪ್ರದಾನ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಶಾಸಕ ಕೃಷ್ಣಬೈರೇಗೌಡ, ಅತಿಥಿಗಳು–ಕೃಷಿ ಸಚಿವ ಬಿ.ಸಿ.ಪಾಟೀಲ, ಆರೋಗ್ಯ ಸಚಿವ ಕೆ.ಸುಧಾಕರ್, ಜವಳಿ ಸಚಿವ ಶಂಕರ್ ಬಿ.ಪಾಟೀಲ ಮುನೇನಕೊಪ್ಪ, ಸಂಸದ ಬಿ.ಎನ್.ಬಚ್ಚೇಗೌಡ, ಆಯೋಜನೆ–ಕೃಷಿ ವಿಶ್ವವಿದ್ಯಾಲಯ, ಸ್ಥಳ–ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಬೆಳಿಗ್ಗೆ 11

‘ಟೇಸ್ಟ್ ಆಫ್ ಅಮೆರಿಕ’ ಆಹಾರ ಉತ್ಸವ: ಭಾಗವಹಿಸುವವರು–ಜೂಹಿ, ಆಯೋಜನೆ–ಯುನೈಟೆಡ್ ಸ್ಟೇಟ್ಸ್ ಕೃಷಿ ವಿಭಾಗ, ಸ್ಥಳ– ನೇಚರ್ಸ್ ಬ್ಯಾಸ್ಕೆಟ್, ಕೋರಮಂಗಲ 5ನೇ ಬ್ಲಾಕ್, ಸಂಜೆ 4.30

‘ನಾಡೋಜ ಬರಗೂರು ಪ್ರಶಸ್ತಿ’ ಪ್ರದಾನ: ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ಪುರಸ್ಕೃತರು–ಚಿತ್ರನಿರ್ದೇಶಕ ಗಿರೀಶ್ ಕಾಸರವಳ್ಳಿ, ಸಾಹಿತಿ ಸಾರಾ ಅಬೂಬಕರ್, ಗಾಯಕಿ ಬಿ.ಕೆ. ಸುಮಿತ್ರ, ಲೇಖಕ ಚಂದ್ರಕಾಂತ ಪೋಕಳೆ, ಆಯೋಜನೆ–ನಾಡೋಜ ಡಾ.ಬರಗೂರು ಪ್ರತಿಷ್ಠಾನ, ಸ್ಥಳ–ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಸೆಂಟ್ರಲ್ ಕಾಲೇಜು ಎದುರು, ಸಂಜೆ 5

ನಾಗಮೋಹನ್ ದಾಸ್

ಭಾರತೀಯ ನರವಿಜ್ಞಾನ ಅಕಾಡೆಮಿಯ (ಐಎಎನ್) ವಾರ್ಷಿಕ ಸಮ್ಮೇಳನ: ಅತಿಥಿಗಳು–ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ರಾಷ್ಟ್ರೀಯ ವೈದ್ಯಕೀಯ ಆಯೋಗದ ನೈತಿಕತೆ ಮತ್ತು ವೈದ್ಯಕೀಯ ನೋಂದಣಿ ಮಂಡಳಿ ಅಧ್ಯಕ್ಷ ಬಿ.ಎನ್.ಗಂಗಾಧರ್, ನಿಮ್ಹಾನ್ಸ್ ನಿರ್ದೇಶಕಿ ಪ್ರತಿಮಾ ಮೂರ್ತಿ, ಐಎಎನ್ ಅಧ್ಯಕ್ಷ ಜೆ.ಎಂ. ಕೆ.ಮೂರ್ತಿ, ಸ್ಥಳ–ಓಶನ್ ಹಾಲ್, ಕ್ಲಾರ್ಕ್ ಎಕ್ಸೋಟಿಕಾ–ಕನ್ವೆಂಷನ್ ರೆಸಾರ್ಟ್, ಸಂಜೆ 7

ಆರಾಧನಾ ಸಂಸ್ಥೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ: ಆಯೋಜನೆ ಮತ್ತು ಸ್ಥಳ–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7.30

ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅಭಿಮತ

ನೇತ್ರದಾನ ಅರಿವು ಹೆಚ್ಚಳಕ್ಕೆ ಜನಾಂದೋಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ 4 ಕೋಟಿ ಜನ ಅಂಧತ್ವಕ್ಕೆ ಒಳಗಾಗಿದ್ದಾರೆ. ಅವರಿಗೆ ದೃಷ್ಟಿ ಒದಗಿಸಲು ನೇತ್ರದಾನದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ, ಜನಾಂದೋಲನ ರೂಪಿಸಬೇಕು’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಮಿಂಟೊ ಕಣ್ಣಿನ ಆಸ್ಪತ್ರೆಯ 125ನೇ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಇತ್ತೀಚೆಗೆ ನಿಧನರಾದ ಚಲನಚಿತ್ರ ನಟ ಪುನೀತ್ ರಾಜ್‌ಕುಮಾರ್ ಅವರ ನೇತ್ರಗಳು ನಾಲ್ವರಿಗೆ ದೃಷ್ಟಿ ನೀಡಿದೆ. ತಂತ್ರಜ್ಞಾನಗಳ ನೆರವಿನಿಂದ ಒಬ್ಬರು ನಾಲ್ಕು ಜನರಿಗೆ ದೃಷ್ಟಿ ನೀಡಲು ಸಾಧ್ಯ. ಹಾಗಾಗಿ, ಮರಣ ಹೊಂದಿದ ನಂತರವೂ ನಾಲ್ಕು ಜನರಿಗೆ ದೃಷ್ಟಿ ನೀಡಿ, ಅವರಿಗೆ ಜಗತ್ತು ನೋಡುವ ಅವಕಾಶ ನೀಡಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದ್ದಾರೆ. ನಾನು ಕೂಡ ಕಳೆದ ವರ್ಷವೇ ನೇತ್ರದಾನ ಮಾಡಲು ಪ್ರತಿಜ್ಞೆ ಮಾಡಿದ್ದೇನೆ’ ಎಂದರು.

ಮಿಂಟೊ ಕಣ್ಣಿನ ಆಸ್ಪತ್ರೆಯ 125ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಡಾ.ಕೆ. ಸುಧಾಕರ್ ಅವರು ಕೇಕ್ ಅನ್ನು ಕಣ್ಣಿನ ಶಸ್ತ್ರಚಿಕಿತ್ಸೆಗೆ ಒಳಗಾದ ವ್ಯಕ್ತಿಯೊಬ್ಬರಿಗೆ ತಿನ್ನಿಸಿದರು. (ಎಡದಿಂದ ಬಲಕ್ಕೆ) ಡಾ. ಸುಜಾತಾ ರಾಥೋಡ್ ಹಾಗೂ ಶಾಸಕ ಜಮೀರ್ ಅಹ್ಮದ್ ಖಾನ್ ಇದ್ದರು – ಪ್ರಜಾವಾಣಿ ಚಿತ್ರ

‘ಅಧಿಕ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ವರದಿಯಾದಾಗ ಮಿಂಟೊ, ವಿಕ್ಟೋರಿಯಾ ಆಸ್ಪತ್ರೆಯನ್ನೂ ಚಿಕಿತ್ಸೆಗೆ ಬಳಸಿಕೊಳ್ಳಲಾಗಿತ್ತು. ಈಗ ಎಲ್ಲ ರೀತಿಯ ಕೋವಿಡೇತರ ಚಿಕಿತ್ಸೆ ನೀಡಲಾಗುತ್ತಿದೆ. ಜನ ಧೈರ್ಯವಾಗಿ ಆಸ್ಪತ್ರೆಗಳಿಗೆ ಬಂದು, ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆದುಕೊಳ್ಳಬೇಕು’ ಎಂದು ಮನವಿ ಮಾಡಿಕೊಂಡರು.

‘ಅನೇಕ ವೈದ್ಯರು, ಶುಶ್ರೂಷಕರು, ವೈದ್ಯಕೀಯೇತರ ಸಿಬ್ಬಂದಿಯ ಶ್ರಮದಿಂದಾಗಿ ಮಿಂಟೊ ಆಸ್ಪತ್ರೆಯು 125ನೇ ವರ್ಷಕ್ಕೆ ಕಾಲಿಟ್ಟಿದೆ. ಪ್ಲೇಗ್ ರೋಗದಿಂದ ಕೋವಿಡ್ ತಡೆಗಟ್ಟುವವರೆಗೂ ಈ ಸಂಸ್ಥೆ ಕಾರ್ಯನಿರ್ವಹಿಸಿದೆ. ವರ್ಷಕ್ಕೆ 10 ಸಾವಿರ ರೋಗಿಗಳಿಗೆ ಶಸ್ತ್ರಚಿಕಿತ್ಸೆ ನಡೆಸುತ್ತಿರುವುದು ಶ್ಲಾಘನೀಯ’ ಎಂದು ಹೇಳಿದರು.

ಗುಣಮಟ್ಟದ ಚಿಕಿತ್ಸೆ: ಆಸ್ಪತ್ರೆಯ ನಿರ್ದೇಶಕಿ ಡಾ. ಸುಜಾತಾ ರಾಥೋಡ್, ‘ಎಲ್ಲರಿಗೂ ಗುಣಮಟ್ಟದ ಕಣ್ಣಿನ ಆರೈಕೆ ಸೇವೆ ಒದಗಿಸುವುದು ನಮ್ಮ ಗುರಿಯಾಗಿದೆ. ಕಣ್ಣಿನ ಸಮಸ್ಯೆಗಳ ಚಿಕಿತ್ಸೆಗೆ ವಿವಿಧ ಜಿಲ್ಲೆಗಳ ಜೊತೆಗೆ ಹೊರ ರಾಜ್ಯಗಳಿಂದಲೂ ವರ್ಷಕ್ಕೆ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಬರುತ್ತಿದ್ದಾರೆ. ಪ್ರತಿನಿತ್ಯ 800 ಹೊರರೋಗಿಗಳನ್ನು ನೋಡುತ್ತಿದ್ದೇವೆ. ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ಕಣ್ಣಿಗೆ ಸಂಬಂಧಿಸಿದ ವಿವಿಧ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ’ ಎಂದರು.

‘ರಾಜ್ಯದಲ್ಲಿಯೇ ಅತೀ ದೊಡ್ಡ ಮಕ್ಕಳ ನೇತ್ರಚಿಕಿತ್ಸಾ ಘಟಕವನ್ನೂ ಹೊಂದಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಮಂದಿಗೆ ದೃಷ್ಟಿ ಒದಗಿಸಲು ಶ್ರಮಿಸುತ್ತೇವೆ. ಮಧುಮೇಹದಿಂದ ಉಂಟಾಗುವ ದೃಷ್ಟಿ ದೋಷ ಸಮಸ್ಯೆಯ ಬಗ್ಗೆ ಜಾಗೃತಿ ಮೂಡಿಸಲಾಗುವುದು’ ಎಂದು ಹೇಳಿದರು.

ಪ್ರತಿಭಾ ಪುರಸ್ಕಾರ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಸದಸ್ಯ–ಸಹಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ನ.20ರ ಒಳಗಾಗಿ ಕ್ವೀನ್ಸ್ ರಸ್ತೆಯಲ್ಲಿರುವ ಸಂಘದ ಕಚೇರಿಗೆ ಅಂಕ ಪಟ್ಟಿಯ ಜೆರಾಕ್ಸ್ ಪ್ರತಿ, ಭಾವಚಿತ್ರ ಹಾಗೂ ವಿವರಗಳನ್ನು ನೀಡಬೇಕು. ಸರ್ವಸದಸ್ಯರ ಸಭೆಯಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುವುದು.

2021ರಲ್ಲಿ ನಡೆದ ಪರೀಕ್ಷೆಯಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಸದಸ್ಯ– ಸಹಸದಸ್ಯರ ಮಕ್ಕಳು ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು.

ಎಸ್ಸೆಸ್ಸೆಲ್ಸಿ, ಪಿಯುಸಿ(ಎಲ್ಲ ವಿಭಾಗ), ಪದವಿ, ಸ್ನಾತಕೋತ್ತರ ಪದವಿ (ಎಲ್ಲಾ ರೀತಿಯ ಪದವಿ)ಗಳಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಂಘದ ಎಲ್ಲಾ ಸದಸ್ಯ/ಸಹ ಸದಸ್ಯರ ಮಕ್ಕಳು ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾಗಿರುತ್ತಾರೆ.

Consortium of Medical, Engineering & Dental Colleges of Karnataka
COMEDK UGET-2021
ARCHITECTURE COUNSELLING
www.comedk.org Hurry up ! Apply Immediately !
Last date for Registration of COMEDK UGET 2021
ARCHITECTURE COUNSELLING
is extended till 5:00pm, 18th November 2021
Applications are to be filled online on our website: www.comedk.org
Note 1: Neither the Application form nor filled in Applications will be sold or received in COMEDK Office or by any Member Institutions.
Note 2: www.comedk.org is the ONLY official Website for COMEDK applications
Dr. M.R.Jayaram, Chairman, COMEDK

ಗೊಬ್ಬರವಾಗಿ ತ್ಯಾಜ್ಯ ಬಳಕೆ: ರಾಸಾಯನಿಕ ಮುಕ್ತ ಪರಿಸರಕ್ಕೆ ಪ್ರಯತ್ನ • 30ಕ್ಕೂ ಹೆಚ್ಚು ವಿವಿಧ ಗಿಡ

ತಾರಸಿ ಮೇಲೆ ಅರಳಿದ ಹಣ್ಣಿನ ತೋಟ

• ಸಚ್ಚಿದಾನಂದ ಕುರಗುಂದ

ಹೊಸ ಬೆಳಕು

ಬೆಂಗಳೂರು: ಕಾಂಕ್ರೀಟ್ ತಾರಸಿಯ ಮೇಲೆ ಹಸಿರು ಪಸರಿಸುವ ಪ್ರಯತ್ನವನ್ನು ವಿನೂತನ ಪ್ರಯೋಗಗಳ ಮೂಲಕ ಇವರು ಕೈಗೊಂಡಿದ್ದಾರೆ.

ತ್ಯಾಜ್ಯ ಬಳಸಿಕೊಂಡು ರಾಸಾಯನಿಕ ಮುಕ್ತ ವಿಭಿನ್ನವಾದ ತೋಟವನ್ನು ರೂಪಿಸಿರುವ ನಗರದ ಆರ್.ಎಂ.ವಿ. ಎರಡನೇ ಹಂತದ ನಿವಾಸಿ ಕೆ. ಸುಲೋಚನಾ ಅವರು, ಹಣ್ಣುಗಳನ್ನು ಬೆಳೆಯುವ ಕಾಯಕದಲ್ಲಿ ತೊಡಗಿದ್ದಾರೆ. ಸಾಮಾನ್ಯವಾಗಿ ಬಹುತೇಕ ಮಂದಿ ತಾರಸಿ ಮೇಲೆ ತರಕಾರಿಗಳನ್ನು ಬೆಳೆಯುತ್ತಾರೆ. ಹೀಗಾಗಿಯೇ ಸುಲೋಚನಾ ಅವರು ಹೊಸ ಪ್ರಯತ್ನಕ್ಕೆ ಕೈಹಾಕಿ ಯಶಸ್ವಿಯಾಗಿದ್ದಾರೆ.

ಮಾವು, ನೇರಳೆ, ಸಪೋಟಾ, ದಾಳಿಂಬೆ, ಸೀಬೆಕಾಯಿ, ಲಿಂಬೆ, ಚೆರ್ರಿ ಸೇರಿದಂತೆ 30ಕ್ಕೂ ಹೆಚ್ಚು ವಿವಿಧ ಹಣ್ಣು ನೀಡುವ ಗಿಡಗಳನ್ನು ಇವರು ಪೋಷಿಸಿ ಬೆಳೆಸುತ್ತಿದ್ದಾರೆ. ಐದು ವಿವಿಧ ತಳಿಯ ಮಾವಿನ ಗಿಡ ಬೆಳೆಸಿದ್ದಾರೆ. ಪ್ರತಿ ವರ್ಷ ಕೆಲ ಸಸಿಗಳನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸುತ್ತಾರೆ. ಇವರ ಕೈತೋಟದಲ್ಲಿ ಬೆಳೆದ ನೇರಳೆ ಗಿಡದಿಂದ ಪ್ರತಿ ವರ್ಷದ ಋತುವಿನಲ್ಲಿ 7–8 ಕೆ.ಜಿ. ದೊರೆಯುತ್ತಿದೆ. ಇದೇ ರೀತಿ ಸುಮಾರು 25 ಕೆ.ಜಿ. ಮಾವಿನ ಹಣ್ಣುಗಳು ಕಳೆದ ವರ್ಷ ದೊರೆತಿದ್ದವು.

2020ರಲ್ಲಿ ತಾರಸಿ ಮೇಲೆ ಬೆಳೆದಿದ್ದ ವಾಟರ್ ಆ್ಯಪಲ್

ವಾಟರ್ ಆ್ಯಪಲ್ (ಮಲಯ ಆಪಲ್) ಇವರ ತೋಟದ ಪ್ರಮುಖ ಆಕರ್ಷಣೆ. ಸಸ್ಯವಿಜ್ಞಾನದಲ್ಲಿ ಸಿಜಿಜಿಯಮ್ ಮಲಾಸಿಸೆನ್ ಎಂದು ಕರೆಯಲಾಗುವ ಈ ಗಿಡದಿಂದ ಕಳೆದ ವರ್ಷ 15ರಿಂದ 20 ಕೆ.ಜಿಯಷ್ಟು ಲಭಿಸಿತ್ತು. ಜೂನ್ ತಿಂಗಳಲ್ಲಿ ಈ ಹಣ್ಣುಗಳು ದೊರೆಯುತ್ತವೆ.

ತಾರಸಿ ಮೇಲೆ ಲಭ್ಯವಿರುವ ಜಾಗದಲ್ಲಿಯೇ ಈ ಗಿಡಗಳನ್ನು ಬೆಳೆಸಿದ್ದಾರೆ. ನೀರಿನ ತೊಟ್ಟಿಗಳ ಮಾದರಿಗಳಲ್ಲಿ ಮತ್ತು ಸಣ್ಣ ಬಕೆಟ್‌ಗಳಲ್ಲಿ ಸಸಿಗಳನ್ನು ನೆಟ್ಟು ಬೆಳೆಸಲಾಗಿದೆ. ಸಣ್ಣ ಉಳಿತಾಯ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕರಾಗಿರುವ ಸುಲೋಚನಾ ಅವರು, ತಾರಸಿ ಕೃಷಿಯನ್ನು 15 ವರ್ಷಗಳಿಂದ ನಿರಂತರವಾಗಿ ಮುಂದುವರಿಸಿದ್ದಾರೆ.

ಮನೆ ತಾರಸಿಯ ತೋಟದಲ್ಲಿ ಕೆ. ಸುಲೋಚನಾ

‘ಸಸ್ಯವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವುದರಿಂದ ಸಹಜವಾಗಿ ತೋಟ ಬೆಳೆಸುವ ಆಸಕ್ತಿ ಇತ್ತು. ಆರಂಭದಲ್ಲಿ ತರಕಾರಿಗಳನ್ನು ಬೆಳೆಯುವ ಪ್ರಯೋಗ ಮಾಡಲಾಗಿತ್ತು. ಕೆಲ ದಿನಗಳ ನಂತರ, ಹಣ್ಣಿನ ಗಿಡಗಳನ್ನು ಬೆಳೆಯಬೇಕು ಎಂಬ ಆಲೋಚನೆ ಬಂತು. ಆಗ ಮಗನ ನೆರವು ಪಡೆದು ಹಣ್ಣುಗಳನ್ನು ನೀಡುವ ಸಸಿಗಳನ್ನು ಬೆಳೆಸುವ ಪ್ರಯತ್ನ ಮಾಡಿದೆ’ ಎಂದು ಸುಲೋಚನಾ ಅವರು ಹೇಳುತ್ತಾರೆ.

‘ರಾಸಾಯನಿಕ ಮುಕ್ತ ಹಣ್ಣುಗಳನ್ನು ತಿನ್ನಬೇಕು ಎನ್ನುವ ಉದ್ದೇಶವೇ ಹಣ್ಣಿನ ತೋಟ ಬೆಳೆಯಲು ಪ್ರೇರಣೆಯಾಗಿದೆ. ಜಾಗ ಚಿಕ್ಕದು, ದೊಡ್ಡದು ಎನ್ನುವುದು ಮುಖ್ಯವಾಗುವುದಿಲ್ಲ. ಜಾಗವನ್ನು ಯಾವ ರೀತಿ ಬಳಸಿಕೊಳ್ಳುತ್ತೀರಿ ಎನ್ನುವುದು ಮುಖ್ಯವಾಗುತ್ತದೆ. ಇದುವರೆಗೆ ಯಾವುದೇ ರೀತಿ ರಾಸಾಯನಿಕಗಳನ್ನು ಬಳಸಿಲ್ಲ. ಬೇವಿನ ಎಣ್ಣೆ, ಹೊಂಗಿನ ಎಣ್ಣೆ ಮುಂತಾದವುಗಳನ್ನು ಮಾತ್ರ ಬಳಸುತ್ತೇನೆ. ತ್ಯಾಜ್ಯದಿಂದಲೇ ಗೊಬ್ಬರ ಮಾಡುತ್ತೇವೆ. ಇದರಿಂದ, ಎರಡು ಉಪಯೋಗಗಳಾಗುತ್ತಿವೆ. ಕಸವನ್ನು ರಸವನ್ನಾಗಿ ಬಳಸುವ ಪ್ರಯತ್ನ ನಡೆಸಲಾಗುತ್ತಿದೆ. ಜತೆಗೆ, ಗಿಡಗಳಿಗೂ ಗೊಬ್ಬರವಾಗುತ್ತದೆ. ರಸಗೊಬ್ಬರ ಖರೀದಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ’ ಎಂದು ವಿವರಿಸುತ್ತಾರೆ.

ಸೀಬೆಹಣ್ಣು

‘ಈಗ ತೆಂಗಿನ ಗಿಡಗಳನ್ನು ಬೆಳೆಸುವ ಪ್ರಯೋಗ ಮಾಡುತ್ತಿದ್ದೇನೆ. ಫಲಿತಾಂಶ ಯಾವ ರೀತಿ ಬರುತ್ತದೆ ಎನ್ನುವುದನ್ನು ಕಾದು ನೋಡಬೇಕಾಗಿದೆ. ಹೊಸ, ಹೊಸ ಪ್ರಯೋಗಗಳನ್ನು ಮಾಡಿದಾಗಲೇ ಹೊಸ ವಿಷಯಗಳು ಗೊತ್ತಾಗುತ್ತವೆ. ಕೈತೋಟದ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಸಮಾನ ಮನಸ್ಕರ ಗುಂಪೊಂದನ್ನು ಮಾಡಿಕೊಂಡಿದ್ದೇವೆ. ಪ್ರತಿಯೊಬ್ಬರು ಸಲಹೆ–ಸೂಚನೆಗಳನ್ನು ಕೊಡುತ್ತಾರೆ. ಬೀಜಗಳು, ಸಸಿಗಳ ವಿಷಯಗಳು ಚರ್ಚೆಯಾಗುತ್ತವೆ. ಮಾಹಿತಿ ವಿನಿಮಯದಿಂದ ಹೆಚ್ಚು ಅನುಕೂಲವಾಗುತ್ತದೆ’ ಎಂದು ಹೇಳುತ್ತಾರೆ.

ಸುದ್ದಿ 2 ನಿಮಿಷ

13ರಿಂದ ಕ್ಯಾನ್ಸರ್ ಜಾಗೃತಿ ಸಮಾವೇಶ

ಬೆಂಗಳೂರು: ಸೊಸೈಟಿ ಫಾರ್ ಪ್ರಿವೆನ್‌ಷನ್ ಆಫ್ ಕ್ಯಾನ್ಸರ್ (ಎಸ್‌ಪಿಒಸಿ) ಸಂಸ್ಥೆಯು ಕ್ಯಾನ್ಸರ್ ತಡೆಗಟ್ಟುವ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಸಮಾವೇಶವನ್ನು ನ.13 ಮತ್ತು 14ರಂದು ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಸ್ಥಾಪಕ ನಂದಾ ರಜನೀಶ್, ‘ಕ್ಯಾನ್ಸರ್ ಬಗ್ಗೆ ಜನರಿಗೆ ಮಾಹಿತಿ ಇದೆ. ಆದರೆ, ಕ್ಯಾನ್ಸರ್ ಅನ್ನು ತಡೆಗಟ್ಟುವ ಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿ ಇಲ್ಲ. ಈ ಉದ್ದೇಶದಿಂದ ಸಮಾವೇಶ ಎರಡು ದಿನಗಳ ಸಮಾವೇಶ ಹಮ್ಮಿಕೊಂಡಿದ್ದೇವೆ’ ಎಂದರು.

‘ಸಮಾವೇಶದಲ್ಲಿ ಒಂದು ಸಾವಿರಕ್ಕೂ ಹೆಚ್ಚು ವೈದ್ಯರು ಹಾಗೂ ಕ್ಯಾನ್ಸರ್ ಚಿಕಿತ್ಸೆ ನೀಡುವ ಸಿಬ್ಬಂದಿ, ಫಾರ್ಮಾ ಕಂಪನಿಯವರು ಹಾಗೂ ವಿವಿಧ ದತ್ತಿ ಸಂಸ್ಥೆಗಳು ಭಾಗವಹಿಸಲಿವೆ. ಕ್ಯಾನ್ಸರ್ ತಡೆಗಟ್ಟುವ ಕುರಿತು ಜನರಲ್ಲಿ ಅರಿವು ಮೂಡಿಸುವ ಬಗ್ಗೆಯೂ ಸಮಾಲೋಚನೆ ನಡೆಯಲಿದೆ’ ಎಂದು ಹೇಳಿದರು.

ಸಂಸ್ಥೆಯ ಸ್ಥಾಪಕ ನಿರ್ದೇಶಕ ಎಸ್.ವಿಶ್ವನಾಥ್, ‘ಸಮಾವೇಶದಲ್ಲಿ ಕ್ಯಾನ್ಸರ್ ಕುರಿತು ಜನರ ಜಾಗೃತಿಗಾಗಿ ಅಭಿವೃದ್ಧಿಪಡಿಸಿರುವ ಮೊಬೈಲ್ ಆ್ಯಪ್ ಬಿಡುಗಡೆ ಮಾಡಲಿದ್ದೇವೆ. ಕ್ಯಾನ್ಸರ್‌ನ ಅಪಾಯಗಳು ಹಾಗೂ ಅವುಗಳಿಗೆ ಸೂಕ್ತ ಚಿಕಿತ್ಸೆಗಳ ವಿವರ ಒಳಗೊಂಡ ವಿವಿಧ ವೈದ್ಯರು ಬರೆದಿರುವ ಸ್ಮರಣ ಸಂಚಿಕೆ ಬಿಡುಗಡೆಯಾಗಲಿದೆ. ಕ್ಯಾನ್ಸರ್ ನಿವಾರಣೆಗೆ ಯೋಗದ ಪಾತ್ರದ ಬಗ್ಗೆ ತರಬೇತಿ ಮತ್ತು ಪ್ರಾತ್ಯಕ್ಷಿಕೆ ಇರಲಿದೆ’ ಎಂದು ವಿವರಿಸಿದರು.

ನುಡಿಯ ಜತೆಗೆ ನಾಡೂ ಬೆಳೆಯಬೇಕು: ಸತೀಶ್ ರೆಡ್ಡಿ

ಬೊಮ್ಮನಹಳ್ಳಿ: ಕನ್ನಡ ಭಾಷೆಯ ಬೆಳವಣಿಗೆಯು ನಾಡಿನ ಪ್ರಗತಿಯ ಜತೆಗೆ ನಡೆಯಬೇಕು. ಇದರಲ್ಲಿ ಸರ್ಕಾರಗಳ ಪಾತ್ರದಷ್ಟೇ ಜನರ ಜವಾಬ್ದಾರಿಯೂ ಮುಖ್ಯ ಎಂದು ಶಾಸಕ ಸತೀಶ್ ರೆಡ್ಡಿ ಹೇಳಿದರು.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಅಂಗವಿಕಲರ ‘ಸಮರ್ಥನಂ’ ಸಂಸ್ಥೆಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬೊಮ್ಮನಹಳ್ಳಿ ಕ್ಷೇತ್ರದಲ್ಲಿ 4 ಲಕ್ಷಕ್ಕೂ ಅಧಿಕ ಮಂದಿಗೆ ಲಸಿಕೆ ನೀಡಲಾಗಿದೆ. ಎಲ್ಲರೂ ಸ್ವಯಂಪ್ರೇರಣೆಯಿಂದ ಲಸಿಕೆ ಪಡೆಯಬೇಕು. ಸಮರ್ಥನಂ ಸಂಸ್ಥೆಯೂ ಲಸಿಕಾ ಅಭಿಯಾನದಲ್ಲಿ ಭಾಗಿಯಾಗಿರುವುದು ಶ್ಲಾಘನೀಯವಾದುದು ಎಂದರು.

ಹಾಸ್ಯ ಕಲಾವಿದೆ ಸುಧಾ ಬರಗೂರು, ‘ಪುನೀತ್ ಸಾವಿನಿಂದಾಗಿ ಇಂದಿಗೂ ಸೂತಕದ ಛಾಯೆ ಇದೆ. ವಿಶಾಲ ಹೃದಯಿ ಅಪ್ಪು ಅವರು ಎಲ್ಲರ ಹೃದಯಗಳಲ್ಲಿ ನೆಲೆಸಿದ್ದಾರೆ. ಅವರನ್ನು ಕಳೆದುಕೊಂಡ ದೌರ್ಭಾಗ್ಯ ನಮ್ಮದಾಗಿದೆ’ ಎಂದರು.

ನಟಿ ಮಾನ್ವಿತ ಕಾಮತ್, ಪಾಲಿಕೆ ಮಾಜಿ ಸದಸ್ಯ ಗುರುಮೂರ್ತಿರೆಡ್ಡಿ, ಸಮರ್ಥನಂ ಸಂಸ್ಥೆ ಮುಖ್ಯಸ್ಥ ಡಾ. ಮಹಾಂತೇಶ್ ಜಿ.ಕೆ, ವೀರೇಶ್, ವಾಸಂತಿ ಸವಣೂರು ಇದ್ದರು.

ಕಾರ್ಯದರ್ಶಿ ಕೊಲೆ: ಭದ್ರತಾ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎಸಿಎಸ್ ಬಡಾವಣೆಯ ಅಪಾರ್ಟ್‌ಮೆಂಟ್ ಸಮುಚ್ಚಯ ಒಕ್ಕೂಟದ ಕಾರ್ಯದರ್ಶಿ ಭಾಸ್ಕರ್ ರೆಡ್ಡಿ (65) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಭದ್ರತಾ ಸಿಬ್ಬಂದಿ ಬಸಂತ್ (32) ಎಂಬಾತನನ್ನು ಎಚ್‌ಎಎಲ್ ಪೊಲೀಸರು ಬಂಧಿಸಿದ್ದಾರೆ.

‘ಬುಧವಾರ ಬೆಳಿಗ್ಗೆ ಈ ಘಟನೆ ನಡೆದಿದೆ. ಕೊಲೆಯಾಗಿರುವ ಭಾಸ್ಕರ್ ರೆಡ್ಡಿ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಕೃತ್ಯದ ಬಳಿಕ ಪರಾರಿಯಾಗಲು ಯತ್ನಿಸಿದ್ದ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನೇಪಾಳದ ಬಸಂತ್, ‘ಪದ್ಮಾ ನಿಲಯ’ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಕೆಲಸ ಮಾಡುತ್ತಿದ್ದ. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಮಗನ ಜೊತೆಯಲ್ಲಿ ವಾಸವಿದ್ದ ಭಾಸ್ಕರ್ ರೆಡ್ಡಿ, ಅದೇ ಅಪಾರ್ಟ್‌ಮೆಂಟ್ ಸಮುಚ್ಚಯ ಒಕ್ಕೂಟದ ಕಾರ್ಯದರ್ಶಿಯೂ ಆಗಿದ್ದರು.’

‘ನಸುಕಿನಲ್ಲಿ ಮದ್ಯ ಕುಡಿಯುತ್ತಿದ್ದ ಆರೋಪಿ, ಅದರ ಅಮಲಿನಲ್ಲೇ ಕೆಲಸ ಮಾಡುತ್ತಿದ್ದ. ಇದನ್ನು ಗಮನಿಸಿದ್ದ ಭಾಸ್ಕರ್ ರೆಡ್ಡಿ, ‘ಮದ್ಯ ಕುಡಿದು ಕೆಲಸ ಮಾಡಬೇಡ. ಸರಿಯಾಗಿ ಕೆಲಸ ಮಾಡು. ಇಲ್ಲದಿದ್ದರೆ, ಕೆಲಸದಿಂದ ತೆಗೆಸುತ್ತೇನೆ’ ಎಂದಿದ್ದರು. ಅಷ್ಟಕ್ಕೆ ಕೋಪಗೊಂಡಿದ್ದ ಆರೋಪಿ, ಭಾಸ್ಕರ್ ಮೇಲೆಯೇ ಹರಿಹಾಯ್ದಿದ್ದ’ ಎಂದೂ ತಿಳಿಸಿವೆ.

ಪಾರ್ಕಿಂಗ್ ಜಾಗದಲ್ಲಿ ಕೊಲೆ: ‘ಭಾಸ್ಕರ್ ರೆಡ್ಡಿ ಅವರಿಗೆ ಒಂದು ಗತಿ ಕಾಣಿಸಬೇಕೆಂದು ಆರೋಪಿ ಸಂಚು ರೂಪಿಸಿದ್ದ. ಸಮಯಕ್ಕಾಗಿ ಕಾಯುತ್ತಿದ್ದ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘ಕಾರು ಪಾರ್ಕಿಂಗ್ ಜಾಗದಲ್ಲಿ ಭಾಸ್ಕರ್ ರೆಡ್ಡಿ ಓಡಾಡುತ್ತಿದ್ದರು. ಅದನ್ನು ನೋಡಿದ್ದ ಆರೋಪಿ, ಕಸಗುಡಿಸುವ ಸೋಗಿನಲ್ಲಿ ಸ್ಥಳಕ್ಕೆ ಹೋಗಿದ್ದ. ಭಾಸ್ಕರ್ ಅವರ ಕುತ್ತಿಗೆಗೆ ಚಾಕುವಿನಿಂದ ಇರಿದಿದ್ದ.’

‘ತೀವ್ರ ರಕ್ತಸ್ರಾವದಿಂದ ಭಾಸ್ಕರ್ ಸ್ಥಳದಲ್ಲೇ ಕುಸಿದು ಬಿದ್ದಿದ್ದರು. ಸ್ಥಳೀಯ ನಿವಾಸಿಗಳೇ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟರು’ ಎಂದೂ ಮೂಲಗಳು ತಿಳಿಸಿವೆ.

ಕೆ.ಚನ್ನಸಂದ್ರ ವೃತ್ತಕ್ಕೆ ನಟ ಪುನೀತ್ ಹೆಸರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಇಲ್ಲಿನ ರಾಮಮೂರ್ತಿನಗರದ ಕೆ.ಚನ್ನಸಂದ್ರ ವೃತ್ತಕ್ಕೆ ನಟ ಪುನೀತ್ ರಾಜ್‌ಕುಮಾರ್ ಅವರ ಹೆಸರನ್ನು ಗ್ರಾಮಸ್ಥರು ನಾಮಕರಣ ಮಾಡಿದರು.

‘ನಟ ಪುನೀತ್ ರಾಜ್‌ಕುಮಾರ್ ಅವರು ಅಭಿಮಾನಿಗಳ ಪ್ರೀತಿಯಲ್ಲಿ ಅಮರರಾಗಿದ್ದಾರೆ. ಪುನೀತ್ ಅವರ ಜೀವನ ಹಾಗೂ ಸಮಾಜಮುಖಿ ಕಾರ್ಯಗಳು ಯುವ ಪೀಳಿಗೆಗೆ ದಾರಿದೀಪ’ ಎಂದು ಶಾಂತಕೃಷ್ಣಮೂರ್ತಿ ಫೌಂಡೇಶನ್ ಸಂಸ್ಥಾಪಕ ಸದಸ್ಯ ಕಲ್ಕೆರೆ ಕೃಷ್ಣಮೂರ್ತಿ ಹೇಳಿದರು.

‘ಅವರ ಅಗಲಿಕೆ ಅಭಿಮಾನಿಗಳಿಗೆ ಅಪಾರ ನೋವು ಉಂಟುಮಾಡಿದೆ. ನಟ ರಾಜ್ ಕುಮಾರ್ ಅಭಿಮಾನಿಗಳೊಂದಿಗೆ ಜೊತೆಗೂಡಿ ಪುನೀತ್ ಅವರ ಸ್ಮರಣಾರ್ಥ ಕೆ.ಚನ್ನಸಂದ್ರ ವೃತ್ತಕ್ಕೆ ಅವರ ಹೆಸರು ನಾಮಕರಣ ಮಾಡಲಾಗಿದೆ’ ಎಂದರು.

ಕೆ.ಚನ್ನಸಂದ್ರ ವೃತ್ತಕ್ಕೆ ಪುನೀತ್ ರಾಜ್‌ಕುಮಾರ್ ಹೆಸರು ನಾಮಕರಣ ಮಾಡಲಾಯಿತು. ಕೆ.ಚನ್ನಸಂದ್ರದ ಗ್ರಾಮಸ್ಥರು ಇದ್ದರು.

ಕೆ.ಚನ್ನಸಂದ್ರ ಗ್ರಾಮದ ಡಿ.ಎಚ್. ಸುನಿಲ್ ಕುಮಾರ್, ಅನಿಲ್, ಹರ್ಷ, ಕೆ.ಮಾದೇಶ್, ಹರೀಶ್, ಸಿದ್ದೇಶ್, ವಿಜಿ, ಮುರಳಿ, ದೇವರಾಜ್, ದಿನೇಶ್ ಭಾಗವಹಿಸಿದ್ದರು.

ದಾಸರಹಳ್ಳಿ ಕ್ಷೇತ್ರದ ಮಲ್ಲಸಂದ್ರ ಪೈಪ್‌ಲೈನ್ ವೃತ್ತದಲ್ಲಿ ಕಾವೇರಿ ಐದನೇ ಹಂತದ ಮುಖ್ಯ ಪೈಪ್‌ಲೈನ್‌ಗೆ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಶಾಸಕ ಆರ್.ಮಂಜುನಾಥ್ ಬುಧವಾರ ಚಾಲನೆ ನೀಡಿದರು. ಜೆಡಿಎಸ್ ಮುಖಂಡರಾದ ಕೆ.ಸಿ.ವೆಂಕಟೇಶ್, ಗೋಪಾಲ್, ಆಂಜಿನಪ್ಪ, ಲಕ್ಷ್ಮೀಪತಿ, ಕೆಂಪ ಓಬಳಯ್ಯ, ಚಂದ್ರಪ್ಪ, ಎಂ.ಡಿ.ಮಹದೇವ್, ಲೋಕೇಶ್ ಹಾಗೂ ಇತರರು ಇದ್ದರು.

ಇಂದು ನಗರದ ವಿವಿಧೆಡೆ ನೀರಿನ ಅದಾಲತ್

ಬೆಂಗಳೂರು: ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಹಾಗೂ ಇನ್ನಿತರ ಕುಂದುಕೊರತೆಗಳನ್ನು ಆಲಿಸಿ ಪರಿಹರಿಸುವ ಸಲುವಾಗಿ ಜಲಮಂಡಳಿಯು ವಿವಿಧ ಉಪ ವಿಭಾಗಗಳಲ್ಲಿ ಗುರುವಾರ ನೀರಿನ ಅದಾಲತ್ ಹಮ್ಮಿಕೊಂಡಿದೆ.

ಸಮಯ: ಬೆಳಿಗ್ಗೆ 9.30 ರಿಂದ 11 ಗಂಟೆವರೆಗೆ

ಉಪ ವಿಭಾಗ	ವಿಳಾಸ	ಸೇವಾಠಾಣೆಗಳು	ದೂರವಾಣಿ ಸಂಖ್ಯೆ
ಪೂರ್ವ–2,3	1ನೇ ಮುಖ್ಯರಸ್ತೆ, ಕಸ್ತೂರಿನಗರ	ಬಾಣಸವಾಡಿ, ಓ.ಎಂ.ಬಿ.ಆರ್, ಲಿಂಗರಾಜಪುರಂ, ಕಸ್ತೂರಿನಗರ	9845444058
ಪೂರ್ವ–1,2	ಎ.ನಾರಾಯಣಪುರ ಮುಖ್ಯರಸ್ತೆ, ಕೆ.ಆರ್.ಪುರಂ ರೈಲ್ವೆ ನಿಲ್ದಾಣದ ಎದುರು, ಪಟಾಲಮ್ಮ ದೇವಸ್ಥಾನದ ಹತ್ತಿರ, ಹನುಮಾನ್ ಜಂಕ್ಷನ್, ಎ.ನಾರಾಯಣಪುರ	ಎ.ನಾರಾಯಣಪುರ, ದೊಡ್ಡನಕುಂದಿ, ವಿಜ್ಞಾನ ನಗರ	9740984162
ದಕ್ಷಿಣ–2	ವಾಟರ್ ಟ್ಯಾಂಕ್ ಹತ್ತಿರ, 100 ಅಡಿ ರಸ್ತೆ, ಬಿಟಿಎಂ 2ನೇ ಹಂತ	ಎಚ್‌ಎಸ್‌ಆರ್–1, ಕೋಡಿಚಿಕ್ಕನಹಳ್ಳಿ, ಬೊಮ್ಮನಹಳ್ಳಿ	40977432
ಆಗ್ನೇಯ–4	2ನೇ ಅಡ್ಡ ರಸ್ತೆ, 17ನೇ ಮುಖ್ಯರಸ್ತೆ, ಕೋರಮಂಗಲ 3ನೇ ಬ್ಲಾಕ್	ಕೋರಮಂಗಲ–1 ಮತ್ತು 2, ಬೆಳ್ಳಂದೂರು	9591988970
ಪಶ್ಚಿಮ–2	5ನೇ ಹಂತ, 1ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ	ಕೆಂಗೇರಿ, ಐಡಿಯಲ್ ಹೋಮ್ಸ್, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿನಗರ	28611826
ನೈರುತ್ಯ–2	ನೆಲಮಹಡಿ, 1ನೇ ಮುಖ್ಯರಸ್ತೆ, ಬನಶಂಕರಿ 3ನೇ ಹಂತ, ಬನಗಿರಿ ನಗರ	ಕತ್ರಿಗುಪ್ಪೆ, ಹೊಸಕೆರೆಹಳ್ಳಿ, ದೇವಗಿರಿ–1, ಇಟ್ಟಮಡು, ಬನಗಿರಿ ನಗರ	9845444113
ಆಗ್ನೇಯ–2	10ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಇಂದಿರಾನಗರ ಕ್ಲಬ್ ಹಿಂಭಾಗ, ಎಚ್‌ಎಎಲ್ 2ನೇ ಹಂತ	ಜೀವನ್‌ಬಿಮಾನಗರ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೈಯಪ್ಪನಹಳ್ಳಿ, ಸಿ.ವಿ. ರಾಮನ್ ನಗರ, ಸದಾನಂದನಗರ	9845444070
ವಾಯುವ್ಯ–3	5ನೇ ಬ್ಲಾಕ್, ಹೊರವರ್ತುಲ ರಸ್ತೆ, ನಾಗರಬಾವಿ	ನಾಗರಬಾವಿ, ಅನ್ನಪೂರ್ಣೇಶ್ವರಿನಗರ, ಸರ್.ಎಂ.ವಿ.ಲೇಔಟ್, ಮೂಡಲಪಾಳ್ಯ	23212181
ಕೇಂದ್ರ–2	ಮಿಲ್ಲರ್ಸ್ ರಸ್ತೆ, ಹೈಗ್ರೌಂಡ್ಸ್	ಹೈಗ್ರೌಂಡ್ಸ್ (ಎಚ್.ಜಿ.ಆರ್), ಕೋಲ್ಸ್ ಪಾರ್ಕ್, ಮಿಲ್ಲರ್ಸ್ ರಸ್ತೆ	22945191
ಉತ್ತರ–2	1ನೇ ಮಹಡಿ, ಪಿನಾಕಿನಿ ಭವನ, ದೊಡ್ಡಬಳ್ಳಾಪುರ ಮುಖ್ಯ ರಸ್ತೆ, ಯಲಹಂಕ ನ್ಯೂ ಟೌನ್	ಯಲಹಂಕ ಓಲ್ಡ್ ಟೌನ್, ಯಲಹಂಕ ನ್ಯೂ ಟೌನ್, ಅಟ್ಟೂರು	9740984163
ಈಶಾನ್ಯ–1	ಕೊಠಡಿ ಸಂಖ್ಯೆ 115, 1ನೇ ಮಹಡಿ, ಸುವರ್ಣ ಭವನ, 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರ	ಮಲ್ಲೇಶ್ವರ 1 ಮತ್ತು 2, ಶ್ರೀರಾಮಪುರ, ಯಶವಂತಪುರ 1 ಮತ್ತು 2, ಬಾಷ್ಯಂ ಪಾರ್ಕ್	9972438647
ಉತ್ತರ ವಿಲೇಜ್–1	1ನೇ ಮಹಡಿ, 7ನೇ ಮುಖ್ಯರಸ್ತೆ, ಎಂ.ಇ.ಐ ಲೇಔಟ್, ಹೆಸರಘಟ್ಟ ರಸ್ತೆ	ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ, ದೊಡ್ಡಬಿದರಕಲ್ಲು	9845444068

ಪ್ರಗತಿ ಪರಿಶೀಲನೆ ನಡೆಸಿದ ಸಚಿವರು

9 ರೈಲ್ವೆ ಯೋಜನೆಗಳು ವರ್ಷದೊಳಗೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2007 ರಲ್ಲಿ ಅನುಮೋದನೆಗೊಂಡಿದ್ದ ರಾಜ್ಯದ 9 ರೈಲ್ವೇ ಯೋಜನೆಗಳನ್ನು 2022 ರೊಳಗೆ ಪೂರ್ಣಗೊಳಿಸಲಾಗುವುದು ಎಂದು ವಸತಿ ಮತ್ತು ಮೂಲಸೌಲಭ್ಯಗಳ ಅಭಿವೃದ್ಧಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಈ ಯೋಜನೆಗಳ ಪ್ರಗತಿ ಪರಿಶೀಲನೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಗಳ ಅಂದಾಜು ಮೊತ್ತವನ್ನು ಪರಿಷ್ಕರಿಸಲಾಗಿದೆ. ಕಾಲಬದ್ಧವಾಗಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಹೆಚ್ಚಿನ ಮಾಹಿತಿ ನೀಡಲು ಆಗುವುದಿಲ್ಲ ಎಂದು ಹೇಳಿದರು.

ತುಮಕೂರು– ರಾಯದುರ್ಗ ರೈಲು ಮಾರ್ಗ ₹479.59 ಕೋಟಿಯಿಂದ ₹2,432.51 ಕೋಟಿಗೆ, ಗಿಣಿಗೇರಾ–ರಾಯಚೂರು ರೈಲು ಮಾರ್ಗ ₹1,350.91 ಕೋಟಿಯಿಂದ ₹2,565.09 ಕೋಟಿಗೆ, ಕುಡುಚಿ–ಬಾಗಲಕೋಟೆ ರೈಲು ಮಾರ್ಗ ₹816.14 ಕೋಟಿಯಿಂದ ₹1,525 ಕೋಟಿಗೆ ಮತ್ತು ತುಮಕೂರು–ಚಿತ್ರದುರ್ಗ–ದಾವಣಗೆರೆ ರೈಲು ಮಾರ್ಗ ₹1,801 ಕೋಟಿಯಿಂದ ₹2,161.37 ಕೋಟಿಗೆ ಏರಿಕೆಯಾಗಿದೆ. ಈ ನಾಲ್ಕು ಯೋಜನೆಗಳ ಅಂದಾಜು ಮೊತ್ತ ₹4,447.64 ಕೋಟಿಯಿಂದ ₹8,683.97 ಕೋಟಿಗೆ ಏರಿಕೆಯಾಗಿದೆ ಎಂದು ಅವರು ಹೇಳಿದರು.

ವಿ.ಸೋಮಣ್ಣ

ಅಲ್ಲದೆ, 59 ಅಂಡರ್‌ಪಾಸ್ ಮತ್ತು ಮೇಲುರಸ್ತೆಗಳ ಕಾಮಗಾರಿಗಳ ಬಗ್ಗೆಯೂ ಕೂಲಂಕಷ ಚರ್ಚೆ ನಡೆದಿದೆ. ಇವುಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಕಾರ್ಯದರ್ಶಿಗಳ ಜತೆ ಚರ್ಚೆ ನಡೆಸಿದ್ದೇನೆ. ಈ ಹಿಂದಿನ ಸರ್ಕಾರಗಳು ಈ ಯೋಜನೆಗಳ ಬಗ್ಗೆ ಗಮನಹರಿಸದ ಕಾರಣ ನನೆಗುದಿಯಲ್ಲಿದ್ದವು ಎಂದರು.

ಶಿವಮೊಗ್ಗ, ವಿಜಯಪುರ,ಹಾಸನ, ರಾಯಚೂರು ವಿಮಾನನಿಲ್ದಾಣಗಳು ಮತ್ತು ಕಾರವಾರ ಎನ್‌ಕ್ಲೇವ್‌ಗಳ ನಿರ್ಮಾಣ ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಲಾಗುವುದು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು. ಈ ಯೋಜನೆಗಳಿಗೆ ಹಣದ ಕೊರತೆ ಇಲ್ಲ ಎಂದು ಸೋಮಣ್ಣ ವಿವರಿಸಿದರು.

ಪ್ರತಿರೋಧ ತೋರಿದ ಸ್ಥಳೀಯರು

ಮನೆಗಳ ತೆರವಿಗೆ ಮುಂದಾದ ಎಪಿಎಂಸಿ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸರ್ಕಾರ ತಮಗೆ ಮೀಸಲಿರಿಸಿರುವ ಜಾಗದಲ್ಲಿನ ಮನೆಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧಿಕಾರಿಗಳು ಮಂಗಳವಾರದಂದು ಜೆಸಿಬಿ ಮೂಲಕ ತೆರವಿಗೆ ಮುಂದಾದಾಗ, ಸ್ಥಳೀಯರು ಅದಕ್ಕೆ ಪ್ರತಿರೋಧ ವ್ಯಕ್ತಪಡಿಸಿದರು. ಇದರಿಂದಾಗಿ, ಸ್ಥಳದಲ್ಲಿ ಕೆಲ ಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ನೆಲಮಂಗಲ ತಾಲೂಕು ಸೋಂಪುರ ಹೋಬಳಿ ಎಡೆಹಳ್ಳಿ ಗ್ರಾಮದ ಸರ್ವೆ ನಂಬರ್ 61ರ ಸರ್ಕಾರಿ ಜಮೀನಿನಲ್ಲಿ 'ಕೃಷಿ ಉತ್ಪನ್ನ ಮಾರುಕಟ್ಟೆ ಕಟ್ಟಡ ಮತ್ತು ಪ್ರಾಂಗಣ' ನಿರ್ಮಾಣ ಮಾಡಲು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ 6 ಎಕರೆ 10 ಗುಂಟೆ ಜಾಗ ಮಂಜೂರು ಮಾಡಲಾಗಿದೆ. ಆದರೆ, ಅದೇ ಸರ್ವೆ ನಂಬರ್ ಜಾಗದಲ್ಲಿ ಸುಮಾರು 80ಕ್ಕೂ ಹೆಚ್ಚು ದಲಿತ ಹಾಗೂ ಬಡ ಕುಟುಂಬಗಳು ಮನೆ ನಿರ್ಮಾಣ ಮಾಡಿಕೊಂಡು ಮೂವತ್ತು ವರ್ಷಗಳಿಂದ ವಾಸಿಸುತ್ತಿವೆ. ಅದರಲ್ಲಿ 40 ಕುಟುಂಬಗಳಿಗೆ ಸರ್ಕಾರದಿಂದ ಹಕ್ಕುಪತ್ರ ವಿತರಿಸಲಾಗಿದೆ. 40 ಕುಟುಂಬಗಳು ಇಲ್ಲಿಯೇ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದು, ತಹಶೀಲ್ದಾರ್ ಕಚೇರಿಗೆ ಆಶ್ರಯ ಯೋಜನೆಯ ನಿಯಮ '94 ಸಿ' ಅಡಿ ಹಕ್ಕು ಪತ್ರ ನೀಡಲು ಅರ್ಜಿ ಸಲ್ಲಿಸಿವೆ.

ಈ ನಡುವೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧಿಕಾರಿಗಳು ಜೆಸಿಬಿ ಮೂಲಕ ಮನೆಗಳ ತೆರವಿಗೆ ಮುಂದಾದಾಗ, ಸ್ಥಳೀಯರು ಅದಕ್ಕೆ ಪ್ರತಿರೋಧ ತೋರಿಸಿದರು.

ಸ್ಥಳಕ್ಕೆ ಬಂದ ನೆಲಮಂಗಲ ತಹಶೀಲ್ದಾರ್ ಕೆ. ಮಂಜುನಾಥ್ ಪ್ರತಿಭಟನಾ ನಿರತರೊಂದಿಗೆ ಚರ್ಚಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಈ ಜಮೀನಿನ ಸರ್ವೇ ಕಾರ್ಯ ನಡೆಸಿ, ಎಪಿಎಂಸಿಗೆ ಮೀಸಲಾದ ಜಾಗ ಹೊರತುಪಡಿಸಿ, ಉಳಿಕೆ ಜಾಗದಲ್ಲಿ ಇಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ದಲಿತರು ಹಾಗೂ ನಿರಾಶ್ರಿತರಿಗೆ ಅನುಕೂಲವಾಗುವಂತೆ ನಿವೇಶನಗಳ ಹಂಚಿಕೆ ಮಾಡಲು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳುವ ಭರವಸೆ ನೀಡಿದರು.

'ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಜಾಗ ಗುರುತಿಸಲು ಬಂದಾಗಲೇ, ಈ ಗೋಮಾಳವನ್ನು ವಸತಿ ಉದ್ದೇಶಕ್ಕೆ ಮೀಸಲಿಡುವಂತೆ ಮನವಿ ಮಾಡಿದ್ದೆವು. ಸೋಂಪುರ ಹೋಬಳಿ ಎಪಿಎಂಸಿ ನಿರ್ದೇಶಕ ಗಂಗಣ್ಣ ಅವರ ಮಾತು ಕೇಳಿ, ನಮಗೆ ಈ ಪರಿಸ್ಥಿತಿ ಬಂದಿದೆ. ಈ ಜಾಗ ಬಿಟ್ಟರೆ ನಮಗೆ ಬದಲಿ ಜಾಗವಿಲ್ಲ. ಹಾಗೊಮ್ಮೆ ನಮ್ಮನ್ನು ಇಲ್ಲಿಂದ ಒಕ್ಕಲೆಬ್ಬಿಸುವ ಪ್ರಯತ್ನ ಮಾಡಿದರೆ ಉಗ್ರ ಹೋರಾಟ ಮಾಡುತ್ತೇವೆ' ಎಂದರು ಸ್ಥಳೀಯ ದಲಿತ ಮುಖಂಡ ಕಾಂತರಾಜು.

ಸಿಗ್ನಲ್‌ಗೆ ಅಳವಡಿಸಿದ್ದ ಬ್ಯಾಟರಿ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕನಗರದ ನಂಜಪ್ಪ ವೃತ್ತದಲ್ಲಿ ಸಂಚಾರ ಸಿಗ್ನಲ್‌ಗೆ ಅಳವಡಿಸಿದ್ದ ಬ್ಯಾಟರಿಗಳನ್ನು ಕಳವು ಮಾಡಲಾಗಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿದೆ.

‘ಸಂಚಾರ ಠಾಣೆ ಎಎಸ್‌ಐ ಮಹದೇವಯ್ಯ ದೂರು ನೀಡಿದ್ದಾರೆ. ಕಳ್ಳತನ ಆರೋಪದಡಿ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಾಹನಗಳ ಸುಗಮ ಸಂಚಾರಕ್ಕಾಗಿ ವೃತ್ತದಲ್ಲಿ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಅದರ ಕಾರ್ಯನಿರ್ವಹಣೆಗೆ ಅಗತ್ಯವಾದ ವಿದ್ಯುತ್ ಪೂರೈಸಲು ಎರಡು ಬ್ಯಾಟರಿಗಳನ್ನು ಅಳವಡಿಸಲಾಗಿತ್ತು. ಅದೇ ಬ್ಯಾಟರಿಗಳನ್ನೇ ಕಳವು ಮಾಡಲಾಗಿದೆ.’

‘ಸಿಗ್ನಲ್ ಬಾಕ್ಸ್ ಮುರಿದಿರುವ ಅಪರಿಚಿತರು, ಅದರೊಳಗಿದ್ದ ಬ್ಯಾಟರಿಗಳನ್ನು ಕದ್ದೊಯ್ದಿದ್ದಾರೆ. ವೃತ್ತ ಹಾಗೂ ಅಕ್ಕ–ಪಕ್ಕದ ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದೂ ಮೂಲಗಳು ತಿಳಿಸಿವೆ.

₹35 ಸಾವಿರ ವೇತನ ನಿಗದಿಗೆ ಒತ್ತಾಯ

ವೇತನ ಹೆಚ್ಚಳಕ್ಕೆ ಆಗ್ರಹಿಸಿ ಪೌರ ಕಾರ್ಮಿಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ವೇತನ ಹೆಚ್ಚಳ, ಕೆಲಸ ಕಾಯಂ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬಿಬಿಎಂಪಿ ಪೌರ ಕಾರ್ಮಿಕರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಪೌರ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಮೆಯೊ ಹಾಲ್ ವೃತ್ತದಲ್ಲಿನ ಬಿಬಿಎಂಪಿ ಪೂರ್ವ ವಲಯದ ಕಚೇರಿ ಎದುರು ಧರಣಿ ನಡೆಸಿದ ಕಾರ್ಮಿಕರು, ಹಕ್ಕೊತ್ತಾಯಗಳನ್ನು ಮಂಡಿಸಿದರು.

‘₹35 ಸಾವಿರ ಕನಿಷ್ಠ ವೇತನ ನಿಗದಿ ಮಾಡಬೇಕು. ಘನತೆಯಿಂದ ಕೆಲಸ ಮಾಡುವ ವಾತಾವರಣ ನಿರ್ಮಾಣ ಮಾಡಬೇಕು. ನಗರವನ್ನು ಸ್ವಚ್ಛವಾಗಿಡಲು ಶ್ರಮಿಸುವ ಪೌರ ಕಾರ್ಮಿಕರಿಗೆ ಉಚಿತ ವಸತಿ ಮತ್ತು ಅವರ ಮಕ್ಕಳಿಗೆ ಉಚಿತ ಶಿಕ್ಷಣ ವ್ಯವಸ್ಥೆ ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.

ರಸ್ತೆ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಬಡಾವಣೆಗಳ ಮನೆಯವರು, ಅಂಗಡಿಯವರು ಮತ್ತು ಬಿಬಿಎಂಪಿ ಅಧಿಕಾರಿಗಳು ಪೌರ ಕಾರ್ಮಿಕರನ್ನು ಕೇವಲವಾಗಿ ಕಾಣುತ್ತಿದ್ದಾರೆ. ಕಾರ್ಮಿಕರ ಜತೆ ಮರ್ಯಾದೆಯಿಂದ ಮಾತನಾಡುವ ರೀತಿಯಲ್ಲಿ ಘನತೆ ಹೆಚ್ಚಿಸುವ ಕೆಲಸವನ್ನು ಬಿಬಿಎಂಪಿ ಮಾಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಮುಖ್ಯಾಂಶಗಳು

- ಕೆಲಸ ಕಾಯಂ ಗೊಳಿಸಲು ಒತ್ತಾಯ
- ಉಚಿತ ವಸತಿ ಸೌಲಭ್ಯಕ್ಕೆ ಆಗ್ರಹ
- ಸುರಕ್ಷತಾ ಸಲಕರಣೆ ಒದಗಿಸಲು ಒತ್ತಾಯ

‘ಬಹುತೇಕ ಪೌರ ಕಾರ್ಮಿಕರು ಮಹಿಳೆಯರೇ ಆಗಿದ್ದು, ದಲಿತ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ. ನಮ್ಮನ್ನು ಕೀಳಾಗಿ ಕಾಣುವುದು ಸಹಜವಾಗಿದೆ. ಲೈಂಗಿಕ ಕಿರುಕುಳ, ಜಾತಿ ದೌರ್ಜನ್ಯ ತಪ್ಪಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೆಯೊ ಹಾಲ್ ವೃತ್ತದ ಬಿಬಿಎಂಪಿ ವಲಯ ಕಚೇರಿ ಎದುರು ಪ್ರತಿಭಟನೆ ನಡೆಸಿದ ಪೌರ ಕಾರ್ಮಿಕರು

ಕುಡಿಯುವ ನೀರು, ಶೌಚಾಲಯ, ಸುರಕ್ಷತಾ ಸಲಕರಣೆ ಒದಗಿಸದೆ ಕಾರ್ಮಿಕರು ಘನತೆಯಿಂದ ಕೆಲಸ ಮಾಡುವ ವಾತಾವರಣ ಕಲ್ಪಿಸುವಲ್ಲಿ ಬಿಬಿಎಂಪಿ ವಿಫಲವಾಗಿದೆ ಎಂದು ಆರೋಪಿಸಿದರು.

ಕಾರ್ಮಿಕರ ಮನವಿ ಸ್ವೀಕರಿಸಿದ ವಲಯ ಜಂಟಿ ಆಯುಕ್ತೆ ಶಿಲ್ಪಾ ಅವರು, ಪೌರ ಕಾರ್ಮಿಕರ ಬೇಡಿಕೆ ಈಡೇರಿಸುವ ಭರವಸೆ ನೀಡಿದರು.

ಎರಡು ತಿಂಗಳಿಂದ ಆಸ್ಪತ್ರೆಗೆ ಬಿಡುಗಡೆಯಾಗದ ಅನುದಾನ • ಸಂಕಷ್ಟಕ್ಕೆ ಸಿಲುಕಿದ ನೌಕರರು

ಪಿಎಂಎಸ್‌ಎಸ್‌ವೈ: ಕೋವಿಡ್ ಯೋಧರಿಗಿಲ್ಲ ವೇತನ!

• ವರುಣ ಹೆಗಡೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಡಿ (ಪಿಎಂಎಸ್‌ಎಸ್‌ವೈ) ಕಾರ್ಯನಿರ್ವಹಿಸುತ್ತಿರುವ ಕೋವಿಡ್ ಯೋಧರಿಗೆ ಸರ್ಕಾರವು ಎರಡು ತಿಂಗಳಿಂದ ವೇತನ ಬಿಡುಗಡೆ ಮಾಡಿಲ್ಲ. ಇದರಿಂದಾಗಿ ವೈದ್ಯರು, ಶುಶ್ರೂಷಕರು ಸೇರಿದಂತೆ ಅಲ್ಲಿನ ವೈದ್ಯಕೀಯ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕೋವಿಡ್ ಎರಡನೇ ಅಲೆಯ ವೇಳೆ ನಗರದಲ್ಲಿ ಅಧಿಕ ಪ್ರಕರಣಗಳು ಕಾಣಿಸಿಕೊಂಡಾಗ ಹಾಸಿಗೆಗಳ ಸಮಸ್ಯೆ ಉದ್ಭವಿಸಿತ್ತು. ವಿಕ್ಟೋರಿಯಾ ಹಾಗೂ ಟ್ರಾಮಾ ಕೇರ್‌ನಲ್ಲಿ ಹಾಸಿಗೆಗಳು ಭರ್ತಿಯಾದಾಗ 200 ಹಾಸಿಗೆಗಳ ಪಿಎಂಎಸ್‌ಎಸ್‌ವೈ ಆಸ್ಪತ್ರೆಯನ್ನೂ ಪೂರ್ಣ ಪ್ರಮಾಣದ ಕೋವಿಡ್ ಆಸ್ಪತ್ರೆಯನ್ನಾಗಿ ಮಾರ್ಪಾಡು ಮಾಡಲಾಗಿತ್ತು. ಆಗ ಅಲ್ಲಿನ ವೈದ್ಯಕೀಯ ಸಿಬ್ಬಂದಿಯನ್ನೂ

ಪಿಎಂಎಸ್‌ಎಸ್‌ವೈ ಆಸ್ಪತ್ರೆ — ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಕೋವಿಡ್ ಸೇವೆಗೆ ನಿಯೋಜಿಸಲಾಗಿತ್ತು. ಆಸ್ಪತ್ರೆಯು 30 ಐಸಿಯು ಹಾಸಿಗೆ, 48 ವೈದ್ಯಕೀಯ ಆಮ್ಲಜನಕ ಸಂಪರ್ಕ ಸಹಿತ ಹಾಸಿಗೆ, 28 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳನ್ನು ಒಳಗೊಂಡಿದೆ. ಈ ಹಾಸಿಗೆಗಳು ಕೋವಿಡ್ ಚಿಕಿತ್ಸೆಗೆ ಸಹಕಾರಿಯಾಗಿದ್ದವು.

ಜುಲೈನಲ್ಲಿ ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಬರುತ್ತಿದ್ದಂತೆ ಕೋವಿಡೇತರ ಸೇವೆಗಳನ್ನು ಪ್ರಾರಂಭಿಸಲಾಗಿತ್ತು. ಅಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕರಾದ 50 ಮಂದಿ ಸೇರಿದಂತೆ 180 ಶುಶ್ರೂಷಕರು, 100ಕ್ಕೂ ಅಧಿಕ ವೈದ್ಯಕೀಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ವೇತನ ಈವರೆಗೂ ಸರ್ಕಾರದಿಂದ ಬಿಡುಗಡೆಯಾಗಿಲ್ಲ. ಯಾವಾಗ ಬಿಡುಗಡೆ ಆಗುತ್ತದೆ ಎನ್ನುವುದರ ಭರವಸೆಯನ್ನೂ ವೈದ್ಯಕೀಯ ಶಿಕ್ಷಣ ಇಲಾಖೆ ನೀಡಿಲ್ಲ. ಇದರಿಂದಾಗಿ ಅವರು ಗೊಂದಲಕ್ಕೆ ಸಿಲುಕಿದ್ದಾರೆ.

ಕುಟುಂಬ ನಿರ್ವಹಣೆ ಸವಾಲು: 'ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡಾಗ ಕೆಲ ತಿಂಗಳು ಕೋವಿಡ್ ಸೇವೆಯನ್ನು ಒದಗಿಸಿದ್ದೆವು. ಆಗ ಸರ್ಕಾರವು ನಮ್ಮನ್ನು ಕೋವಿಡ್ ಯೋಧರೆಂದು ಕರೆದು, ಭತ್ಯೆಗಳನ್ನು ನೀಡುವುದಾಗಿ ಘೋಷಿಸಿತ್ತು. ಆದರೆ, ಈಗ ತಿಂಗಳ ವೇತನವನ್ನೇ ನೀಡುತ್ತಿಲ್ಲ. ಇದರಿಂದ ಕುಟುಂಬ ನಿರ್ವಹಣೆ ಸವಾಲಾಗಿದೆ. ಈ ಬಾರಿ ದೀಪಾವಳಿ ಹಬ್ಬದಲ್ಲಿ ಕೂಡ ಸಂಭ್ರಮ ಇರಲಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆಸ್ಪತ್ರೆಯ ಶುಶ್ರೂಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.

'ವೇತನ ನೀಡದಿರುವುದರಿಂದ ಮನೆ ಬಾಡಿಗೆ ಕಟ್ಟುವುದೂ ಕಷ್ಟವಾಗಿದೆ. ಏನು ಮಾಡುವುದೆಂದು ತಿಳಿಯದಂತಾಗಿದೆ. ನಮ್ಮ ಆಸ್ಪತ್ರೆಯಲ್ಲಿ ಮಾತ್ರ ಈ ರೀತಿ ಸಮಸ್ಯೆಯಾಗಿದೆ. ಯಾವಾಗ ವೇತನ ಆಗುತ್ತದೆ ಎಂಬುದು ತಿಳಿಯದಾಗಿದೆ' ಎಂದು ಗುತ್ತಿಗೆ ಆಧಾರದಲ್ಲಿ ನೇಮಕಾರದ ಶುಶ್ರೂಷಕರು ತಿಳಿಸಿದರು.

ಹಿಂಬರಹ ನೀಡಿದ ಆಸ್ಪತ್ರೆ

ವೇತನ ಆಗದಿರುವುದಕ್ಕೆ ಕಾರಣ ಕೇಳಿದ ಆಸ್ಪತ್ರೆಯ ನೌಕರರು, ಹಿಂಬರಹ ನೀಡುವಂತೆ ಆಗ್ರಹಿಸಿದ್ದರು. ನೌಕರರ ಒತ್ತಡಕ್ಕೆ ಮಣಿದ ಆಸ್ಪತ್ರೆಯ ವಿಶೇಷಾಧಿಕಾರಿ ಹಿಂಬರಹ ನೀಡಿದ್ದು, 'ಇತರೆ ಅನುದಾನದಿಂದ ಆಗಸ್ಟ್ ತಿಂಗಳ ವೇತನವನ್ನು ನೀಡಲಾಗಿದೆ. ಸೆಪ್ಟೆಂಬರ್, ಅಕ್ಟೋಬರ್ ತಿಂಗಳ ವೇತನವನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಅನುದಾನವು ಆಸ್ಪತ್ರೆ ಖಾತೆಗೆ ಸರ್ಕಾರದಿಂದ ಬಿಡುಗಡೆಯಾದಲ್ಲಿ ಮಾತ್ರ ಆಯಾ ತಿಂಗಳ ವೇತನವನ್ನು ನೀಡಲಾಗುವುದು' ಎಂದು ತಿಳಿಸಲಾಗಿದೆ.

'ಈಗ ಆಸ್ಪತ್ರೆಯಲ್ಲಿ ₹ 20 ಲಕ್ಷ ಅನುದಾನ ಮಾತ್ರ ಉಳಿದಿದೆ. ಕೆಲವು ಆಸ್ಪತ್ರೆಗಳು ಉಳಿದಿದ್ದ ವಿಶೇಷ ಅನುದಾನದಲ್ಲಿ ಸೆಪ್ಟೆಂಬರ್ ತಿಂಗಳ ವೇತನವನ್ನು ಪಾವತಿಸಿವೆ. 4–5 ವರ್ಷಕೊಮ್ಮೆ ಈ ರೀತಿ ಸಮಸ್ಯೆಯಾಗುತ್ತದೆ. ಈ ಮೊದಲು ಮೂರು ತಿಂಗಳಿಗೆ ಅನುದಾನ ಬಿಡುಗಡೆಯಾಗುತ್ತಿದ್ದ ಅನುದಾನ, ಈಗ ಪ್ರತಿ ತಿಂಗಳು ಬಿಡುಗಡೆ ಮಾಡಲಾಗುತ್ತಿತ್ತು. ಶೀಘ್ರದಲ್ಲಿಯೇ ಸೆಪ್ಟೆಂಬರ್, ಅಕ್ಟೋಬರ್ ತಿಂಗಳ ವೇತನಕ್ಕೆ ಅನುದಾನ ಬಿಡುಗಡೆಯಾಗುವ ವಿಶ್ವಾಸವಿದೆ' ಎಂದು ಡಾ.ಪಿ.ಜಿ. ಗಿರೀಶ್ ಹೇಳಿದರು.

ವೇತನಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿಲ್ಲ. ಇದರಿಂದಾಗಿ ವೇತನ ಪಾವತಿ ವಿಳಂಬವಾಗಿದೆ. ಈ ರೀತಿ ಸಮಸ್ಯೆ ಎಲ್ಲ ಕಡೆ ಆಗಿದೆ.

ಡಾ.ಪಿ.ಜಿ. ಗಿರೀಶ್
ಪಿಎಂಎಸ್‌ಎಸ್‌ವೈ ಆಸ್ಪತ್ರೆ ನಿರ್ದೇಶಕ

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.18 ಕೋಟಿ ▲	3.43 ಕೋಟಿ
ಸಕ್ರಿಯ ಪ್ರಕರಣ	1.88 ಕೋಟಿ ▲	1.39 ಲಕ್ಷ ▼
ಗುಣಮುಖ	22.79 ಕೋಟಿ ▲	3.37 ಕೋಟಿ
ಸಾವು	50.84 ಲಕ್ಷ ▲	4.61 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.63 ಲಕ್ಷ ▲	11,466 ▲
ಗುಣಮುಖ	4.35 ಲಕ್ಷ ▲	11,961 ▼
ಸಾವು	7,726 ▲	460 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

- 1.40 ಲಕ್ಷ ಮಹಾರಾಷ್ಟ್ರ
- 36,238 ತಮಿಳುನಾಡು ▲
- 34,362 ಕೇರಳ ▼

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

- 66.19 ಮಹಾರಾಷ್ಟ್ರ ▲
- 50.27 ಕೇರಳ ▲
- 27.10 ತಮಿಳುನಾಡು ▲

ಯುವ ಕಾಂಗ್ರೆಸ್‌ಗೆ 15 ಮಂದಿ ವಕ್ತಾರರು

ಬೆಂಗಳೂರು: ರಾಜ್ಯಮಟ್ಟದ ಯುವ ಕಾಂಗ್ರೆಸ್ ವಕ್ತಾರರ ಆಯ್ಕೆಗಾಗಿ ನಡೆದ ಭಾಷಣ ಸ್ಪರ್ಧೆ 'ಯಂಗ್ ಇಂಡಿಯಾ ಕಿ ಬೋಲ್'ನಲ್ಲಿ (ಯುವ ಭಾರತ ಮಾತನಾಡಿ) 15 ಮಂದಿ ಆಯ್ಕೆಯಾಗಿದ್ದು, ಅವರನ್ನು ರಾಜ್ಯಮಟ್ಟದ ವಕ್ತಾರರಾಗಿ ನಿಯೋಜಿಸಲಾಗುವುದು' ಎಂದು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ರಕ್ಷಾ ರಾಮಯ್ಯ ತಿಳಿಸಿದರು.

'ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ನಿರುದ್ಯೋಗ, ಬೆಲೆ ಏರಿಕೆ ಸೇರಿದಂತೆ ಜನಪರ ಸಮಸ್ಯೆಗಳ ಕುರಿತು ಭಾಷಣ ಸ್ಪರ್ಧೆ ನಡೆಸಲಾಗಿತ್ತು. ಇದೇ ತಿಂಗಳ 14ರಂದು ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಹಂತದ ಸ್ಪರ್ಧೆಯಲ್ಲಿ ಈ 15 ಮಂದಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ' ಎಂದು ಅವರು ಹೇಳಿದರು.

'ಜನಪರ ಸಮಸ್ಯೆಗಳು, ಅದರಲ್ಲೂ ಪ್ರಮುಖವಾಗಿ ಯುವ ಸಮೂಹ ಎದುರಿಸುತ್ತಿರುವ ನಿರುದ್ಯೋಗ, ಬೆಲೆ ಏರಿಕೆ, ಪ್ರಜಾಪ್ರಭುತ್ವದ ಕಗ್ಗೊಲೆ, ಬೆನ್ನು ಮುರಿಯುವ ಹಣದುಬ್ಬರ ತಡೆಯುವಲ್ಲಿ ಬಿಜೆಪಿ ಸರ್ಕಾರದ ವಿಫಲತೆ, ಕೋವಿಡ್ ನಿರ್ವಹಣೆಯಲ್ಲಿನ ಲೋಪ ಕುರಿತು ಸ್ಪರ್ಧಿಗಳು ಪಾಂಡಿತ್ಯಪೂರ್ಣವಾಗಿ ವಿಷಯ ಮಂಡಿಸಿದರು' ಎಂದರು.

ರಕ್ಷಾ ರಾಮಯ್ಯ

ಯಂಗ್ ಇಂಡಿಯಾ ಬೋಲ್' ಕಾರ್ಯಕ್ರಮದ ಉಸ್ತುವಾರಿ ಪ್ರೀತಿ ಶೇಷ ಅವರು ಸ್ಪರ್ಧೆಗೆ ಚಾಲನೆ ನೀಡಿದರು.

ರಾಷ್ಟ್ರೀಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಅನಿಲ್, ಸುರಭಿ ದ್ವಿವೇದಿ, ಬಲರಾಂ ಗೌಡ ಇದ್ದರು.

ಸಚಿವ ಪ್ರಲ್ಹಾದ ಜೋಶಿ ಭೇಟಿ ಮಾಡಿ ಮನವಿ ಸಲ್ಲಿಕೆ

ಕಲ್ಲಿದ್ದಲು ಗಣಿಗಾರಿಕೆಗೆ ಅನುಮತಿ: ಸಿ.ಎಂ

ಪ್ರಜಾವಾಣಿ ವಾರ್ತೆ

ನವದೆಹಲಿ: ಒಡಿಶಾದಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರತ್ಯೇಕವಾಗಿ ಹಂಚಿಕೆ ಮಾಡಲಾದ ಕಲ್ಲಿದ್ದಲು ಗಣಿಯಲ್ಲಿ ಗಣಿಗಾರಿಕೆ ನಡೆಸಲು ಕೇಂದ್ರದ ಪರಿಸರ ಅನುಮತಿ ದೊರೆತಿದೆ. ಶೀಘ್ರವೇ ಗಣಿಗಾರಿಕೆ ಆರಂಭಿಸುವ ಮೂಲಕ ಅಗತ್ಯ ಕಲ್ಲಿದ್ದಲು ಪಡೆಯಲಾಗುವುದು ಎಂದು ಬೊಮ್ಮಾಯಿ ಹೇಳಿದರು.

ಇಲ್ಲಿನ ಕರ್ನಾಟಕ ಭವನದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವ ಪ್ರಲ್ಹಾದ ಜೋಶಿ ಅವರನ್ನು ಭೇಟಿ ಮಾಡಿ ಚರ್ಚಿಸಿ ರಾಜ್ಯಕ್ಕೆ ಕಲ್ಲಿದ್ದಲು ಪೂರೈಕೆ ಮಾಡುವಂತೆ ಮನವಿ ಸಲ್ಲಿಸಲಾಗಿದೆ.



ಬಸವರಾಜ ಬೊಮ್ಮಾಯಿ

ಸದ್ಯ ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲಿನ ಕೊರತೆ ಇಲ್ಲ. ಗಣಿಗಾರಿಕೆ ಆರಂಭವಾದ ನಂತರ ಸಾಕಷ್ಟು ಪ್ರಮಾಣದ ಕಲ್ಲಿದ್ದಲು ಲಭ್ಯವಾಗಲಿದೆ ಎಂದರು.

ಮಹಾರಾಷ್ಟ್ರದಲ್ಲಿ ಹಂಚಿಕೆಯಾಗಿರುವ ಗಣಿಗಳಿಂದಲೂ ಅಧಿಕ ಪ್ರಮಾಣದ ಕಲ್ಲಿದ್ದಲು ಪೂರೈಸಲು ಮನವಿ ಮಾಡಲಾಗಿದೆ. ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲ ಎಂದು ಅವರು ವಿವರಿಸಿದರು.

ಮೇಕೆದಾಟು ಯೋಜನೆ ಆರಂಭಿಸಲು ಕೇಂದ್ರದ ಪರಿಸರ ಅನುಮತಿ ಮಾತ್ರವಲ್ಲದೆ, ಕೇಂದ್ರ ಜಲ ಆಯೋಗ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅನುಮತಿಯೂ ಬೇಕಿದೆ. ಆದರೂ ಕಾಂಗ್ರೆಸ್ ವಿನಾಕಾರಣ ಪ್ರತಿಭಟನೆ ನಡೆಸುತ್ತಿರುವುದರಲ್ಲಿ ಅರ್ಥವಿಲ್ಲ ಎಂದು ಅವರು ದೂರಿದರು.

ತಮ್ಮ ಅಧಿಕಾರದ ಅವಧಿಯಲ್ಲಿ ಕೇಂದ್ರಕ್ಕೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಲ್ಲಿಸಿ ಮೇಕೆದಾಟು ಯೋಜನೆಯ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳದ ಕಾಂಗ್ರೆಸ್‌ನ ಮುಖಂಡರು, ಈ ಕುರಿತ ಪ್ರಕರಣವು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿರುವಾಗ ಅನಗತ್ಯವಾಗಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಅವರು ಟೀಕಿಸಿದರು.

ಕೋವಿಡ್: ಪ್ರಕರಣಗಳ ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 328 ಕೋವಿಡ್ ಪ್ರಕರಣಗಳು ವರದಿಯಾಗಿವೆ. 11 ದಿನಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 8 ಸಾವಿರದ ಗಡಿ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.17 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.27 ರಷ್ಟು ವರದಿಯಾಗಿದೆ. 6 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 8 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 176 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.90 ಲಕ್ಷ ದಾಟಿದೆ.

17 ಜಿಲ್ಲೆಗಳಲ್ಲಿ 50 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ. ಬೆಂಗಳೂರಿನಲ್ಲಿ ಗರಿಷ್ಠ (6,567) ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 247 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.44 ಲಕ್ಷ ದಾಟಿದೆ.

9 ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ ಐದು, ದಕ್ಷಿಣ ಕನ್ನಡದಲ್ಲಿ ಇಬ್ಬರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.74 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,131ಕ್ಕೆ ಏರಿಕೆಯಾಗಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,53,353 ▲ ಒಟ್ಟು ಸೋಂಕಿತರು (12,53,177 ನಿನ್ನೆಯ ವಿವರ)

6,567 ▲	12,30,482 ▲	16,303 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	176 ▼
ಗುಣಮುಖ	102 ▼
ಸಾವು	05 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಂಪುಟ ಪುನರ್‌ರಚನೆ? ಪ್ರಿಯಾಂಕಾ ಭೇಟಿ ಮಾಡಿದ ಮುಖ್ಯಮಂತ್ರಿ ಗೆಹಲೋತ್

ನವದೆಹಲಿ (ಪಿಟಿಐ): ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಕಾಂಗ್ರೆಸ್‌ನ ಹಿರಿಯ ಮುಖಂಡರನ್ನು ಬುಧವಾರ ಭೇಟಿ ಮಾಡಿ, ಚರ್ಚೆ ನಡೆಸಿದ್ದಾರೆ.

ರಾಜ್ಯ ಸಚಿವ ಸಂಪುಟ ಪುನರ್‌ರಚನೆ ಮಾಡುವ ಸಾಧ್ಯತೆಗಳಿವೆ. ಹಾಗಾಗಿ ಮುಖ್ಯಮಂತ್ರಿ ಗೆಹಲೋತ್ ಅವರ ಈ ಭೇಟಿ ಕುತೂಹಲ ಕೆರಳಿಸಿದೆ.

ಮುಖಂಡ ರಾಹುಲ್ ಗಾಂಧಿ ನಿವಾಸದಲ್ಲಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೊಂದಿಗೆ ಗೆಹಲೋತ್ ಅವರು ಮೂರು ಗಂಟೆಗಳಿಗೂ ಹೆಚ್ಚು ಕಾಲ ಮಾತುಕತೆ ನಡೆಸಿದರು. ಈ ವೇಳೆ ರಾಹುಲ್ ಗಾಂಧಿ ಅವರು ಇರಲಿಲ್ಲ. ಮುಖಂಡರಾದ ಅಜಯ್ ಮಾಕೇನ್ ಹಾಗೂ ಕೆ.ಸಿ. ವೇಣುಗೋಪಾಲ್ ಇದ್ದರು ಎಂದು ಮೂಲಗಳು ಹೇಳಿವೆ.

ಸಂಭಾವ್ಯ ವಿಸ್ತರಣೆಯಲ್ಲಿ ಸಚಿನ್ ಪೈಲಟ್ ಬೆಂಬಲಿಗರು ಸೇರಿದಂತೆ ಎಲ್ಲ ಗುಂಪುಗಳಿಗೆ ಪ್ರಾತಿನಿಧ್ಯ ನೀಡಬೇಕಾದ ಒತ್ತಡದಲ್ಲಿ ಗೆಹಲೋತ್ ಇದ್ದಾರೆ. ಈ ಹಿನ್ನೆಲೆಯಲ್ಲಿ ಪಕ್ಷದ ಮುಖಂಡರೊಂದಿಗಿನ ಭೇಟಿ ಹಲವು ಚರ್ಚೆಗಳಿಗೆ ಕಾರಣವಾಗಿದೆ.

ಬಿಟ್‌ಕಾಯಿನ್ ಪ್ರಕರಣ: ಬಿಜೆಪಿ ಶಾಸಕರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಪ್ರಕರಣ ದಿನದಿಂದ ದಿನಕ್ಕೆ ಕಾವು ಪಡೆದುಕೊಳ್ಳುತ್ತಿರುವ ಬೆನ್ನಲ್ಲೇ ಅದರ ಬಗ್ಗೆ ಚರ್ಚಿಸಲು ಬಿಜೆಪಿ ಶಾಸಕರು, ಸಚಿವರು ಒಟ್ಟಿಗೆ ಸೇರಿ ಬುಧವಾರ ಸಭೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಕಾರಣವಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದೆಹಲಿಗೆ ದಿಢೀರ್ ಭೇಟಿ ನೀಡಿರುವ ಬೆನ್ನಲ್ಲೇ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರ ಮನೆಯಲ್ಲಿ ಸಭೆ ನಡೆದಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೂಚನೆ ಮೇರೆಗೆ ಈ ಸಭೆ ನಡೆದಿದ್ದು, ಬಿಟ್ ಕಾಯಿನ್ ಪ್ರಕರಣದ ಹಿಂದೆ ಯಾರೆಲ್ಲ ಇದ್ದಾರೆ, ಅದರ ಅಗಾಧತೆ ಎಷ್ಟಿದೆ ಎಂಬ ಮಾಹಿತಿ ಕಲೆ ಹಾಕಿ, ಕಾಂಗ್ರೆಸ್‌ಗೆ ಉತ್ತರ ನೀಡುವ ಸಂಬಂಧ ಚರ್ಚೆ ನಡೆಸಲಾಯಿತು ಎಂದು ಮೂಲಗಳು ಹೇಳಿವೆ.

ಸಭೆಯಲ್ಲಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಶಾಸಕರಾದ ಜಗದೀಶ ಶೆಟ್ಟರ್, ರಾಜೂಗೌಡ, ವಿರೂಪಾಕ್ಷಪ್ಪ ಬಳ್ಳಾರಿ, ಶಿವರಾಜ್ ಪಾಟೀಲ, ಪ್ರೊ. ಲಿಂಗಣ್ಣ, ಬಿಜೆಪಿ ಮುಖಂಡರಾದ ಎಂ.ರುದ್ರೇಶ್, ಮರಿಸ್ವಾಮಿ ಮುಂತಾದವರು ಇದ್ದರು.

ಎಂ.ಪಿ.ರೇಣುಕಾಚಾರ್ಯ ನಿವಾಸದಲ್ಲಿ ಶಾಸಕ ಜಗದೀಶ ಶೆಟ್ಟರ್, ರಾಜೂಗೌಡ, ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಮುಂತಾದವರು ಇದ್ದರು.

ಎಂ.ಪಿ.ರೇಣುಕಾಚಾರ್ಯ ಅವರು ಶಾಸಕ ಬಿ.ಎಸ್.ಯಡಿಯೂರಪ್ಪ ಅವರ ಆಪ್ತ ಬಣಕ್ಕೆ ಸೇರಿದ್ದಾರೆ. ಇತ್ತೀಚೆಗೆ ರೇಣುಕಾಚಾರ್ಯ ಅವರ ಕಾಲಿನ ಶಸ್ತ್ರ ಚಿಕಿತ್ಸೆ ನಡೆದಿದ್ದು, ಆರೋಗ್ಯ ವಿಚಾರಿಸುವ ನೆಪದಲ್ಲಿ ಈ ಮುಖಂಡರು ಒಂದು ಗಂಟೆಗೆ ಹೆಚ್ಚು ಸಮಯ ಮಾತುಕತೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ದಾಖಲೆ ಇದ್ದರೆ ಬಿಡುಗಡೆ ಮಾಡಿ: 'ಬಿಟ್‌ಕಾಯಿನ್ ಪ್ರಕರಣದಲ್ಲಿ ಬಿಜೆಪಿಯ ಯಾವುದೇ ನಾಯಕರು ಭಾಗಿಯಾಗಿರುವ ದಾಖಲೆಗಳು ನಿಮ್ಮ ಬಳಿ ಇದ್ದರೆ ತಡ ಮಾಡದೇ ಬಿಡುಗಡೆ ಮಾಡಿ' ಎಂದು ರೇಣುಕಾಚಾರ್ಯ ಅವರು ಕಾಂಗ್ರೆಸ್‌ಗೆ ಬಹಿರಂಗ ಸವಾಲು ಹಾಕಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬುಟ್ಟಿಯಲ್ಲಿದೆ ಹಾವಿದೆ ಬಿಡುತ್ತೇನೆ ಎಂದು ಹೇಳುವುದು ಬೇಡ. ನಿಮ್ಮ ಬಳಿ ನಮ್ಮ ಪಕ್ಷದ ನಾಯಕರು ಶಾಮೀಲಾಗಿರುವ ದಾಖಲೆಗಳಿದ್ದರೆ ಬಹಿರಂಗ ಮಾಡಲು ತಡವೇಕೆ' ಎಂದು ಪ್ರಶ್ನಿಸಿದರು.

'ದಾಖಲೆ ಬಹಿರಂಗಪಡಿಸಲಿ'

ಗಂಗಾವತಿ: 'ಬಿಟ್ ಕಾಯಿನ್ ಹಗರಣದ ಕುರಿತು ಕಾಂಗ್ರೆಸ್ ನಾಯಕರು ಬಿಜೆಪಿ ನಾಯಕರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿರುವುದು ಸರಿಯಲ್ಲ. ಅವರ ಬಳಿ ದಾಖಲೆಗಳಿದ್ದರೆ, ಸಾಬೀತು ಪಡಿಸಲಿ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಸವಾಲು ಹಾಕಿದರು.

ಕೆ.ಎಸ್.ಈಶ್ವರಪ್ಪ

ತಾಲ್ಲೂಕಿನ ಆನೆಗೊಂದಿ ಸಮೀಪ ಅಂಜನಾದ್ರಿ ದೇವಸ್ಥಾನಕ್ಕೆ ಬುಧವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಟ್ ಕಾಯಿನ್ ಹಗರಣ ಮುಖ್ಯಮಂತ್ರಿ ಬೊಮ್ಮಾಯಿ ಸ್ಥಾನಕ್ಕೆ ಕುತ್ತು ತರಲಿದೆ ಎಂದು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹೇಳುತ್ತಾರೆ. ನಿಜವಾಗಿ ಕುತ್ತು ಬರುವುದಾದಾರೆ, ಸತ್ಯಾಂಶ ಬಹಿರಂಗಪಡಿಸಲಿ. ರಾಜ್ಯದ ಜನರು ಸತ್ಯಾಂಶ ತಿಳಿಯಲಿ' ಎಂದರು.

'ಕಾಂಗ್ರೆಸ್‌ನವರು ಬರೀ ಸುಳ್ಳು ಹೇಳುತ್ತಾ ಅಪಪ್ರಚಾರ ಮಾಡುತ್ತಿದ್ದಾರೆ. ದಾಖಲೆ ಇದೆ ಎಂಬುದನ್ನು ಹೇಳುವುದು ಬಿಟ್ಟು ಬಿಜೆಪಿಯ ಒಬ್ಬ ನಾಯಕನ ಹೆಸರನ್ನು ಬಹಿರಂಗಪಡಿಸಲಿ, ನಾನು ಶಹಬ್ಬಾಸ್ ಎನ್ನುತ್ತೇನೆ' ಎಂದರು.

'ಬಿಟ್ ಕಾಯಿನ್ ಹಗರಣ ವಿಚಾರದಲ್ಲಿ ದಾಖಲೆಯಿದೆ ಎಂದು ಹೇಳಿಕೊಂಡು ಕಾಂಗ್ರೆಸ್ ಪಕ್ಷದವರು ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಅವರ ಬಳಿ ದಾಖಲೆಯಿದ್ದರೆ, ಬಿಡುಗಡೆ ಮಾಡಲಿ' ಎಂದು ಹೇಳಿದರು.

ತಾಯಿ ನೇತ್ರಾ ಜತೆ ಪುನೀತ್

ಸಕ್ರೆಬೈಲು: ಮರಿಗಜನಿಗೆ ಪುನೀತ್ ಹೆಸರು

ಶಿವಮೊಗ್ಗ: ಸಕ್ರೆಬೈಲಿನ ಬಿಡಾರದ ಎರಡು ವರ್ಷದ ಮರಿ ಗಜರಾಜನಿಗೆ ಬುಧವಾರ ಪುನೀತ್ ರಾಜ್‌ಕುಮಾರ್ ಹೆಸರಿಡುವ ಮೂಲಕ ವನ್ಯಜೀವಿ ವಿಭಾಗದ ಅಧಿಕಾರಿಗಳು ಗೌರವ ಸಲ್ಲಿಸಿದರು.

ಸಾಕ್ಷ್ಯಚಿತ್ರವೊಂದರ ನಿರ್ಮಾಣಕ್ಕಾಗಿ ಎರಡು ತಿಂಗಳ ಹಿಂದೆ ಪುನೀತ್ ಆನೆ ಬಿಡಾರಕ್ಕೆ ಭೇಟಿ ನೀಡಿದ್ದರು. ಆಗ ಅವರು ಮರಿಯಾನೆ ಹಿಡಿದುಕೊಂಡು ಮುದ್ದಾಡಿದ್ದರು. ಈಗ ಅದೇ ಮರಿಗೆ ಅವರ ಹೆಸರಿಡಲಾಗಿದೆ.

ಸಕ್ರೆಬೈಲು ಆನೆ ಬಿಡಾರದಲ್ಲಿ ತಾಯಿ ಆನೆ ನೇತ್ರಾಳಿಂದ ಮರಿಯಾನೆ ಬೇರ್ಪಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದೇ ಸಮಯದಲ್ಲಿ ಮರಿ ಆನೆಗೆ ಪುನೀತ್ ಹೆಸರಿಟ್ಟು, ಅಗಲಿದ ನಟನಿಗೆ ಗೌರವ ಸಲ್ಲಿಸಲಾಯಿತು. ಬಿಡಾರದಲ್ಲಿ ಇದೇ ಮೊದಲ ಬಾರಿ ಆನೆಯೊಂದಕ್ಕೆ ಚಿತ್ರನಟರ ಹೆಸರು ಇಡಲಾಗಿದೆ.

'ನಟ ಪುನೀತ್ ರಾಜ್‌ಕುಮಾರ್ ವನ್ಯಜೀವಿಗಳು, ಕಾಡಿನ ಬಗ್ಗೆ ಅಪಾರ ಪ್ರೀತಿ ಹೊಂದಿದ್ದರು. ಅವರಿಗೆ ವನ್ಯಪ್ರಾಣಿಗಳ ರಕ್ಷಣೆಯ ಕನಸಿತ್ತು. ಬಿಡಾರಕ್ಕೆ ಭೇಟಿ ನೀಡಿದ್ದ ಅವರು ಅರಣ್ಯ ಸಂರಕ್ಷಣೆ ಕುರಿತ ಸಾಕ್ಷ್ಯಚಿತ್ರವೊಂದರಲ್ಲಿ ನಟಿಸಿದ್ದರು. ಹಾಗಾಗಿ, ಅವರ ಹೆಸರನ್ನು ನಾಮಕರಣ ಮಾಡಿದ್ದೇವೆ' ಎಂದು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಐ.ಎಂ. ನಾಗರಾಜ್ ಪ್ರತಿಕ್ರಿಯಿಸಿದರು.

ಪ್ರಶಸ್ತಿ ಪ್ರದಾನ

ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯು (ಪಿಆರ್‌ಸಿಐ) ನಗರದಲ್ಲಿ ಆಯೋಜಿಸಿದ್ದ ವಿಶ್ವ ಸಂವಹನಕಾರರ ದಿನ ಕಾರ್ಯಕ್ರಮದಲ್ಲಿ ಶಿಕ್ಷಣ ಮತ್ತು ಮಾಧ್ಯಮ ಕ್ಷೇತ್ರದ ಸಾಧನೆ ಪರಿಗಣಿಸಿ ಬೆಂಗಳೂರು ವಿ.ವಿ ಸಹ ಪ್ರಾಧ್ಯಾಪಕ ಎನ್.ಸಂಜೀವ ರಾಜ್ ಅವರಿಗೆ 'ಖಾದ್ರಿ ಅಚ್ಯುತನ್ ಸ್ಮಾರಕ ಸಂವಹನ ಪ್ರಶಸ್ತಿ-2021' ನೀಡಿ ಗೌರವಿಸಲಾಯಿತು. ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಪಿಆರ್‌ಸಿಐ ಅಧ್ಯಕ್ಷ ಎಂ.ಬಿ.ಜಯರಾಂ, ಕರ್ನಾಟಕ ಘಟಕದ ಅಧ್ಯಕ್ಷೆ ಟಿ.ಎಸ್.ಲತಾ, ಬೆಂಗಳೂರು ವಿ. ವಿ ಕುಲಪತಿ ಕೆ.ಆರ್.ವೇಣು ಗೋಪಾಲ್, ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಬಿ.ಕೆ.ರವಿ, ಪತ್ರಕರ್ತ ರಾಮು ಪಾಟೀಲ್ ಹಾಗೂ ಇತರರು ಇದ್ದರು.

ಕ್ರಿಕೆಟ್ ಟೂರ್ನಿಗೆ ಚಾಲನೆ

ಬೆಂಗಳೂರು: 'ಯುವಜನಾಂಗವನ್ನು ಮೊಬೈಲ್ ಗೀಳಿನಿಂದ ರಕ್ಷಿಸಲು ಹಾಗೂ ದೈಹಿಕ, ಸದೃಡರಾಗಿ ಬೆಳೆಯಲು ಕ್ರೀಡೆಗಳು ಸಹಕಾರಿ' ಎಂದು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಹೇಳಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಪಿಳ್ಳಗಾನಹಳ್ಳಿಯಲ್ಲಿ ಗೊಟ್ಟಿಗೆರೆ ವಾರ್ಡ್‌ನ ಕಾಂಗ್ರೆಸ್ ಘಟಕ ಸೋಮವಾರ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಕ್ಷೇತ್ರದಲ್ಲಿ ಕ್ರೀಡಾಂಗಣ, ವ್ಯಾಯಾಮ ಶಾಲೆ, ಯೋಗಕೇಂದ್ರ ಹಾಗೂ ಉದ್ಯಾನಗಳಿಗಾಗಿ ಮೀಸಲಿಟ್ಟಿದ್ದ ಸಿಎ ನಿವೇಶನಗಳನ್ನು ಅನ್ಯ ಕಾರಣಗಳಿಗೆ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಯುವಜನಾಂಗಕ್ಕೆ ದ್ರೋಹ ಎಸಗಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕ್ರಿಕೆಟ್ ಟೂರ್ನಿಯ ವಿಜೇತ ತಂಡಗಳಿಗೆ ಪ್ರಥಮ ₹50 ಸಾವಿರ ನಗದು ಬಹುಮಾನ ಮತ್ತು ಟ್ರೋಫಿ, ದ್ವಿತೀಯ ಬಹುಮಾನ ₹25 ಸಾವಿರ ಮತ್ತು ಟ್ರೋಫಿ ಸಿಗಲಿದೆ ಎಂದು ಗೊಟ್ಟಿಗೆರೆ ಕಾಂಗ್ರೆಸ್ ಘಟಕ ತಿಳಿಸಿದೆ.

ಆರ್.ಕೆ.ರಮೇಶ್ ಅವರು ಬ್ಯಾಟಿಂಗ್ ಮಾಡುವ ಮೂಲಕ ಕ್ರಿಕೆಟ್ ಪಂದ್ಯಕ್ಕೆ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ವಿನೋದ್, ಪಿ.ಚಂದ್ರಶೇಖರ್, ಮುನಿರಾಜು, ಸುದರ್ಶನ್ ಗೌಡ, ಸೂರ್ಯ, ಮಾದೇಶ್, ನಾಗರಾಜು, ಶ್ರೀಧರ್ ಲಕ್ಷ್ಮಣ್, ರೇಖಾ ನವೀನ್ ಗೌಡ, ಜ್ಯೋತಿ, ರೇವತಿ ಹಾಗೂ ಇತರರು ಇದ್ದರು

2023ರ ಡಿಸೆಂಬರ್‌ನಲ್ಲಿ ರಾಮಮಂದಿರ ಪೂರ್ಣ

ಕಲಬುರಗಿ: 'ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯ ವೇಗವಾಗಿ ನಡೆದಿದ್ದು, 2023ರ ಡಿಸೆಂಬರ್ ವೇಳೆಗೆ ರಾಮನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ನೆರವೇರಿಸಲಾಗುವುದು' ಎಂದು ಆಯೋಧ್ಯೆ ರಾಮಮಂದಿರ ನಿರ್ಮಾಣ ಉಸ್ತುವಾರಿ ಹಾಗೂ ವಿಶ್ವ ಹಿಂದೂ ಪರಿಷತ್ತಿನ ಕೇಂದ್ರೀಯ ಸಹಕಾರ್ಯದರ್ಶಿ ಗೋಪಾಲ್ ತಿಳಿಸಿದರು.

ನಗರದ ಎನ್‌ಜಿಒ ಕಾಲೊನಿಯಲ್ಲಿ ಬುಧವಾರ ರಾಷ್ಟ್ರೋತ್ಥಾನ ಪರಿಷತ್‌ನ ನೂತನ ಶಾಲಾ ಕಟ್ಟಡಗಳ ಭೂಮಿ ಪೂಜಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಮಂದಿರ ನಿರ್ಮಾಣಕ್ಕೆ 45 ದಿನಗಳಲ್ಲಿ ₹3,200 ಕೋಟಿ ದೇಣಿಗೆ ಸಂಗ್ರಹವಾಗಿದೆ' ಎಂದರು.

'ಮಂದಿರ ನಿರ್ಮಾಣವಾದ ಬಳಿಕ ಹಲವರು ಭೇಟಿ ನೀಡಲು ಬಯಸಿದ್ದಾರೆ. ಅದರ ಬದಲು ಈಗಲೇ ನಿರ್ಮಾಣ ಕಾರ್ಯವನ್ನು ನೋಡಿದರೆ, ಮಂದಿರದ ಭವ್ಯತೆ ತಿಳಿಯುತ್ತದೆ. ಹೀಗಾಗಿ ಎಲ್ಲರೂ ಮಂದಿರ ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಬೇಕು. ಈ ಮೊದಲು ರಾಮನ ಮೂರ್ತಿ ಸರ್ಕಾರದ ಅಧೀನದಲ್ಲಿತ್ತು. ಈಗ ರಾಮ ಭಕ್ತರ ಕೈಯಲ್ಲಿದೆ. ಈಗ ಭೇಟಿ ನೀಡಿದರೆ, ಮೂರ್ತಿಯನ್ನು ಸುಲಭವಾಗಿ ನೋಡಬಹುದು' ಎಂದರು.

ನಿಧಿ ಆಸೆಗೆ ಬೆತ್ತಲೆ ಪೂಜೆ: 6 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ರಾಮನಗರ: ನಿಧಿ ಆಸೆಗಾಗಿ ಬೆತ್ತಲೆ ಪೂಜೆ ಸೇರಿದಂತೆ ಮೌಢ್ಯದ ಆಚರಣೆಯಲ್ಲಿ ತೊಡಗಿದ್ದ ಆರೋಪದ ಮೇಲೆ ಆರು ಮಂದಿಯನ್ನು ಜಿಲ್ಲೆಯ ಸಾತನೂರು ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ತಮಿಳುನಾಡು ಮೂಲದವರಾದ ಪಾರ್ಥಸಾರಥಿ, ನಾಗರಾಜು, ಶಶಿಕುಮಾರ್, ಲೋಕೇಶ್, ಮೋಹನ್, ಲಕ್ಷ್ಮಿನರಸಪ್ಪ ಬಂಧಿತರು. ಇವರೊಂದಿಗೆ ಇದ್ದ ಕಾರ್ಮಿಕ ಮಹಿಳೆಯನ್ನು ಪೊಲೀಸರು ರಕ್ಷಿಸಿದ್ದಾರೆ.

ಕನಕಪುರ ತಾಲ್ಲೂಕಿನ ಸಾತನೂರು ಸಮೀಪದ ಭೂಹಳ್ಳಿ ಗ್ರಾಮದ ಶ್ರೀನಿವಾಸ ಎಂಬುವರ ಮನೆಯಲ್ಲಿ ಆಗಾಗ ಗುಟ್ಟಾಗಿ ಪೂಜೆ ನಡೆಯುತ್ತಿತ್ತು. ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದಾಗ ಪ್ರಕರಣ ಬೆಳಕಿಗೆ ಬಂದಿತು.

ಪೂಜೆಗೆಂದು ಮನೆಯ ಒಳಗೆ ಗುಂಡಿ ತೋಡಿರುವುದು

ಮನೆ ಮಾಲೀಕರಾದ ಶ್ರೀನಿವಾಸ ಆರ್ಥಿಕ ನಷ್ಟದಿಂದ ಜಮೀನು ಕಳೆದುಕೊಂಡು ಊರು ಬಿಟ್ಟು, ಪತ್ನಿ ಊರಾದ ಬನ್ನೂರಿನಲ್ಲಿ ನೆಲೆಸಿದ್ದರು. 6 ತಿಂಗಳ ಹಿಂದೆ ಅವರಿಗೆ ಮದುವೆ ಒಂದರಲ್ಲಿ ಆರೋಪಿಗಳಾದ ನಾಗರಾಜು ಹಾಗೂ ಪಾರ್ಥಸಾರಥಿ ಅವರ ಪರಿಚಯ ಆಗಿತ್ತು. ಅವರ ಬಳಿ ಶ್ರೀನಿವಾಸ ತಮ್ಮ ಕಷ್ಟ ಹೇಳಿಕೊಂಡಿದ್ದರು.

'ನಿಮ್ಮ ಮನೆಯಲ್ಲಿ ನಿಧಿ ಇರುವ ಕಾರಣ ಹೀಗೆಲ್ಲ ನಷ್ಟ ಆಗುತ್ತಿದೆ' ಎಂದು ನಂಬಿಸಿದ್ದ ಆರೋಪಿಗಳು ತಮಿಳುನಾಡಿನ ಶಶಿಕುಮಾರ್ ಎಂಬ ಪೂಜಾರಿ ಮೂಲಕ ಶ್ರೀನಿವಾಸ ಅವರ ಮನೆಯಲ್ಲಿ ನಿರಂತರ ಪೂಜೆ ಹಮ್ಮಿಕೊಳ್ಳುತ್ತಾ ಬಂದಿದ್ದರು.

'ಮಹಿಳೆಯನ್ನು ಬೆತ್ತಲಾಗಿಸಿ ಪೂಜೆ ನಡೆಸಿದರೆ ನಿಧಿ ದೊರೆಯುತ್ತದೆ' ಎಂದು ನಂಬಿಸಿದ್ದ ಆರೋಪಿಗಳು ಮಂಗಳವಾರ ಪೂಜೆಗಾಗಿ ಕೂಲಿ ಕಾರ್ಮಿಕ ಮಹಿಳೆ ಒಬ್ಬರಿಗೆ ₹ 50 ಸಾವಿರ ಆಮಿಷವೊಡ್ಡಿ ಕರೆ ತಂದಿದ್ದರು. ಪೂಜೆ ನಡೆಯುತ್ತಿದ್ದ ವೇಳೆ ಪೊಲೀಸರು ದಾಳಿ ನಡೆಸಿ ಬಂಧಿಸಿದರು.

ಮೌಢ್ಯ ನಿಷೇಧ ಕಾಯ್ದೆ ಉಲ್ಲಂಘನೆ, ಪೂಜೆಗೆ ಕೂಲಿ ಕಾರ್ಮಿಕ ಮಹಿಳೆ ಬಳಕೆ, ನಿಧಿ ನೆಪದಲ್ಲಿ ಮನೆ ಮಾಲೀಕರಿಗೆ ವಂಚನೆ ಯತ್ನ ಸೇರಿದಂತೆ ವಿವಿಧ ಆರೋಪಗಳ ಅಡಿ ಪ್ರಕರಣ ದಾಖಲಾಗಿದೆ.

ಮೈಸೂರು ವೈದ್ಯಕೀಯ ಕಾಲೇಜಿಗೆ ಆಯೋಗ ಭೇಟಿ, ಸೌಲಭ್ಯ ಪರಿಶೀಲನೆ

ಎಂಬಿಬಿಎಸ್- ಸದ್ಯದಲ್ಲೇ 100 ಹೆಚ್ಚುವರಿ ಸೀಟು

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಎಂಸಿಸಿಆರ್‌ಐ) ಮುಂದಿನ ಶೈಕ್ಷಣಿಕ ಸಾಲಿನಿಂದ ಎಂಬಿಬಿಎಸ್ ಕೋರ್ಸ್‌ಗೆ ಹೆಚ್ಚುವರಿಯಾಗಿ 100 ಸೀಟು ಭರ್ತಿ ಮಾಡಿಕೊಳ್ಳಲು ಅವಕಾಶ ಸಿಗುವ ಸಾಧ್ಯತೆ ಇದೆ. ಈಗಾಗಲೇ ಸಂಸ್ಥೆಯು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಒಪ್ಪಿಗೆ ಲಭಿಸಿದರೆ ಸೀಟುಗಳ ಸಂಖ್ಯೆ 250ಕ್ಕೇರಲಿದೆ.

ಈ ನಿಟ್ಟಿನಲ್ಲಿ ಸಂಸ್ಥೆಗೆ ಈಚೆಗೆ ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಸದಸ್ಯರು ಭೇಟಿ ನೀಡಿ ಸೌಲಭ್ಯ ಪರಿಶೀಲಿಸಿದರು. ಮೂಲ ಸೌಲಭ್ಯ ಹೆಚ್ಚಿಸುವಂತೆ ಹಾಗೂ ಸಿಬ್ಬಂದಿ ಕೊರತೆಯನ್ನು ನೀಗಿಕೊಳ್ಳುವಂತೆ ಸಲಹೆ ನೀಡಿದ್ದಾರೆ.

'2016ರಲ್ಲಿ ಸೀಟುಗಳ ಸಂಖ್ಯೆ 100ರಿಂದ 150 ಏರಿಕೆ ಆಗಿತ್ತು. 2018ರ ಅಂತ್ಯದಲ್ಲಿ 250ಕ್ಕೆ ಸೀಟುಗಳಿಗೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಲಾಗಿತ್ತು. ಸದ್ಯದಲ್ಲೇ ಒಪ್ಪಿಗೆ ಸಿಗುವ ಭರವಸೆ ಇದೆ' ಎಂದು ಎಂಎಂಸಿಆರ್‌ಐ ನಿರ್ದೇಶಕ, ಡೀನ್ ಡಾ.ಸಿ.ಪಿ.ನಂಜರಾಜ 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಾಂಶಗಳು

- ಸಂಸ್ಥೆಯಲ್ಲಿ ಅಭಿವೃದ್ಧಿ ಕಾಮಗಾರಿ
- ಹಾಸ್ಟೆಲ್, ಉಪನ್ಯಾಸ ಕೊಠಡಿ ನಿರ್ಮಾಣ
- ಸುಶ್ರುತ ಪ್ರತಿಮೆ ಸ್ಥಾಪನೆ

ಈಗಾಗಲೇ ಸಂಸ್ಥೆಯು ವಿವಿಧ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡಿದೆ. ತಲಾ 300 ಆಸನ ಸಾಮರ್ಥ್ಯದ ಮೂರು ಉಪನ್ಯಾಸ ಸಭಾಂಗಣ ನಿರ್ಮಾಣ, 500 ಆಸನ ಸಾಮರ್ಥ್ಯದ ಪರೀಕ್ಷಾ ಸಭಾಂಗಣ, ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ಗ್ರಂಥಾಲಯ ನಿರ್ಮಾಣ ಕಾರ್ಯ ನಡೆಯುತ್ತಿದೆ.

'ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಮುಗಿಯಲಿದೆ. ವಾಕ್ ಇನ್ ಇಂಟರ್‌ವ್ಯೂ ಮೂಲಕ 28 ಸಹಾಯಕ ಪ್ರಾಧ್ಯಾಪಕರನ್ನು ಭರ್ತಿ ಮಾಡಿಕೊಳ್ಳಬೇಕಿದ್ದು, ಒಪ್ಪಿಗೆ ಸಿಗಬೇಕಿದೆ. ಬೋಧಕೇತರ ಸಿಬ್ಬಂದಿಯ ಕೊರತೆಯೂ ಇದೆ' ಎಂದರು.

'ಕೆ.ಆರ್.ರಸ್ತೆಯಲ್ಲಿರುವ ಪಿಕೆಟಿಬಿ ಆವರಣದಲ್ಲಿ ಪದವಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗಾಗಿ ಜಿ + 6 ಮಾದರಿಯ ಎರಡು ಹಾಸ್ಟೆಲ್ ಕಟ್ಟಡ ನಿರ್ಮಿಸಲಾಗುತ್ತಿದೆ. ತಲಾ 150 ಕೊಠಡಿಗಳು ಇರಲಿವೆ. ಪ್ರತಿ ಕೊಠಡಿಯಲ್ಲಿ ಮೂವರು ವಿದ್ಯಾರ್ಥಿಗಳಿರಬಹುದು. ಮುಡಾ ಎದುರಿನ ಹಾಸ್ಟೆಲ್ ನವೀಕರಿಸಬೇಕೋ ಅಥವಾ ಪೂರ್ಣ ನೆಲಸಮಗೊಳಿಸಿ ಹೊಸದಾಗಿ ನಿರ್ಮಿಸಬೇಕೋ ಎಂಬ ವಿಚಾರದಲ್ಲಿ ಗೊಂದಲವಿದೆ' ಎಂದರು.

ಪದವಿ ಹಾಗೂ ಸ್ನಾತಕೋತ್ತರ ಪದವಿಯ ಎಲ್ಲಾ ತರಗತಿ ಸೇರಿ ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಸುಮಾರು 1,500 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಮೈಸೂರು ವೈದ್ಯಕೀಯ ಕಾಲೇಜು ಆವರಣ

'ನನಗೇನೂ ಗೊತ್ತಿಲ್ಲ, ಎಲ್ಲವೂ ಸುಳ್ಳು'

ಬೆಂಗಳೂರು: ಬಿಟ್ ಕಾಯಿನ್ ಹಗರಣದ ಪ್ರಮುಖ ಸೂತ್ರಧಾರ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಮೊದಲ ಬಾರಿಗೆ ಮಾಧ್ಯಮದವರ ಎದುರು ಕಾಣಿಸಿಕೊಂಡಿದ್ದು, 'ನನಗೇನು ಗೊತ್ತಿಲ್ಲ. ಎಲ್ಲವೂ ಸುಳ್ಳು' ಎಂದು ಹೇಳಿಕೆ ನೀಡಿದ್ದಾನೆ.

ಮಾದಕ ವಸ್ತು ಸೇವಿಸಿ ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ಜೀವನ್‌ಭಿಮಾನಗರ ಠಾಣೆ ಪೊಲೀಸರು ಬಂಧಿಸಿದ್ದ ಶ್ರೀಕೃಷ್ಣನಿಗೆ ನ್ಯಾಯಾಲಯವು ಮಂಗಳವಾರ ಜಾಮೀನು ಮಂಜೂರು ಮಾಡಿತ್ತು. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಶ್ರೀಕೃಷ್ಣ, ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಬುಧವಾರ ಜೈಲಿನಿಂದ ಹೊರಬಂದ.

ಇದೇ ಸಂದರ್ಭದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಶ್ರೀಕೃಷ್ಣ, 'ನಾನು ಏನು ಮಾಡಿಲ್ಲ. ನನಗೇನೂ ಗೊತ್ತಿಲ್ಲ' ಎಂದ.

'₹ 9 ಕೋಟಿ ಮೌಲ್ಯದ 31 ಕಾಯಿನ್ ಜಪ್ತಿ ಮಾಡಿರುವುದಾಗಿ ಸಿಸಿಬಿ ಪೊಲೀಸರು ಪತ್ರಿಕಾ ಪ್ರಕಟಣೆ ನೀಡಿದ್ದಾರಲ್ಲ' ಎಂದು ಪ್ರಶ್ನಿಸಿದ್ದಕ್ಕೆ, 'ನನ್ನಿಂದ ಯಾರೊಬ್ಬರೂ ಏನನ್ನೂ ಜಪ್ತಿ ಮಾಡಿಲ್ಲ. ಎಲ್ಲವೂ ಸುಳ್ಳು. ನನ್ನ ತಂದೆ ಆಸ್ಪತ್ರೆಯಲ್ಲಿ ಇದ್ದಾರೆ. ನಾನೀಗ ಆಸ್ಪತ್ರೆಗೆ ಹೋಗಬೇಕು. ದಯವಿಟ್ಟು, ನನ್ನನ್ನು ಹಿಂಬಾಲಿಸಬೇಡಿ' ಎಂದ.

'ಲ್ಯಾಪ್‌ಟಾಪ್ ಬಳಸಿ ಹ್ಯಾಕ್ ಮಾಡಿರುವ ಆರೋಪ ನಿನ್ನ ಮೇಲಿದೆಯಲ್ಲ' ಎಂದು ಕೇಳಿದ್ದಕ್ಕೆ, 'ಎಲ್ಲವೂ ಸುಳ್ಳು. ಏಕೆ ಈ ರೀತಿ ಸುದ್ದಿ ಹಬ್ಬಿಸುತ್ತಿದ್ದಾರೆಂಬುದನ್ನು ಮಾಧ್ಯಮದವರೇ ಹೇಳಬೇಕು' ಎಂದ.

ಒಬ್ಬನೇ ಹೋದ

ಜೈಲಿನ ಕಾನೂನು ಪ್ರಕ್ರಿಯೆಗಳನ್ನು ಮುಗಿಸಿದ ಶ್ರೀಕೃಷ್ಣ, ಒಬ್ಬನೇ ಹೊರಗೆ ಬಂದ. ಆತನನ್ನು ಬರಮಾಡಿಕೊಳ್ಳಲು ಯಾರೊಬ್ಬರೂ ಬಂದಿರಲಿಲ್ಲ.

'ಜಾಮೀನು ಯಾರು ಕೊಡಿಸಿದರು' ಎಂದು ಪ್ರಶ್ನಿಸಿದ್ದಕ್ಕೆ ಉತ್ತರಿಸಿದ ಶ್ರೀಕೃಷ್ಣ, 'ಅದು ನನಗೆ ಗೊತ್ತಿಲ್ಲ. ಯಾರೋ ಜಾಮೀನು ಕೊಟ್ಟಿದ್ದಾರೆ. ನಾನು ಹೊರಗೆ ಬಂದೆ' ಎಂದು ಹೇಳಿ ಆಟೊ ಹತ್ತಿಕೊಂಡು ಸ್ಥಳದಿಂದ ಹೊರಟು ಹೋದ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನೆ

ಸಿದ್ದರಾಮಯ್ಯ ಏಕೆ ಕ್ರಮ ಕೈಗೊಳ್ಳಲಿಲ್ಲ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಬೆಂಗಳೂರು: 2016–17ರಿಂದಲೂ ರಾಜ್ಯದಲ್ಲಿ ಬಿಟ್ ಕಾಯಿನ್ ದಂಧೆಯ ಕುರಿತು ಚರ್ಚೆ ನಡೆಯುತ್ತಿದೆ. ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅದನ್ನು ನಿಯಂತ್ರಿಸಲು ಏಕೆ ಕ್ರಮ ಕೈಗೊಂಡಿರಲಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಪಕ್ಷದ ಕೇಂದ್ರ ಕಚೇರಿಯಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ ಐದು ವರ್ಷ ಆಡಳಿತ ನಡೆಸಿದವರು ಆಗ ಸುಮ್ಮನಿದ್ದು, ಈಗ ಹೇಳಿಕೆ ನೀಡಿದರೆ ಏನು ಪ್ರಯೋಜನ? ಈಗ ಮಾತನಾಡುವ ಬದಲಿಗೆ ಆಗಲೇ ಕ್ರಮ ಕೈಗೊಂಡಿದ್ದರೆ ಬಿಟ್ ಕಾಯಿನ್ ಪ್ರಕರಣ ಇಷ್ಟು ದೂರ ಬರುತ್ತಿರಲಿಲ್ಲ. ಆಗ ಸುಮ್ಮನಿದ್ದವರು ಈಗ ಜನರ ಎದುರು ಹೇಳಿಕೆ ನೀಡುವುದಕ್ಕೆ ಸೀಮಿತವಾಗಿದ್ದಾರೆ' ಎಂದು ದೂರಿದರು.

ರಾಜ್ಯದಲ್ಲಿ ಬಿಟ್ ಕಾಯಿನ್ ಹಗರಣದ ವಿಚಾರ ಚರ್ಚೆಯಾಗುತ್ತಿದೆ. ರಾಷ್ಟ್ರ ಮಟ್ಟದಲ್ಲಿ ರಫೇಲ್ ಹಗರಣದ ಕುರಿತು ಚರ್ಚೆಯಾಗುತ್ತಿದೆ. ಎರಡೂ ರಾಷ್ಟ್ರೀಯ ಪಕ್ಷಗಳು ಕೆಸರೆರಚಾಟದಲ್ಲಿ ತೊಡಗಿವೆ ಎಂದರು.

ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆಯಬೇಕು. ನಾಲ್ಕು ಜನರಿಗೆ ತೊಂದರೆ ಕೊಡುವುದರಿಂದ ಉಪಯೋಗ ಇಲ್ಲ. ಈಗ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಎಲ್ಲ ಮಾಹಿತಿ ರವಾನೆಯಾಗಿದೆ. ರಾಜ್ಯ ಸರ್ಕಾರ ಏನು ಮಾಡುತ್ತದೆ ಎಂಬುದನ್ನು ಕಾದು ನೋಡಬೇಕು ಎಂದು ಹೇಳಿದರು.

ಧಮ್ ಇದ್ದರೆ ಬಂಧಿಸಲಿ– ಡಿ.ಕೆ. ಶಿವಕುಮಾರ್

ಶಿವಕುಮಾರ್

ಬೆಂಗಳೂರು: 'ಈ ದಂಧೆಯಲ್ಲಿ (ಬಿಟ್ ಕಾಯಿನ್ ಪ್ರಕರಣ) ಯಾರೇ ಇದ್ದರೂ ಇವರಿಗೆ (ಗೃಹ ಸಚಿವರಿಗೆ) ಧಮ್ ಇದ್ದರೆ ಬಂಧಿಸಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಕಾಂಗ್ರೆಸ್ ನಾಯಕನ ಮಗ ಭಾಗಿಯಾಗಿದ್ದರೆ ಆತನನ್ನು ಬಂಧಿಸಲಿ. ಯಾವ ಆಧಾರದ ಮೇಲೆ ಕಾಂಗ್ರೆಸ್ ನಾಯಕರ ಮಕ್ಕಳ ಹೆಸರು ತರುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ತಪ್ಪು ಮಾಡಿದವರನ್ನು ಸುಮ್ಮನೆ ಬಿಡುವುದೇಕೆ. ಪ್ರಕರಣದಲ್ಲಿ ಯಾರ ಹೆಸರೆಲ್ಲಾ ಕೇಳಿ ಬಂದಿದೆ, ಪ್ರಧಾನಿಗೆ ಪತ್ರ ಬರೆದಿದ್ದು ಯಾರು ಎಂದು ಗೃಹ ಮಂತ್ರಿಗೆ ಗೊತ್ತಿದೆಯಲ್ಲ. ಅವರು ಆರೋಪಿಗಳನ್ನು ರಕ್ಷಣೆ ಮಾಡುತ್ತಿರುವುದೇಕೆ' ಎಂದೂ ಪ್ರಶ್ನಿಸಿದರು.

'ಪ್ರಕರಣವನ್ನು ಇ.ಡಿ.ಗೆ ಹಸ್ತಾಂತರಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಅವರು ನಡೆಸಿರುವ ತನಿಖೆ ಏನು? ಸಿಕ್ಕಿರುವ ಮಾಹಿತಿ ಏನು? ಏನೆಲ್ಲಾ ಜಪ್ತಿ ಮಾಡಿದ್ದಾರೆ? ಸೀಜ್ ಮಾಡಿಕೊಂಡ ಬಿಟ್ ಕಾಯಿನ್ ಯಾರ ವಾಲೆಟ್‌ನಲ್ಲಿದೆ? ಹಗರಣದಲ್ಲಿ ಯಾರ ಹೆಸರು ಕೇಳಿಬಂದಿದೆ? ಇ.ಡಿ. ತನಿಖೆ ಸಂಬಂಧ ಪ್ರಧಾನಿಗಳಿಗೆ ಪತ್ರ ಬರೆದಿದ್ದು ಯಾರು? ಪೊಲೀಸ್ ಅಧಿಕಾರಿಗಳ ಹೇಳಿಕೆಗಳೇನು? ಎಷ್ಟು ಎಫ್‌ಐಆರ್ ದಾಖಲಾಗಿದೆ? ಎಂದು ಸರ್ಕಾರ ಮಾಹಿತಿ ನೀಡಲಿ' ಎಂದರು.

'ಸರ್ಕಾರ ತನ್ನ ಬಳಿ ಇರುವ ಮಾಹಿತಿಯನ್ನು ಮೊದಲು ನೀಡಲಿ. ನಾವು ವಿರೋಧ ಪಕ್ಷವಾಗಿ ನಮ್ಮ ಮಾಹಿತಿಯನ್ನು ಜನರ ಮುಂದೆ ಇಡುತ್ತೇವೆ. ನ್ಯಾಯಾಲಯಕ್ಕೆ ಮಾಹಿತಿ, ದಾಖಲೆ ಒದಗಿಸಬೇಕಾದ ಜವಾಬ್ದಾರಿ ಸರ್ಕಾರದ್ದು. ನಮಗೆ ಈಗ ಬಂದಿರುವುದು ಪೊಲೀಸ್ ಇಲಾಖೆ ಹಾಗೂ ಬಿಜೆಪಿ ನಾಯಕರು, ಅಧಿಕಾರಿಗಳು ಕೊಟ್ಟಿರುವ ಹಿಂಬಾಗಿಲಿನ ಮಾಹಿತಿ' ಎಂದರು.

'ಬಿಟ್ ಕಾಯಿನ್': ಹೆಸರು ಬಹಿರಂಗಕ್ಕೆ ಶಾಸಕ ಜಿ. ಪರಮೇಶ್ವರ ಸವಾಲು

ಹುಬ್ಬಳ್ಳಿ: 'ಬಿಟ್ ಕಾಯಿನ್' ಹಗರಣದಲ್ಲಿ ಭಾಗಿಯಾದವರ ಪೈಕಿ ಕಾಂಗ್ರೆಸ್ ಮುಖಂಡರ ಹೆಸರುಗಳಿವೆ ಎನ್ನುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆಗೆ ತಿರುಗೇಟು ನೀಡಿರುವ ಶಾಸಕ ಜಿ. ಪರಮೇಶ್ವರ 'ಕೂಡಲೇ ಹೆಸರುಗಳನ್ನು ಬಹಿರಂಗಗೊಳಿಸಬೇಕು' ಎಂದು ಸವಾಲು ಹಾಕಿದ್ದಾರೆ.

ಸುದ್ದಿಗಾರರ ಜೊತೆ ಹುಬ್ಬಳ್ಳಿಯಲ್ಲಿ ಬುಧವಾರ ಮಾತನಾಡಿದ ಅವರು 'ಈ ಹಗರಣದಿಂದ ಯಾವ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಉದ್ಯಮಿಗಳು ಲಾಭ ಪಡೆದುಕೊಂಡಿದ್ದಾರೆ ಎನ್ನುವುದನ್ನು ಬಹಿರಂಗಗೊಳಿಸಬೇಕು. ನಮ್ಮ ಪಕ್ಷದವರ ಹೆಸರುಗಳಿದ್ದರೆ ಕಾನೂನು ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿ. ನಾವು ಪಕ್ಷದ ವತಿಯಿಂದಲೂ ಕ್ರಮ ಕೈಗೊಳ್ಳುತ್ತೇವೆ' ಎಂದರು. ಹಗರಣದಲ್ಲಿ ಭಾಗಿಯಾದವರ ಪೈಕಿ ಎರಡ್ಮೂರು ಹೆಸರುಗಳು ನನಗೂ ಗೊತ್ತಿವೆ. ಖಚಿತವಾಗದ ಹೊರತು ಬಹಿರಂಗಪಡಿಸುವುದಿಲ್ಲ' ಎಂದರು.

'ಬೀಟ್ ಗೊತ್ತು, ಬಿಟ್‌ಕಾಯಿನ್ ಗೊತ್ತಿಲ್ಲ'

ಬೆಂಗಳೂರು: 'ನನಗೆ ಬೀಟ್ ಎಂದ್ರೆ ಗೊತ್ತು. ಆದರೆ, ಬಿಟ್‌ಕಾಯಿನ್ ಎಂದರೆ ಏನು ಅಂತ ಗೊತ್ತಿಲ್ಲ' ಎಂದು ವಸತಿ ಸಚಿವ ವಿ.ಸೋಮಣ್ಣ ಸುದ್ದಿಗಾರರಿಗೆ ತಿಳಿಸಿದರು.

'ಬಿಟ್‌ಕಾಯಿನ್‌ಗೆ ಸಂಬಂಧಿಸಿದಂತೆ ಮಾಡುತ್ತಿರುವ ಆರೋಪ ನೂರಕ್ಕೆ ನೂರು ಸುಳ್ಳು. ಪ್ರಿಯಾಂಕ ಖರ್ಗೆಯವರ ಬಳಿ ಮಾಹಿತಿ ಇದ್ದರೆ ಬಿಡುಗಡೆ ಮಾಡಲಿ' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಆಗ್ರಹ

ಸಮೀಕ್ಷೆ ಬಿಡುಗಡೆ ಮಾಡಿ, ಚರ್ಚೆಗೆ ಅವಕಾಶ ನೀಡಿ

ಪ್ರಜಾವಾಣಿ ವಾರ್ತೆ

ಗದಗ: 'ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಪ್ರಬಲವಾಗಿರುವ ಜಾತಿಗಳಿಂದ ಹಿಂದುಳಿದ ವರ್ಗಗಳಿಗೆ ಕುತ್ತು ಬಂದಿದ್ದು, ಎಚ್. ಕಾಂತರಾಜು ನೇತೃತ್ವದಲ್ಲಿ ನಡೆದಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆಯನ್ನು ಸರ್ಕಾರ ಕೂಡಲೇ ಬಿಡುಗಡೆ ಮಾಡಿ, ಚರ್ಚೆಗೆ ಅವಕಾಶ ಮಾಡಿಕೊಡಬೇಕು' ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ ಆಗ್ರಹಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದಿಂದ ಬುಧವಾರ ಗದುಗಿನಲ್ಲಿ ನಡೆದ ಜಾಥಾದಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಹಿಂದುಳಿದ ಜಾತಿಗಳ ಒಕ್ಕೂಟದ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಎದುರು ಬುಧವಾರ ನಡೆದ ಬೃಹತ್ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

'ಎಚ್.ಕಾಂತರಾಜು ಆಯೋಗದ ವರದಿಯಿಂದ ರಾಜ್ಯದಲ್ಲಿರುವ ಎಲ್ಲ ಜಾತಿಗಳ ಆರ್ಥಿಕತೆ, ಶೈಕ್ಷಣಿಕ ಮಟ್ಟ, ಸಾಮಾಜಿಕ ಮತ್ತು ರಾಜಕೀಯವಾಗಿ ಎಷ್ಟು ಮುಂದುವರಿದಿವೆ ಎಂಬ ನಿಖರ ಚಿತ್ರಣ ಸಿಗಲಿದೆ. ಯಾವ ಜಾತಿಗೆ ಶೇಕಡಾವಾರು ಎಷ್ಟು ಮೀಸಲಾತಿ ಕೊಡಬೇಕು ಎಂಬುದನ್ನು ಅರಿಯಲು ಇದು ನೆರವಾಗಲಿದೆ' ಎಂದರು.

'ಸರ್ಕಾರ ರದ್ದು ಮಾಡಿರುವ ಹಿಂದುಳಿದ ವರ್ಗಗಳ ಅಭಿವೃದ್ಧಿ ಯೋಜನೆಗಳನ್ನು ಎಂದಿನಂತೆ ಮುಂದುವರಿಸಬೇಕು. ಎಚ್. ಕಾಂತರಾಜು ವರದಿಯನ್ನು ಜಾರಿಗೊಳಿಸಬೇಕು ಹಾಗೂ ಪ್ರಬಲ ಜಾತಿಗಳಿಗೆ 2ಎ ಮೀಸಲಾತಿ ನೀಡಬಾರದು. ಈ ವಿಚಾರದಲ್ಲಿ ಸರ್ಕಾರ ಮೊಂಡುತನ ಪ್ರದರ್ಶಿಸಿದರೆ ವಿಧಾನ ಸೌಧ ಚಲೋ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಮಾಜಿ ಶಾಸಕ ಎಂ.ಡಿ.ಲಕ್ಷ್ಮೀನಾರಾಯಣ, ಹಿಂದುಳಿದ ವರ್ಗಗಳ ಒಕ್ಕೂಟದ ಮುಖಂಡ ನಾಗರಾಜ್ ಯಾದವ್ ಪಾಲ್ಗೊಂಡಿದ್ದರು.

'ಬದುಕಿನ ಹೋರಾಟ'

'ಜನರ ಬದುಕಿನ ಅಸ್ಮಿತೆ, ಹೋರಾಟದ ಬಗ್ಗೆ ಕಿಂಚಿತ್ತು ಅನುಭವ ಇಲ್ಲದ ಅನನುಭವಿ, ಧನದಾಹಿ, ಬಂಡವಾಳಶಾಹಿಗಳ ಕೈಯಲ್ಲಿ ಈ ದೇಶದ ಚುಕ್ಕಾಣಿ ಇರುವುದರಿಂದ ನಾವು ವ್ಯವಸ್ಥಿತ ಹೋರಾಟ ಮಾಡಬೇಕು. ಇದು ಕೇವಲ ಮೀಸಲಾತಿ ಹೋರಾಟವಲ್ಲ; ಬದುಕಿನ ಹೋರಾಟ' ಎಂದು ಕುರಿ ಮತ್ತು ಉಣ್ಣೆ ನಿಗಮದ ಮಾಜಿ ಅಧ್ಯಕ್ಷ ವೈ.ಎನ್.ಗೌಡರ ಹೇಳಿದರು.

'ಬ್ರಿಟಿಷರ ವಿರುದ್ಧ ಹೋರಾಡದ ಆರೆಸ್ಸೆಸ್'

ಬೆಂಗಳೂರು: 'ಟಿಪ್ಪು ಜಾತ್ಯತೀತ ರಾಜ ಮತ್ತು ಜನನಾಯಕ. ಟಿಪ್ಪು ಎಲ್ಲೆಲ್ಲಿ ಮಸೀದಿ ಕಟ್ಟಿಸಿದ್ದರೊ ಅದರ ಪಕ್ಕದಲ್ಲಿ ದೇವಸ್ಥಾನಗಳನ್ನೂ ಕಟ್ಟಿಸುತ್ತಿದ್ದರು ಎನ್ನುವುದಕ್ಕೂ ದಾಖಲೆಗಳಿವೆ. ಜಾತಿವಾದಿ ಸಂಘಟನೆ ಆರೆಸ್ಸೆಸ್ ಮತಾಂಧತೆ ಕಾರಣಕ್ಕೆ ಟಿಪ್ಪು ಅವರನ್ನು ವಿರೋಧಿಸುತ್ತದೆ. ಇದಕ್ಕೆ ನಾನು ಡೋಂಟ್ ಕೇರ್' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಧರ್ಮದ ಕಾರಣಕ್ಕೆ ಟಿಪ್ಪುವನ್ನು ವಿರೋಧಿಸುವ ಆರೆಸ್ಸೆಸ್ ಯಾವತ್ತೂ ಬ್ರಿಟಿಷರ ವಿರುದ್ಧ ಹೋರಾಡಿಲ್ಲ. ಬ್ರಿಟಿಷರ ವಿರುದ್ಧ ಹೋರಾಡಿ ಆರೆಸ್ಸೆಸ್‌ನ ಒಬ್ಬನಾದರೂ ಸತ್ತಿರುವ ಉದಾಹರಣೆ ಇದ್ದರೆ ಹೇಳಲಿ' ಎಂದರು.

'ಬ್ರಿಟಿಷರ ವಿರುದ್ಧ ರಾಜಿ ರಹಿತವಾಗಿ ಹೋರಾಡಿ, ಅವರಿಗೆ ಯಾವತ್ತೂ ತಲೆತಗ್ಗಿಸದೆ ತಮ್ಮ ಮಕ್ಕಳನ್ನೇ ಒತ್ತೆ ಇಟ್ಟ ಟಿಪ್ಪುವಿನ ಜಯಂತಿ ಆಚರಣೆ ಆರಂಭಿಸಿದ ಬಗ್ಗೆ ನನಗೆ ಹೆಮ್ಮೆ ಇದೆ' ಎಂದರು. ಅಲ್ಲದೆ, ಕೆಂಪೇಗೌಡ ಜಯಂತಿ, ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಕೂಡಾ ಆರಂಭಿಸಿದ ಹೆಮ್ಮೆ ನಮ್ಮದು' ಎಂದರು.

'ಆರೆಸ್ಸೆಸ್ ಹೇಳುವ ಸುಳ್ಳುಗಳಿಗೆ ಸೊಪ್ಪು ಹಾಕುವ ಅಗತ್ಯ ಇಲ್ಲ. ಈ ದೇಶ 136 ಕೋಟಿ ಭಾರತೀಯರಿಗೂ ಸೇರಿದ್ದು. ಕೇವಲ ಒಂದು ಜಾತಿಯವರಿಗೆ, ಒಂದು ಧರ್ಮಕ್ಕೆ ಸೇರಿದ್ದಲ್ಲ. ಸಂಕುಚಿತ ಸಿದ್ಧಾಂತಕ್ಕಾಗಿ ಭಾರತೀಯರ ನಡುವೆ ಬಿರುಕು ತರಬಾರದು' ಎಂದರು.

ಪರಿಶಿಷ್ಟ ಮುಖ್ಯಮಂತ್ರಿ ವಿಚಾರದ ಬಗ್ಗೆ ಬಿಜೆಪಿ ಸವಾಲಿಗೆ ಪ್ರತಿಕ್ರಿಯಿಸಿದ ಅವರು, 'ಅತಿ ಹೆಚ್ಚು ಮಂದಿ ಪರಿಶಿಷ್ಟರು ಮುಖ್ಯಮಂತ್ರಿ ಆಗಿರುವ ಚರಿತ್ರೆ ಮತ್ತು ವರ್ತಮಾನ ಇರುವುದು ಕಾಂಗ್ರೆಸ್ಸಿಗೆ ಮಾತ್ರ. ಬಿಜೆಪಿಗರು ಬೊಮ್ಮಾಯಿ ಅವರನ್ನು ಕೆಳಗಿಳಿಸಿ ಪರಿಶಿಷ್ಟರನ್ನು ಮುಖ್ಯಮಂತ್ರಿ ಮಾಡಲಿ' ಎಂದು ಮರು ಸವಾಲು ಹಾಕಿದರು.

ಕೇರಳ ಪೊಲೀಸ್ ವಶದಲ್ಲಿ ಮಾವೊವಾದಿ ಮುಖಂಡ ಬಿ.ಜಿ. ಕೃಷ್ಣಮೂರ್ತಿ, ಸಾವಿತ್ರಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಸಿಪಿಐನ (ಮಾವೊವಾದಿ) ಮುಖಂಡರಾದ ಬಿ.ಜಿ. ಕೃಷ್ಣಮೂರ್ತಿ ಮತ್ತು ಸಾವಿತ್ರಿ ಅವರನ್ನು ಕೇರಳ–ಕರ್ನಾಟಕ ಗಡಿಯಲ್ಲಿ ಪೊಲೀಸರು ಬಂಧಿಸಿದ್ದಾರೆ.

'ಕೃಷ್ಣಮೂರ್ತಿ ಮತ್ತು ಸಾವಿತ್ರಿ ಅವರು ಕೇರಳ ಪೊಲೀಸರ ವಶದಲ್ಲಿದ್ದಾರೆ. ಅವರಿಬ್ಬರನ್ನು ನಮಗೆ ಒಪ್ಪಿಸುವ ವಿಚಾರವಾಗಿ ಈವರೆಗೆ ಯಾವುದೇ ಮಾಹಿತಿ ನೀಡಿಲ್ಲ' ಎಂದು ನಕ್ಸಲ್ ನಿಗ್ರಹ ಪಡೆ ಕಾರ್ಕಳ ವಿಭಾಗದ ಎಸ್ಪಿ ಮಿಥುನ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೃಷ್ಣಮೂರ್ತಿ ವಿರುದ್ಧ 50ಕ್ಕೂ ಹೆಚ್ಚು ಪ್ರಕರಣಗಳು ಮತ್ತು ಸಾವಿತ್ರಿ ವಿರುದ್ಧ 13ಕ್ಕೂ ಹೆಚ್ಚು ಪ್ರಕರಣಗಳು ಇವೆ ಎಂದು ಅವರು ತಿಳಿಸಿದರು.

ನಕ್ಸಲ್ ವಲಯದಲ್ಲಿ 'ಬಿಜಿಕೆ' ಎಂದು ಗುರುತಿಸಿಕೊಂಡಿರುವ ಬಿ.ಜಿ. ಕೃಷ್ಣಮೂರ್ತಿ ಅವರು ಶೃಂಗೇರಿ ತಾಲ್ಲೂಕಿನ ಬುಕ್ಕಡಿಬೈಲಿನ ನೆಮ್ಮಾರು ಎಸ್ಟೇಟ್‌ನವರು. ಬಿ.ಎ, ಎಲ್‌ಎಲ್‌ಬಿ ವ್ಯಾಸಂಗ ಮಾಡಿದ್ದಾರೆ. ಮಲೆನಾಡು ಭಾಗದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ಹೋರಾಟ ಸಹಿತ ವಿವಿಧ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರು.

ಸಾವಿತ್ರಿ

ಕೃಷ್ಣಮೂರ್ತಿ

ಸಾಕೇತ್ ರಾಜನ್ ಹತ್ಯೆಯ ನಂತರ ಕೃಷ್ಣಮೂರ್ತಿ ಸಂಘಟನಾ ಕಾರ್ಯದ ನೇತೃತ್ವ ವಹಿಸಿದ್ದರು. ಅಜ್ಞಾತವಾಗಿರಲು ಈ ಭಾಗ ಸುರಕ್ಷಿತವಲ್ಲ ಎಂಬ ಕಾರಣಕ್ಕೆ ಕೆಲ ವರ್ಷಗಳ ಹಿಂದೆ ಇಲ್ಲಿಂದ ಕೇರಳದ ಕಡೆಗೆ ಹೋಗಿದ್ದರು. ಅಲ್ಲಿನ ಕಾಡುಗಳಲ್ಲಿ ಅವಿತುಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

ಕೃಷ್ಣಮೂರ್ತಿಯ ಇರವಿನ ಬಗ್ಗೆ ಸುಳಿವು ನೀಡಿದವರಿಗೆ ₹ 5 ಲಕ್ಷ ಬಹುಮಾನ ನೀಡುವುದಾಗಿ ಕರ್ನಾಟಕ ಪೊಲೀಸ್ ಇಲಾಖೆ ಘೋಷಿಸಿತ್ತು.

ಸಾವಿತ್ರಿ ಅವರು ಕಳಸದ ಮಾವಿನಕೆರೆಯ ಮುಜೆಕಾನ್ ಸಮೀಪದ ಜರಿಮನೆ ಗ್ರಾಮದವರು. ಏಳನೇ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ. ಹಲವು ವರ್ಷಗಳಿಂದ ಅಜ್ಞಾತವಾಗಿದ್ದರು. ಕೃಷ್ಣಮೂರ್ತಿ ಅವರ ತಂಡದಲ್ಲಿದ್ದರು. 'ಕಬಿನಿ ದಳಂ'ನ ನೇತೃತ್ವ ವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಸಾವಿತ್ರಿ ಅವರ ಬಗ್ಗೆ ಮಾಹಿತಿ-ಸುಳಿವು ನೀಡಿದವರಿಗೆ ₹ 1 ಲಕ್ಷ ಬಹುಮಾನ ನೀಡುವುದಾಗಿ ಕರ್ನಾಟಕ ಪೊಲೀಸ್ ಇಲಾಖೆ ಘೋಷಿಸಿತ್ತು.

'ಬಸವಶ್ರೀ' ಪ್ರಶಸ್ತಿ ಪ್ರದಾನ

ಮೈಸೂರಿನಲ್ಲಿ ಬುಧವಾರ ಸರೋದ್ ವಾದಕ ಪಂಡಿತ್ ರಾಜೀವ ತಾರಾನಾಥ ಅವರಿಗೆ 'ಬಸವಶ್ರೀ' ಪ್ರಶಸ್ತಿ ಪ್ರದಾನ ಮಾಡಿದ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಶಿವಮೂರ್ತಿ ಮುರುಘಾ ಶರಣರು ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ₹5 ಲಕ್ಷದ ಚೆಕ್ ನೀಡಲಾಯಿತು. ಮೈಸೂರು ಮೇಯರ್ ಸುನಂದಾ ಫಾಲನೇತ್ರ, ಮೈಸೂರಿನ ಹೊಸಮಠದ ಚಿದಾನಂದ ಸ್ವಾಮೀಜಿ, ಚಿದರವಳ್ಳಿ ಶಿದ್ದರಹಳ್ಳಿ ಪಾರಮಾರ್ಥ ಗವಿಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಪಾಲ್ಗೊಂಡಿದ್ದರು.

–ಪ್ರಜಾವಾಣಿ ಚಿತ್ರ

ಗ್ರಾಮೀಣ ಕುಡಿಯುವ ನೀರು ಇಲಾಖೆಗೆ ಪ್ರಶಸ್ತಿ

ಬೆಂಗಳೂರು: ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಐಎಸ್‌ಸಿ–ಫಿಕ್ಕಿ ಜಂಟಿಯಾಗಿ ನೀಡುವ 'ಬೆಸ್ಟ್ ಕಮ್ಯುನಿಕೇಷನ್ ಇನ್ ಸ್ಯಾನಿಟೇಷನ್ 2021' ಪ್ರಶಸ್ತಿ ಲಭಿಸಿದೆ.

ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ನೀಡಲಾಯಿತು. ಕಾರ್ಯಕ್ರಮವು ವರ್ಚ್ಯುವಲ್ ಆಗಿ ನಡೆಯಿತು.

ನೈರ್ಮಲ್ಯ ಮತ್ತು ಕುಡಿಯುವ ನೀರಿನ ಕುರಿತಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ವಿಶೇಷವಾಗಿ ಸಾಮಾಜಿಕ ಜಾಲತಾಣದ ಮೂಲಕ ಇಲಾಖೆಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳು, ಮಾಹಿತಿಗಳನ್ನು ಜನರಿಗೆ ಸುಲಭವಾಗಿ ತಲುಪಿಸುತ್ತಿರುವ ಕಾರಣಕ್ಕೆ ಪ್ರಶಸ್ತಿ ನೀಡಲಾಗಿದೆ.

ಓಬವ್ವ ಜಯಂತಿ ಮುಂದೂಡಿಕೆ

ಚಿತ್ರದುರ್ಗ: ಒನಕೆ ಓಬವ್ವ ಜಯಂತಿಯನ್ನು ಘೋಷಿಸಿ ನ.11ರಂದು ಆಚರಿಸುವಂತೆ ಸೂಚಿಸಿದ್ದ ಸರ್ಕಾರ, ಚುನಾವಣಾ ನೀತಿ ಸಂಹಿತೆ ಜಾರಿಯಾದ ಪರಿಣಾಮ ಜಯಂತಿ ಆಚರಣೆಯನ್ನು ಮುಂದೂಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬುಧವಾರ ಪರಿಷ್ಕೃತ ಆದೇಶ ಹೊರಡಿಸಿದೆ. ನ.11ರಂದು ಓಬವ್ವ ಜಯಂತಿಯನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಸಲು ಆದೇಶಿಸಿತ್ತು.

ಬಿರುಸಿನ ಪ್ರಚಾರ ನಡೆಸುತ್ತಿರುವ ಮೂವರು ಅಭ್ಯರ್ಥಿಗಳು

ರಂಗೇರಿದ ಬ್ರಾಹ್ಮಣ ಮಹಾಸಭಾ ಚುನಾವಣೆ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆ ರಂಗೇರಿದೆ. ಹಲವು ದಶಕಗಳಿಂದ ಚಾಲ್ತಿಯಲ್ಲಿರುವ ಅಧ್ಯಕ್ಷೀಯ ಮಾದರಿ ಚುನಾವಣೆಗೆ ಕೊನೆ ಹಾಡಿ ಸಮುದಾಯದ ಎಲ್ಲರನ್ನು ಒಳಗೊಂಡಂತೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಮಹಾಸಭಾವನ್ನು ಮುನ್ನಡೆಸುವುದೇ ಈ ಬಾರಿಯ ಚುನಾವಣೆಯ ಪ್ರಮುಖ ವಿಷಯವಾಗಿದೆ.

ಈವರೆಗೆ ಅಧ್ಯಕ್ಷ ಹುದ್ದೆಗೆ ಮಾತ್ರ ಚುನಾವಣೆ ನಡೆಯುತ್ತಿತ್ತು. ಗೆದ್ದವರು ತಮ್ಮ ಆಪ್ತ ಬಳಗವನ್ನೇ ಪದಾಧಿಕಾರಿಗಳನ್ನಾಗಿ ನೇಮಕ ಮಾಡುತ್ತಿದ್ದರು. ಆದರೆ, ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ಮಹಾಸಭಾ ಹೆಚ್ಚಿನ ಕೊಡುಗೆ ನೀಡಿಲ್ಲ ಎಂಬ ದೂರು ಮತದಾರರಿಂದ ಕೇಳಿಬಂದಿದೆ. ಈ ಪರಂಪರೆಯನ್ನು ಕೊನೆಗೊಳಿಸುವುದಾಗಿ ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಅಶೋಕ್ ಹಾರನಹಳ್ಳಿ , ಎಸ್. ರಘುನಾಥ್ ಮತ್ತು ಆರ್.ಲಕ್ಷ್ಮೀಕಾಂತ್ ಅವರು ಹೇಳಿಕೊಂಡಿದ್ದಾರೆ.

ರಾಜ್ಯದಲ್ಲಿ ಸುಮಾರು 40 ಲಕ್ಷ ಬ್ರಾಹ್ಮಣರು ಇದ್ದಾರೆ ಎಂದು ಮಹಾಸಭಾ ಹೇಳುತ್ತಿದೆ. ಇವರ ಪೈಕಿ ಮತದಾನದ ಅರ್ಹತೆ ಪಡೆದಿರುವವರು 44 ಸಾವಿರ ಮಂದಿ. ಇದರಲ್ಲಿ 26 ಸಾವಿರ ಮತದಾರರು ಬೆಂಗಳೂರಿನಲ್ಲೇ ಇದ್ದಾರೆ. ಮೈಸೂರು, ಶಿವಮೊಗ್ಗ, ಹಾಸನ ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಮತದಾರರ ಸಂಖ್ಯೆ ಕಡಿಮೆ ಇದೆ. ಹೀಗಾಗಿ ಮಹಾಸಭಾ ತಳಮಟ್ಟವನ್ನು ತಲುಪಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಇದನ್ನು ಬದಲಿಸಬೇಕು ಎಂಬುದು ಮೂರೂ ಅಭ್ಯರ್ಥಿಗಳು ಪ್ರತಿಪಾದಿಸುತ್ತಾರೆ.

ಚುನಾವಣೆ ದಿನಾಂಕ ಕೆಲವೇ ದಿನಗಳಲ್ಲಿ ಪ್ರಕಟವಾಗಲಿದೆ. ಮೂವರು ಅಭ್ಯರ್ಥಿಗಳು ಈಗಾಗಲೇ ಬಿರುಸಿನ ಪ್ರಚಾರ ಆರಂಭಿಸಿದ್ದು, ಆರೋಪ-ಪ್ರತ್ಯಾರೋಪಗಳೂ ಆರಂಭವಾಗಿವೆ. ವಿಶೇಷವಾಗಿ ಶ್ರೀ ಗುರು ರಾಘವೇಂದ್ರ ಮತ್ತು ವಶಿಷ್ಠ ಬ್ಯಾಂಕ್‌ಗಳಲ್ಲಿ ನಡೆದಿರುವ ವಂಚನೆಯನ್ನೇ ಅಸ್ತ್ರವಾಗಿ ಬಳಸಲಾಗುತ್ತಿದೆ.

ಸಮುದಾಯದ ಅಭಿವೃದ್ಧಿಯೇ ಗುರಿ



ಮಹಾಸಭಾದ ಮಧ್ಯಂತರ ಅಧ್ಯಕ್ಷನಾಗಿ ಸಾಂಸ್ಥಿಕ ರಚನೆಯಲ್ಲಿ ಹಲವು ಲೋಪಗಳನ್ನು ಗುರುತಿಸಿದ್ದೇನೆ. ಅವುಗಳನ್ನು ಸರಿಪಡಿಸಿ ಸಮುದಾಯಕ್ಕೆ ಸೇರಿದ ಎಲ್ಲ ವ್ಯಕ್ತಿಗಳೂ ಪಾಲ್ಗೊಳ್ಳುವಂತೆ ಮಾಡುವುದು ನನ್ನ ಸ್ಪರ್ಧೆಯ ಮುಖ್ಯ ಉದ್ದೇಶ. ಮಹಾಸಭಾವು ಸಂಪನ್ಮೂಲ ಇಲ್ಲದೆ ಸೊರಗಿ ಹೋಗಿದೆ. ವಿದ್ಯಾರ್ಥಿ– ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ವ್ಯವಸ್ಥೆ, ವಿದ್ಯಾರ್ಥಿಗಳ ದತ್ತಾಂಶ ಸಂಗ್ರಹಿಸಿ ಅವರಿಗೆ ವೃತ್ತಿಪರ ಶಿಕ್ಷಣ ಮತ್ತು ವೃತ್ತಿ ಮಾರ್ಗದರ್ಶನ ನೀಡಲು ವ್ಯವಸ್ಥೆ, ವಧು–ವರರ ವೆಬ್‌ಸೈಟ್, ದಾಂಪತ್ಯ ಸಮಸ್ಯೆ ಬಗೆಹರಿಸಲು ಕೌನ್ಸೆಲಿಂಗ್ ವ್ಯವಸ್ಥೆ ಮಾಡಲಾಗುವುದು.

ಅಶೋಕ್ ಹಾರನಹಳ್ಳಿ, ಅಭ್ಯರ್ಥಿ

₹100 ಕೋಟಿ ಕಾಪು ನಿಧಿ ಸ್ಥಾಪನೆ

ಬೈಲಾ ಬದಲಾವಣೆಯ ಜತೆಗೆ, ಮಹಾಸಭಾದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುತ್ತೇನೆ. ಅಧ್ಯಕ್ಷ ಹುದ್ದೆಗೆ ಮಾತ್ರವಲ್ಲ, ಎಲ್ಲ ಪದಾಧಿಕಾರಿಗಳ ಹುದ್ದೆಗಳಿಗೂ ಚುನಾವಣೆ ನಡೆಸುವ ವ್ಯವಸ್ಥೆ ಜಾರಿ ಮಾಡಲಾಗುವುದು. ₹100 ಕೋಟಿಯ ಕಾಪು ನಿಧಿ ಸ್ಥಾಪಿಸಿ, ಬ್ರಾಹ್ಮಣ ಸಮುದಾಯದಲ್ಲಿನ ಅಶಕ್ತರು ಮತ್ತು ಬಡವರ ಏಳಿಗೆಗಾಗಿ ಬಳಸುತ್ತೇನೆ. ಮಹಾಸಭಾ ವತಿಯಿಂದ ಶಾಲಾ ಕಾಲೇಜುಗಳನ್ನು ಆರಂಭಿಸುವ ಉದ್ದೇಶವನ್ನೂ ಇಟ್ಟುಕೊಂಡಿದ್ದೇನೆ,

ಎಸ್.ರಘುನಾಥ್, ಅಭ್ಯರ್ಥಿ

ಅಶಕ್ತರ ನೆರವಿಗೆ ಕಾರ್ಯಕ್ರಮ

50 ವರ್ಷಗಳಷ್ಟು ಹಳೆಯ ಬೈಲಾ ಆಮೂಲಾಗ್ರವಾಗಿ ಬದಲಾಯಿಸಿ ಮಹಾಸಭಾಗೆ ಆರ್ಥಿಕ ಶಕ್ತಿ ತುಂಬಬೇಕಾಗಿದೆ. ವಿದ್ಯಾರ್ಥಿಗಳಿಗೆ ನೆರವಾಗಬೇಕು. ತ್ರಿಮತಸ್ಥರ ಮಧ್ಯೆ ಸಾಮರಸ್ಯ ಮೂಡಿಸಲು ಮತ್ತು ಬ್ರಾಹ್ಮಣ ಸಮುದಾಯ ಹೆಚ್ಚು ಸಂಘಟಿತವಾಗಲು ಅಗತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಮುಜರಾಯಿಯೇತರ ದೇವಸ್ಥಾನಗಳಲ್ಲಿರುವ ಆರ್ಥಿಕವಾಗಿ ಸಬಲರಲ್ಲದ ಅರ್ಚಕರ ನೆರವಿಗಾಗಿ ಕಾರ್ಯಕ್ರಮ ರೂಪಿಸಲಾಗುವುದು.

ಆರ್.ಲಕ್ಷ್ಮೀಕಾಂತ್, ಅಭ್ಯರ್ಥಿ

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು
ಭಾರತ ಟಿ20 ಕ್ರಿಕೆಟ್ ತಂಡದ 'ಹಿಟ್‌ಮ್ಯಾನ್' ಖ್ಯಾತಿಯ ರೋಹಿತ್ ಶರ್ಮ ಅವರ ನಾಯಕತ್ವದಲ್ಲಿ ಉತ್ತಮ ಪ್ರದರ್ಶನವನ್ನು ಕ್ರೀಡಾ ಪ್ರೇಮಿಗಳು ನಿರೀಕ್ಷಿಸಬಹುದೇ?
QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
ಪಿಂಚಣಿ ಅದಾಲತ್ ದಿನಾಂಕ: 9 ನವೆಂಬರ 2021
ಪಿಂಚಣಿದಾರರು/ಕುಟುಂಬ ಪಿಂಚಣಿದಾರರ "ಪಿಂಚಣಿ ಸವಲತ್ತುಗಳಿಗೆ" ಮಾತ್ರ ಸಂಬಂಧಿಸಿದಂತೆ ಕುಂದು–ಕೊರತೆಗಳನ್ನು ಬಗೆಹರಿಸಲು ರೈಲು ಗಾಲಿ ಕಾರ್ಖಾನೆಯ ಪಿಂಚಣಿದಾರರ ಮತ್ತು ಕುಟುಂಬ ಪಿಂಚಣಿದಾರರ ಪಿಂಚಣಿ ಅದಾಲತ್ ಅನ್ನು 15.12.2021 (ಬುಧವಾರ) ಕಾನ್ಫರೆನ್ಸ್ ಹಾಲ್, ಆಡಳಿತ ಕಟ್ಟಡ, ರೈಲು ಗಾಲಿ ಕಾರ್ಖಾನೆಯಲ್ಲಿ ನಡೆಸಲಾಗುತ್ತದೆ.
ಪಿಂಚಣಿದಾರರು, ಕುಟುಂಬ ಪಿಂಚಣಿದಾರರು ತಮ್ಮ ಕುಂದುಕೊರತೆಗಳನ್ನು ಪೂರ್ಣ ವಿವರಗಳೊಂದಿಗೆ "ಪಿಂಚಣಿ ಅದಾಲತ್" – 2021 ಎಂದು ಸರಿಯಾಗಿ ಬರೆದಿರುವ ಲಕೋಟೆಯಲ್ಲಿ ಹಿರಿಯ ಕಾರ್ಮಿಕ ಅಧಿಕಾರಿ, ರೈಲ್ ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು–560 064 ಅವರಿಗೆ 30.11.2021 ರಂದು ಅಥವಾ ಮೊದಲು ತಲುಪುವಂತೆ ಕಳುಹಿಸಬಹುದು ಅಥವಾ ಅವರು ತಮ್ಮ ಕುಂದುಕೊರತೆಗಳನ್ನು C.vijayachintamani@gov.in ಗೆ ಇ–ಮೇಲ್ ಮಾಡಬಹುದು.
ಸಂಪೂರ್ಣ ಕಾನೂನು ಪ್ರಕ್ರಿಯೆ ಮತ್ತು ನಿಯಮಾವಳಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಪಿಂಚಣಿ ಅದಾಲತ್ ನಲ್ಲಿ ಪರಿಗಣಿಸಲಾಗುವುದಿಲ್ಲ.
ಪ್ರಧಾನ ಮುಖ್ಯ ಕಾರ್ಮಿಕ ಅಧಿಕಾರಿ

ಕೇಂದ್ರೀಯ ವಿದ್ಯಾಲಯ, ದೋಣಿಮಲೈ
केन्द्रीय विद्यालय दोणिमलै
KENDRIYA VIDYALAYA DONIMALAI
बल्लारी जिला, कर्नाटक –५८३ ११८ BALLARI DIST. KARNATAKA– 583 118
Tele: 08395 274604, E-mail: kvdoni_malai@rediffmail.com
kvdonimalai0@gmail.com, Website : https://ndmcdonimalai.kvs.ac.in
WALK-IN INTERVIEW FOR THE FOLLOWING POSTS ON PART-TIME CONTRACTUAL BASIS FOR THE YEAR 2021-22 ON 16-11-2021 IN THE VIDYALAYA PREMISES FROM 09.00 AM
1. POST GRADUATE TEACHER (in Physics)
2. TRAINED GRADUATE TEACHERS (in Science and English)
- Reporting time for all candidates is 08.30 AM on 16-11-2021 (Tuesday).
- Candidates appearing for interview must bring original certificates and marks sheets for verification along with one set of self-attested copies of all the certificates.
For further details about eligibility, educational qualifications and remuneration, please visit the Vidyalaya website https://ndmcdonimalai.kvs.ac.in
Sd/- PRINCIPAL

ಮಹಾನಗರ ಪಾಲಿಕೆ, ವಿಜಯಪುರ
ನಂ:ಮನಪಾ/ಲೋ.ವಿ/ಕಾಅ/ಡಿಎಮ್/ಟಿಎನ್‌ಡಿ/ಇ–ಪ್ರೊ/2021–22 ದಿನಾಂಕ:08.11.2021
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಸನ್ 2017–18ನೇ ಸಾಲಿನ 14ನೇ ಹಣಕಾಸು ಸಮಾನ್ಯ ಕಾರ್ಯಾನಿರ್ವಹಣಾ ಅನುದಾನದಲ್ಲಿ ಹಾಗೂ ಸನ್ 2019–20ನೇ ಸಾಲಿನ 14ನೇ ಹಣಕಾಸು ಸಮಾನ್ಯ ಮೂಲ ಅನುದಾನದಲ್ಲಿ01 ಕಾಮಗಾರಿ, ಸನ್ 2021–22 ಸಾಲಿನ 15ನೇ ಹಣಕಾಸು ಯೋಜನೆಯಲ್ಲಿ 01 ಕಾಮಗಾರಿ ಹಾಗೂ ಸನ್ 2021–22 ಸಾಲಿನ ಮಹಾನಗರಪಾಲಿಕೆಯ ಅನುದಾನದಲ್ಲಿ 03 ಕಾಮಗಾರಿಗಳ ಕೆ.ಪಿ.ಡಬ್ಲ್ಯೂಡಿ/ಜಿಲ್ಲಾಪಂಚಾಯತ/ಸಿ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ (https://www.eproc.karnataka.gov.in) ನಲ್ಲಿ ಪ್ರಕಟಿಸಲಾಗಿದೆ.
1) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:18.11.2021
ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/349/ಎಂಸಿಎ/2021–22

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆವಿಕಂರವರು ವಿಚಾರಣೆ ಸಂಖ್ಯೆ: ಬೆವಿಕಂ/ಬಿಸಿ–53/ ಉಪ್ರವ್ಯ(ಎಸ್ ಜಿ&ಇವಿ)/2021–22/ENQ-05 ದಿನಾಂಕ: 10.11.2021 ರಂತೆ "ಬೆ.ವಿ.ಕಂ ವ್ಯಾಪ್ತಿಯಲ್ಲಿ ಒಟ್ಟು 1.87 ಲಕ್ಷ ಸರ್ಕಾರಿ ಸ್ಥಾವರಗಳು, ವಿತರಣಾ ಪರಿವರ್ತಕ ಕೇಂದ್ರಗಳು (DTC) ಹಾಗು 40 HP ಗಿಂತ ಹೆಚ್ಚಿನ LT3 & LT5 ಸ್ಥಾವರಗಳಿಗೆ, TOTEX ಮಾದರಿಯಲ್ಲಿ AMI ಸೇವಾ ಪೂರೈಕೆದಾರರ ನೇಮಕಾತಿ"ಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.
ಇ–ಪೋರ್ಟಲ್‌ನಲ್ಲಿ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.11.2021ರಂದು 17:30 ಗಂಟೆಯವರೆಗೆ. ಬಿಡ್–ಪೂರ್ವ ಸಭೆ: 30.11.2021 ರಂದು 11:00 ಗಂಟೆಗೆ, ಬೋರ್ಡ್ ರೂಮ್ ಕಾರ್ಪೊರೇಟ್ ಕಛೇರಿ, ಬೆವಿಕಂ. ಬಿಡ್ ದಾಖಲೆಗಳ ಲಭ್ಯತೆ: 19.11.2021ರಂದು 17:00 ಗಂಟೆಯ ನಂತರದಿಂದ. ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.12.2021ರಂದು 17:00 ಗಂಟೆಯವರೆಗೆ. ಬಿಡ್ ದಾಖಲೆಗಳನ್ನು ತೆರೆಯುವುದು: 22.12.2021ರಂದು 12:00 ಗಂಟೆಗೆ. ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಬೆವಿಕಂ ಅಹ್ವಾನಿಸಿದೆ. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟಲ್ಲಿ (https://eproc.karnataka.gov.in) ನೇರವಾಗಿ ಪ್ರವೇಶಿಸಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳ ಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ವಿ) (ಎಸ್.ಜಿ & ಇ.ವಿ.), ಬೆವಿಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್ ಬೆಳಗಾವಿ
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆ ಮೌಲಾನಾ ಆಜಾದ್ ಅಲ್ಪಸಂಖ್ಯಾತರ ಭವನ ಕೆ.ಎಸ್.ಸಿ.ಎ ಕ್ರಿಕೇಟ್ ಕ್ರೀಡಾಂಗಣ ಎದುರುಗಡೆ ರಾಮತೀರ್ಥ ನಗರ, ಬೆಳಗಾವಿ–590016
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮೂಲಕ)
No:MWDB/OUTSOURCE/TENDER/CR-41/2021-22 And Dated: 09.11.2021
MWDB/FOOD/TENDER/CR-41/2021-22
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗೆ 2021–22ನೇ ಸಾಲಿನ ಆಹಾರ ಮತ್ತು ಇತರೆ ಸಾಮಗ್ರಿ (ಅಂದಾಜು ಮೊತ್ತ ರೂ. 405.10 ಲಕ್ಷ) ಹಾಗೂ ಮೆಟ್ರಿಕ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ಜಿಲ್ಲಾ ಕಛೇರಿ ಮತ್ತು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಹೊರಮೂಲ ಸಿಬ್ಬಂದಿ ಸೇವೆಯನ್ನು ಪೂರೈಸುವ (ಅಂದಾಜು ಮೊತ್ತ 185.01 ಲಕ್ಷ) ಎಜೆನ್ಸಿಗಳನ್ನು ಒಂದು ವರ್ಷದ ಮಟ್ಟಿಗೆ ಅಥವಾ ಮುಂದಿನ ಆದೇಶದ ವರೆಗೆ ಆಯ್ಕೆ ಮಾಡುವಗೊಸ್ಕರ ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09.12.2021 ವಾಗಿರುತ್ತದೆ. ವಿವರವನ್ನು ಇಲಾಖೆಯ ವೆಬ್‌ಸೈಟ್: https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 0831–2950349 ನ್ನು ಸಂಪರ್ಕಿಸಬಹುದಾಗಿದೆ.
ಸಹಿ/–ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ
ಸಹಿ/–ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಬೆಳಗಾವಿ
DIPR/BGM/RO-NO-1020/MCA/2021-21

ಕರ್ನಾಟಕದ ಸಾಂಸ್ಕೃತಿಕ ಇತಿಹಾಸ

ಗ್ರೂಪ್-ಸಿ ತಾಂತ್ರಿಕೇತರ ಹುದ್ದೆ

ಕರ್ನಾಟಕ ಲೋಕಸೇವಾ ಆಯೋಗವು ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳಿಗೆ ನಡೆಸಲಿರುವ ಸ್ಪರ್ಧಾತ್ಮಕ ಪರೀಕ್ಷೆಯ ಹಿನ್ನೆಲೆಯಲ್ಲಿ ಸಾಮಾನ್ಯ ಜ್ಞಾನ ವಿಭಾಗದಲ್ಲಿ ಸಾಂಸ್ಕೃತಿಕ ಇತಿಹಾಸ ವಿಷಯದ ಕುರಿತಾದ ಬಹುಆಯ್ಕೆ ಪ್ರಶ್ನೆಗಳು.

1. ಕನ್ನಡ ನಾಡಿನ ದೊರೆ 2ನೇ ಪುಲಕೇಶಿಯ ಕಾಲದಲ್ಲಿ ಅಜಂತಾ ಗುಹೆಗಳಲ್ಲಿರುವ ಕಲಾವೈಭವದ ಕುರಿತು ________________ ಅವರು ಈಸ್ಟ್ ಇಂಡಿಯಾ ಕಂಪನಿಯ ಗಮನ ಸೆಳೆದರು.

ಎ. ಜೇಮ್ಸ್ ಫರ್ನಾಂಡಿಸ್ ಬಿ. ಜೇಮ್ಸ್ ಫರ್ಗುಸನ್

ಸಿ. ರಾಬರ್ಟ್ ಸೀಲ್ ಡಿ. ಮೇಲಿನ ಯಾರೂ ಅಲ್ಲ

ಉತ್ತರ: ಬಿ

2. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಸಂಸ್ಕೃತಿ ಮತ್ತು ಕಲ್ಚರ್ ಎಂಬುದರ ಹಿಂದಿರುವ ಅರ್ಥ ಒಂದೇ ಆಗಿತ್ತು. ಅವೆರಡರ ಅರ್ಥವು ಗೌರವಿಸು, ಆಧರಿಸು, ಸೇವೆ ಮಾಡು ಎಂಬುದಾಗಿತ್ತು. ದೈವ ಭಕ್ತಿಯನ್ನು ಆಧರಿಸು, ಅದನ್ನು ಗೌರವಿಸು, ದೇವರ ಸೇವೆ ಮಾಡು ಎಂಬುದಾಗಿದೆ. ಅದೇ ಮುಂದುವರಿದು ಭೂತಾಯಿಯನ್ನು, ಪ್ರಕೃತಿಯನ್ನು ಆರಾಧಿಸು ಎಂಬರ್ಥದಲ್ಲಿಯೂ ಬಳಕೆಯಾಗಿ ಜೀವನದ ಭಾಗವಾಗಿ ಆಚರಣೆಗೂ ಬಂತು.
2. ನಮ್ಮ ಜೀವನದಲ್ಲಿ ಸ್ಥಾಪಿತವಾದ ವಿವಿಧ ವ್ಯವಸ್ಥೆಗಳಾದ ದೇವಾಲಯ, ಅಲ್ಲಿ ನಡೆಯುವ ಪೂಜೆ- ಪುನಸ್ಕಾರ, ಅದಕ್ಕಾಗಿ ಕಟ್ಟಲಾದ ಬೃಹತ್ ಮಂದಿರ, ಅದಕ್ಕೆ ಬಳಸಿದ ಶಿಲ್ಪ-ವಾಸ್ತುಶಿಲ್ಪ (ಆರ್ಕಿಟೆಕ್ಚರ್), ಚಿತ್ರಕಲೆ, ಸಂಗೀತ, ನಾಟ್ಯ, ಜನಪದ ಗೀತೆ ಈ ಮೊದಲಾದವೇ ಸಂಸ್ಕೃತಿಯಾಯಿತು.
3. ಏಕ ದೇವರು, ಏಕ ಗ್ರಂಥ ಎನ್ನದೇ ಬಹುತ್ವದಲ್ಲಿ ನಂಬಿಕೆ ಇಟ್ಟಿರುವುದು ನಮ್ಮ ಸಂಸ್ಕೃತಿಯ ವಿಶೇಷತೆ. ಹೀಗಾಗಿ ಬಹುದೇವತಾರಾಧನೆಯನ್ನು ನಮ್ಮ ಸಂಸ್ಕೃತಿಯಲ್ಲಿ ನೋಡಬಹುದು. ಕೇವಲ ದೇವತಾರಾಧನೆ ಮಾತ್ರವಲ್ಲ, ಪ್ರಗತಿಪರವಾದ ಎಲ್ಲವನ್ನೂ ಮನ್ನಣೆ ನೀಡಿ ಗೌರವಿಸುವುದು ಹಾಗೂ ಅದನ್ನು ತನ್ನದಾಗಿಸಿಕೊಂಡು ಜೀರ್ಣಿಸಿಕೊಳ್ಳುವುದು ನಮ್ಮ ನಾಡಿನ ಸಂಸ್ಕೃತಿಯ ಭಾಗವಾಗಿದೆ.
4. ವಿನ್ಸಂಟ್ ಸ್ಮಿತ್ ಅವರ 'ಹಿಸ್ಟರಿ ಆಫ್ ಫೈನ್ ಆರ್ಟ್: ಇಂಡಿಯಾ ಮತ್ತು ಸಿಲೋನ್' ಪುಸ್ತಕದಲ್ಲಿಯೂ ಕರ್ನಾಟಕದ ಸಂಸ್ಕೃತಿಯ ಬಗ್ಗೆ ವಿವರವಾಗಿ ಬರೆದಿದ್ದಾರೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 2, 3 ಮತ್ತು 4ರ ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 4ರ ತನಕ ಎಲ್ಲವೂ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಸಿ

3. ನಮ್ಮ ಕನ್ನಡ ನಾಡಿನ ಬಾದಾಮಿ ಚಾಲುಕ್ಯರ ದೊರೆ 2ನೇ ಪುಲಕೇಶಿಯ ಕಾಲದ ಅಜಂತಾ ಗುಹೆಗಳಲ್ಲಿರುವ ಕಲಾವೈಭವದ ಬಗ್ಗೆ ಈಸ್ಟ್ ಇಂಡಿಯಾ ಕಂಪನಿಯ ಗಮನಕ್ಕೆ ಬಂದ ಪರಿಣಾಮ 1843ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು .... ಎಂಬ ಕಲಾವಿದನನ್ನು ಅವುಗಳ ಅಧ್ಯಯನಕ್ಕಾಗಿ ಕಳುಹಿಸಿಕೊಟ್ಟಿತು. ಅಲ್ಲಿ 1857ರ ತನಕ ಅವನ ಕೆಲಸ ನಡೆಯಿತು. ಮುಂದೆ ಗ್ರಿಫಿತ್ಸ್ ಎಂಬುವವರು ಕೆಲಸವನ್ನು ವಹಿಸಿಕೊಂಡರು.

ಎ. ಮೇಜರ್ ಗಿಲ್ ಬಿ. ಜೇಮ್ಸ್ ಫರ್ಗುಸನ್

ಸಿ. ಮೇಜರ್ ಬಕಸ್ಟ್ ರಾಕ್ ಡಿ. ಮೇಲಿನ ಯಾರೂ ಅಲ್ಲ

ಉತ್ತರ: ಎ

4. ಇಡೀ ಭಾರತದಲ್ಲಿ ಹಿಂದೂ ಪುರಾಣಗಳಿಗೆ ಸಂಬಂಧಿಸಿದ ಅತಿ ಪುರಾತನ ಚಿತ್ರಗಳು ಎಲ್ಲಿ ಸಿಕ್ಕಿವೆ?

ಎ. ಅಜಂತಾ ಬಿ. ತಾಡಪತ್ರಿ ಸಿ. ಬಾದಾಮಿ ಡಿ. ಲೇಪಾಕ್ಷಿ

ಉತ್ತರ: ಸಿ

5. ಬಾದಾಮಿಯ ವರ್ಣ ಚಿತ್ರಗಳಿಗೂ ಅಜಂತಾ ಚಿತ್ರಗಳಿಗೂ ವ್ಯತ್ಯಾಸವಿದೆ. ಹಾಗಾದರೆ ಅದನ್ನು ಗುರುತಿಸಿ.

ಎ. ಅಜಂತಾ ಚಿತ್ರಗಳು ಬೌದ್ಧ ಧರ್ಮದಿಂದ ಪ್ರೇರಿತವಾದರೆ, ಬಾದಾಮಿ ಚಿತ್ರಗಳು ಹಿಂದೂ ಧರ್ಮದ ಪುರಾಣಗಳ ಸನ್ನಿವೇಶಗಳಿಗೆ ಸಂಬಂಧಪಟ್ಟವು.

ಬಿ. ಅಜಂತಾ ಚಿತ್ರಗಳು ಹಿಂದೂ ಧರ್ಮದಿಂದ ಪ್ರೇರಿತವಾದರೆ, ಬಾದಾಮಿ ಚಿತ್ರಗಳು ಬೌದ್ಧ ಧರ್ಮದ ಜಾತಕ ಕಥೆಗಳ ಸನ್ನಿವೇಶಗಳಿಗೆ ಸಂಬಂಧಪಟ್ಟವು

ಸಿ. ಅಜಂತಾ ಚಿತ್ರಗಳು ಜೈನ ಧರ್ಮದಿಂದ ಪ್ರೇರಿತವಾದರೆ ಬಾದಾಮಿ ಚಿತ್ರಗಳು ಹಿಂದೂ ಧರ್ಮದ ಪುರಾಣಗಳ ಸನ್ನಿವೇಶಗಳಿಗೆ ಸಂಬಂಧಪಟ್ಟವು

ಡಿ. ಅಜಂತಾ ಚಿತ್ರಗಳು ಹಿಂದೂ ಧರ್ಮದಿಂದ ಪ್ರೇರಿತವಾದರೆ, ಬಾದಾಮಿ ಚಿತ್ರಗಳು ಚಾರ್ವಾಕ ಧರ್ಮದ ಕಥೆಗಳ ಸನ್ನಿವೇಶಗಳಿಗೆ ಸಂಬಂಧಪಟ್ಟವು

ಉತ್ತರ:ಎ

6. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಕದಂಬರ ರಾಜ ರವಿವರ್ಮ ತನ್ನ ಧಾರ್ಮಿಕ ಆಡಳಿತ ವ್ಯವಸ್ಥೆಗೆ ಜೈನ ವಿದ್ವಾಂಸ ಕುಮಾರದತ್ತನ ಸಲಹೆಯನ್ನು ಪಡೆಯುತ್ತಿದ್ದ. ಚೈತ್ರಮಾಸದಲ್ಲಿ ನಡೆಯುವ ಜೀನೇಂದ್ರ ಉತ್ಸವಕ್ಕೆ ವಸ್ತುಗಳನ್ನು ಮೊದಲಿನಿಂದಲೂ ಸಂಗ್ರಹಿಸಿಡಬೇಕೆಂದು ಆಜ್ಞೆಯನ್ನು ಮಾಡಿದ್ದ.
2. ಬನವಾಸಿಯಲ್ಲಿ ಹೀನಾಯಾನ ಮತ್ತು ಮಹಾಯಾನ ಬೌದ್ಧ ಪಂಗಡಗಳು ಅಸ್ತಿತ್ವದಲ್ಲಿದ್ದವು. ಬನವಾಸಿ ನಗರವೊಂದರಲ್ಲಿಯೇ 2 ಸಂಘಧಾಮಗಳು ಮೂರು ಸ್ತೂಪಗಳು ಇದ್ದವು. ಅಲ್ಲಿರುವ ಸಂಘಧಾಮದಲ್ಲಿ ಮೈತ್ರೇಯ ಬುದ್ಧನ ಅದ್ಭುತವಾದ ಗಂಧದ ಮರದ ವಿಗ್ರಹವೊಂದಿತ್ತು
3. ಕದಂಬಕಾಲದಲ್ಲಿ ಶಿವ ಪೂಜೆಯು ವೈದಿಕ ಪದ್ಧತಿಯಲ್ಲಿ ವಿಜೃಂಭಣೆಯಿಂದ ನಡೆಯುತ್ತಿದ್ದ ಬಗ್ಗೆ ತಾಳಗುಂದದ ಶಾಸನ ವಿವರಿಸುತ್ತದೆ. ಇದಲ್ಲದೇ ಪಾಶುಪಥ, ಕಾಪಾಲಿಕ ಮೊದಲಾದ ಶೈವ ಪಂಥಗಳು ಕದಂಬರ ಕಾಲದಲ್ಲಿದ್ದವು.
4. ಹಾನಗಲ್ಲು ಕದಂಬರ ಶಾಖೆಯಂತೂ ಸಂಪೂರ್ಣ ವೈಷ್ಣವಾವಂಬಿಯಾಗಿತ್ತು. ಹಾಂಗೆಂದು ಉಳಿದ ಧರ್ಮಾಚರಣೆಗೆ ಅಡ್ಡಿ ಇರಲಿಲ್ಲ. ಪ್ರಜೆಗಳಿಗೆ ಪೂಜೆ, ಆಚರಣೆ, ನಂಬಿಕೆಗಳಲ್ಲಿ ತಾವೇ ಸ್ವತಃ ಆಯ್ಕೆ ಮಾಡಿಕೊಳ್ಳಲು ಸ್ವಾತಂತ್ರ್ಯವಿತ್ತು.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಸಿ

7. ಇವುಗಳಲ್ಲಿ ತಪ್ಪಾಗಿರುವುದನ್ನು ಗುರುತಿಸಿ

ಎ. ದೇವನಂದಿ - ಪಾಣಿನಿಯ ವ್ಯಾಕರಣ ಗ್ರಂಥಕ್ಕೆ 'ಶಬ್ದಾವತಾರ' ಎಂಬ ವ್ಯಾಖಾನ

ಬಿ. ದುರ್ವಿನಿತ - ಗುಣಾಢ್ಯನ ಬೃಹತ್ ಕಥೆ ಸಂಸ್ಕೃತದಲ್ಲಿ ರಚನೆ.

ಸಿ. ಶ್ರೀಪುರುಷ - ಸೇತುಬಂಧ ಗ್ರಂಥ ರಚನೆ.

ಡಿ. ಚಾವುಂಡರಾಯ- ತ್ರಿಷಷ್ಠಿ ಶಲಾಖಾ ಪುರುಷ ಪುರಾಣ ಗ್ರಂಥ ರಚನೆ

ಉತ್ತರ: ಸಿ (ವಿವರಣೆ:- ಶ್ರೀಪುರುಷ- ಗಜಶಾಸ್ತ್ರ ಬರೆದಿದ್ದಾನೆ)

8. ವಿದೇಶಿ ಪ್ರವಾಸಿಗ ಡೊಮಿಂಗೋ ಪಯಾಸ್ ಹೇಳುವಂತೆ ವಿಜಯನಗರದ ಅರಮನೆಯ ಹೆಬ್ಬಾಗಿಲಿನ ಅಕ್ಕಪಕ್ಕದಲ್ಲಿ ಎರಡು ದೊಡ್ಡ ಪೂರ್ಣಾಕೃತಿಯ ಚಿತ್ರಗಳು ಇದ್ದವಂತೆ. ಅದರಲ್ಲಿ ಒಂದು ಕೃಷ್ಣದೇವರಾಯನದ್ದಾದರೆ ಮತ್ತೊಂದು ________________ ಚಿತ್ರವಾಗಿತ್ತಂತೆ.

ಎ. ಅವರ ತಂದೆಯವರ ಬಿ. ರಾಣಿಯರ

ಸಿ. ಆನೆಯ ಡಿ. ವಿರೂಪಾಕ್ಷ ಸ್ವಾಮಿ ದೇವರ

ಉತ್ತರ: ಎ

9. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಕದಂಬರು ಕರ್ನಾಟಕದ ಶಿಲ್ಪಕಲೆಯ ಮೂಲ ಪುರುಷರೆನ್ನಬಹುದು. ಬನವಾಸಿ, ಹಲಸಿ, ತಾಳಗುಂದದಲ್ಲಿ ಇವರ ದೇವಾಲಯಗಳಿವೆ.
2. ಗೋವಾದ ಅರ್ವಾಲೆಂನಲ್ಲಿ ಕದಂಬರ ಕಾಲದ ಗುಹಾಲಯ ದೇವಾಲಯವಿದ್ದು ತ್ರಿಕೂಟ ದೇವಾಲಯವಾಗಿದೆ. ಸೂರ್ಯ, ಶಿವ, ಸ್ಕಂದನ ಪೂಜೆ ಇಲ್ಲಿ ನಡೆಯುತಿತ್ತು
3. ಕೋಲಾರಮ್ಮನ ಮಂದಿರ ಮತ್ತು ಅದರ ಮೇಲಿರುವ ಶಿಖರವು ಅಪ್ಪಟ ಗಂಗರ ಶೈಲಿಯದ್ದಾಗಿದೆ. ಚಾಮರಾಜನಗರದ ನರಸಮಂಗಲದ ರಾಮಲಿಂಗೇಶ್ವರ ದೇವಾಲಯದ ಶಿಖರದಲ್ಲಿ ಅತ್ಯುತ್ಕೃಷ್ಟ ಸುಟ್ಟ ಮಣ್ಣಿನ ಮೂರ್ತಿಗಳಿವೆ. ಅಲ್ಲದೇ ಶಿಲೆಯ ಸಪ್ತಮಾತೃಕಾ ಪ್ರತಿಮೆಗಳಿವೆ.
4. ಚಾವುಂಡರಾಯನು ಶ್ರವಣಬೆಳಗೊಳದಲ್ಲಿ 57 ಅಡಿ ಎತ್ತರದ ಗೊಮ್ಮಟೇಶ್ವರ ಮೂರ್ತಿಯನ್ನು ಕೆತ್ತಿಸಿದ್ದ ಮತ್ತು ಪ್ರತಿಷ್ಠಾಪಿಸಿದ್ದ. ಕಮಲದಲ್ಲಿ ನಿಂತಂತೆ ಬಿಳಿಯ ಬೆಣಚು ಕಲ್ಲಿನಿಂದ ಕೆತ್ತಲಾದ ಬೃಹತ್ ಗೊಮ್ಮಟೇಶ್ವರ ಮೂರ್ತಿಯೂ ಇತಿಹಾಸ ಪ್ರಸಿದ್ಧವಾದದ್ದು

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 3ರ ತನಕ ಮಾತ್ರ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಬಿ

10. ಈಗ ಹಳ್ಳಿಯಾಗಿರುವ ಲೇಪಾಕ್ಷಿಯನ್ನು ವಿಜಯನಗರದ ಕಾಲದಲ್ಲಿ ವಿರುಪಣ್ಣ ನಾಯಕ ಹಾಗೂ ಆತನ ಸಹೋದರರು ಆಳುತ್ತಿದ್ದರು. ಇದನ್ನು ಹೀಗೂ ಕರೆದಿದ್ದಾರೆ

ಎ. ಶೈವರ ಅಜಂತಾ ಬಿ. ವೈಷ್ಣವರ ಅಜಂತಾ

ಸಿ. ಜೈನ ಕಾಶಿ ಡಿ. ಬೌದ್ಧರ ಸನ್ನತಿ

ಉತ್ತರ: ಎ

11. ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದಂತೆ ಕೆಳಗೆ ನೀಡಲಾದ ಪ್ಯಾರಾ ಓದಿ.

ಈ ಕಾಲದಲ್ಲಿ ಕೇವಲ ದೇವಾಲಯದ ಗೋಡೆಗಳ ಮೇಲಷ್ಟೇ ಅಲ್ಲ, ಪ್ರಕಟಿತ ಪುಸ್ತಕಗಳಲ್ಲಿಯೂ ಕೈಬರಹದ ಚಿತ್ರಗಳಿವೆ. ಉದಾ: ರಾಜರೊಬ್ಬರು ಬರೆದಿರುವ `ಶ್ರೀ ತತ್ವನಿಧಿ' ಪುಸ್ತಕದಲ್ಲಿ ಬರುವ ಒಂದೊಂದು ಪುಟದಲ್ಲಿಯೂ ಶ್ಲೋಕಕ್ಕನುಗುಣವಾಗಿ ಚಿತ್ರಗಳನ್ನು ಬಿಡಿಸಲಾಗಿದೆ. ನಂಜುಂಡ ಕವಿಯು ಬಸವಣ್ಣನವರ ಜೀವನ ಗಾಥೆಯ ಬಗ್ಗೆ ಬರೆದಿರುವ 'ವೃಷಭೇಂದ್ರ ವಿಳಾಸ' ಎಂಬ ಯಕ್ಷಗಾನ ಕೃತಿಯಲ್ಲಿಯೂ ಅಸಂಖ್ಯಾತ ಚಿತ್ರಗಳಿವೆ. ಅಲ್ಲದೇ ಈ ಕಾಲದ ದೊರೆಯೊಬ್ಬರು ಬರೆದಿದ್ದಾರೆ ಎನ್ನಲಾದ 'ಚದುರಂಗ ಚಕ್ರ' ಎಂಬ ಆಟದ ಕ್ರೀಡಾಕೃತಿಯಲ್ಲಿಯೂ ಕೂಡಾ ಆಟದ ಬಗೆಗಿನ ವಿವಿಧ ಬಣ್ಣಗಳಿಂದ ಕೂಡಿದ ಚಿತ್ರವನ್ನು ನೋಡಬಹುದಾಗಿದೆ.

ಮೇಲೆ ವಿವರಿಸಿದ ಅಂಶಗಳು ಯಾರ ಕಾಲಕ್ಕೆ ಸಂಬಂಧಿಸಿದ್ದು?

ಎ. ಚಾಲುಕ್ಯರು ಬಿ. ಮೈಸೂರಿನ ಒಡೆಯರು

ಸಿ. ವಿಜಯನಗರದ ಅರಸರು ಡಿ. ಕೆಳದಿಯ ರಾಜರು

ಉತ್ತರ: ಬಿ (ವಿವರಣೆ:'ಶ್ರೀ ತತ್ವನಿಧಿ' ಮತ್ತು 'ಚದುರಂಗ ಚಕ್ರ' ಎಂಬ ಪುಸ್ತಕವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಬರೆದಿದ್ದಾರೆ)

12. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಜೇಮ್ಸ್ ಫರ್ಗುಸನ್ ರಚಿಸಿದ ಕೃತಿಯ ಹೆಸರು `ಹಿಸ್ಟರಿ ಆಫ್ ಇಂಡಿಯನ್ ಆರ್ಕಿಟೆಕ್ಚರ್'. ಈ ಕೃತಿಯಲ್ಲಿ ಕರ್ನಾಟಕದ ವಾಸ್ತುಶಿಲ್ಪದ ವೈಭವವನ್ನು ನೋಡಬಹುದು.
2. 1874ರಲ್ಲಿ ಮುಂಬೈ ಸರ್ಕಾರವು ಪ್ರಾಚ್ಯ ಸಂಶೋಧನಾ ಇಲಾಖೆಯನ್ನು ಆರಂಭಿಸಿತು. ಅದು ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದ ಸ್ಥಳಗಳ 56 ಚಿತ್ರಗಳುಳ್ಳ ವರದಿಯನ್ನು ಪ್ರಕಟಿಸಿತು.
3. 1896ರಲ್ಲಿ ಬಳ್ಳಾರಿ ಜಿಲ್ಲೆಯ ಚಾಲುಕ್ಯರ ಗುಡಿಗಳ ಬಗ್ಗೆ 115 ಪುಟಗಳ ವರದಿ ಪ್ರಕಟವಾಯಿತು.
4. ಚಿತ್ರಕಲೆಗೆ ಸಂಬಂಧಿಸಿದಂತೆ ಮೊದಲು ಸಂಶೋಧಿಸಿದವರು ಲಿಯೊನಾರ್ಥಮನ್ ಎಂಬುವವರು. ಇವರು ತೆಗೆದ ರಾಯಚೂರು ಜಿಲ್ಲೆಯ ಬೆನಕಲ್‌ಗುಡ್ಡೆಯಲ್ಲಿರುವ ಚಿತ್ರಗಳ ಫೋಟೊ ಲಂಡನ್ ಮ್ಯೂಜಿಯಂನಲ್ಲಿ ಸಂಗ್ರಹಿತವಾಗಿದೆ. ಈ ಚಿತ್ರವು ಇತಿಹಾಸ ಪೂರ್ವದ ಚಿತ್ರಗಳಾಗಿದ್ದವು

ಎ. ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1 ರಿಂದ 4ರ ತನಕ ಎಲ್ಲವೂ ಸರಿಯಾಗಿದೆ

ಸಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಡಿ. ಮೇಲಿನ ಎಲ್ಲಾ ಹೇಳಿಕೆಗಳು ತಪ್ಪಾಗಿವೆ

ಉತ್ತರ: ಬಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಯಾವುದು ನಿಮಗೆ ತೊಂದರೆ ಕೊಡುತ್ತದೋ ಯಾವುದು ನಿಮ್ಮಲ್ಲಿ ಕಿರಿಕಿರಿ ಉಂಟುಮಾಡುತ್ತದೋ ಅದು ನಿಮ್ಮ ಶಿಕ್ಷಕ ಆಗಿರುತ್ತದೆ. –ಅಜನ್ ಚಾ

ಕೋವ್ಯಾಕ್ಸಿನ್‌ಗೆ ಡಬ್ಲ್ಯುಎಚ್‌ಒ ಮಾನ್ಯತೆ ಉತ್ಪಾದನೆ ಹೆಚ್ಚಳದತ್ತ ಹರಿಯಲಿ ಗಮನ

ಭಾರತದಲ್ಲಿಯೇ ಸಿದ್ಧವಾದ ಮೊದಲ ಕೋವಿಡ್ ಲಸಿಕೆ ಎಂಬ ಹೆಗ್ಗಳಿಕೆ ಹೊತ್ತಿರುವ, ಹೈದರಾಬಾದ್‌ನ ಭಾರತ್ ಬಯೋಟೆಕ್ ಕಂಪನಿಯ ಕೋವ್ಯಾಕ್ಸಿನ್‌ಗೆ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ತುರ್ತು ಬಳಕೆಗೆ ಅನುಮತಿ ನೀಡಿದೆ. ಇದು ಹಲವು ಆಯಾಮಗಳಿಂದ ಮಹತ್ವದ್ದು, ಭಾರತದ ವೈದ್ಯಕೀಯ ವಿಜ್ಞಾನಿಗಳ ಸಮುದಾಯ ಸಂಭ್ರಮಿಸುವಂತಹುದು. ದೇಶದಲ್ಲಿ ಈಗ ನಡೆದಿರುವ ಕೋವಿಡ್ ಲಸಿಕೆ ನೀಡುವ ಅಭಿಯಾನಕ್ಕೆ ಈ ಮಾನ್ಯತೆಯು ಉತ್ತೇಜನ ನೀಡುವಂತೆ ಇದೆ. ಅಲ್ಲದೆ, ದೇಶದ ವಿಜ್ಞಾನಿಗಳ ಸಮೂಹದ ಪಾಲಿಗೆ ಇದು ಹೆಮ್ಮೆಯ ಸಂದರ್ಭವೂ ಹೌದು. ಈ ಲಸಿಕೆಗೆ ಮಾನ್ಯತೆ ನೀಡಬೇಕು ಎಂಬ ಕೋರಿಕೆಯು ವಿಶ್ವ ಆರೋಗ್ಯ ಸಂಸ್ಥೆಯ ಮುಂದೆ ಹಲವು ತಿಂಗಳುಗಳಿಂದ ಬಾಕಿ ಉಳಿದಿತ್ತು. ಹಾಗಾಗಿ, ಈಗಿನ ಬೆಳವಣಿಗೆಯು ಹಲವು ಅನಿಶ್ಚಿತತೆಗಳನ್ನು ಅಂತ್ಯಗೊಳಿಸಿದೆ. ಆರೋಗ್ಯ ಸಂಸ್ಥೆಯು ಭಾರತದ ಕಡೆಯಿಂದ ಈ ಲಸಿಕೆಗೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ವಿವರಗಳನ್ನು ಕೇಳುತ್ತಿತ್ತು. ಆದರೆ, ಈಗ ಈ ಲಸಿಕೆಯ ಮಾನ್ಯತೆಯ ವಿಚಾರವಾಗಿ ಇದ್ದ ಆತಂಕಗಳು ನಿವಾರಣೆ ಆಗಿವೆ. ದೇಶವು ಇದುವರೆಗೆ 35 ಕೋಟಿಗೂ ಹೆಚ್ಚು ಜನರಿಗೆ ಎರಡೂ ಡೋಸ್ ಲಸಿಕೆ ನೀಡಿದೆ. 74 ಕೋಟಿಗಿಂತ ಹೆಚ್ಚಿನ ಜನರಿಗೆ ಒಂದು ಡೋಸ್ ಲಸಿಕೆ ನೀಡಿ ಆಗಿದೆ. ಆಸ್ಟ್ರಾಜೆನೆಕಾ ಕಂಪನಿ ಅಭಿವೃದ್ಧಿಪಡಿಸಿರುವ, ಭಾರತದಲ್ಲಿ ಕೋವಿಶೀಲ್ಡ್ ಎಂಬ ಹೆಸರು ಹೊತ್ತಿರುವ ಲಸಿಕೆಯು ದೇಶದ ಲಸಿಕಾ ಅಭಿಯಾನದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿ ಇದೆ. ಹತ್ತು ಕೋಟಿಗಿಂತ ತುಸು ಹೆಚ್ಚಿನ ಕೋವ್ಯಾಕ್ಸಿನ್ ಡೋಸ್‌ಗಳನ್ನು ಮಾತ್ರ ನೀಡಲಾಗಿದೆ. ಆದರೆ, ಈಗ ವಿಶ್ವ ಆರೋಗ್ಯ ಸಂಸ್ಥೆಯ ಮಾನ್ಯತೆ ದೊರೆತಿರುವ ಕಾರಣದಿಂದಾಗಿ, ಇನ್ನು ಮುಂದೆ ಕೋವ್ಯಾಕ್ಸಿನ್ ಲಸಿಕೆಯ ಬಳಕೆ ಪ್ರಮಾಣವನ್ನು ಇನ್ನಷ್ಟು ಜಾಸ್ತಿ ಮಾಡಲು ಯಾವ ಅಡಚಣೆಯೂ ಇರುವುದಿಲ್ಲ.

ಕೋವ್ಯಾಕ್ಸಿನ್‌ಗೆ ಈಗ ವಿಶ್ವ ಆರೋಗ್ಯ ಸಂಸ್ಥೆಯಿಂದ ದೊರೆತಿರುವ ಮಾನ್ಯತೆಯು ಕೋವಿಡ್ ವಿರುದ್ಧ ವಿಶ್ವವ್ಯಾಪಿಯಾಗಿ ನಡೆದಿರುವ ಹೋರಾಟಕ್ಕೆ ಕೂಡ ಬಲ ತುಂಬಿದೆ

ಭಾರತದಲ್ಲಿ ಕೋವ್ಯಾಕ್ಸಿನ್ ಲಸಿಕೆ ಪಡೆದವರು ವಿದೇಶಗಳಿಗೆ ಪ್ರಯಾಣ ಮಾಡುವಾಗ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತು. ಈ ಸಮಸ್ಯೆಗಳಿಗೆ ಕೂಡ ಇನ್ನು ಮುಂದೆ ಪರಿಹಾರ ಸಿಗುವ ನಿರೀಕ್ಷೆ ಇದೆ. ಹಲವು ದೇಶಗಳು ಕೋವ್ಯಾಕ್ಸಿನ್‌ಗೆ ಮಾನ್ಯತೆ ನೀಡಿರದಿದ್ದ ಪರಿಣಾಮವಾಗಿ, ಕೋವ್ಯಾಕ್ಸಿನ್ ಎರಡೂ ಡೋಸ್ ಪಡೆದಿದ್ದರೂ ಆ ದೇಶಗಳಿಗೆ ಹೋಗುವ ಭಾರತೀಯರು ಪ್ರತ್ಯೇಕವಾಸಕ್ಕೆ ಒಳಪಡಬೇಕಾಗುತ್ತಿತ್ತು. ಕೋವ್ಯಾಕ್ಸಿನ್‌ಗೆ ಈಗ ದೊರೆತಿರುವ ಮಾನ್ಯತೆಯು, ಕೋವಿಡ್ ವಿರುದ್ಧ ವಿಶ್ವವ್ಯಾಪಿಯಾಗಿ ನಡೆದಿರುವ ಹೋರಾಟಕ್ಕೆ ಕೂಡ ಬಲ ತುಂಬಿದೆ. ಜಗತ್ತಿಗೆ ಕೋವಿಡ್ ವಿರುದ್ಧದ ಸಮರದಲ್ಲಿ ಬಳಕೆಗೆ ಇನ್ನೊಂದು ಲಸಿಕೆ ದೊರೆತಂತೆ ಆಗಿದೆ. ಲಸಿಕೆಗಳು ಅಗತ್ಯ ಪ್ರಮಾಣದಲ್ಲಿ ಲಭ್ಯವಿಲ್ಲದ ಕಾರಣದಿಂದಾಗಿ, ಲಸಿಕೆಗಳ ಬೆಲೆ ದುಬಾರಿ ಆಗಿರುವುದರ ಕಾರಣದಿಂದಾಗಿ ವಿಶ್ವದ ಹಲವು ದೇಶಗಳಲ್ಲಿ ಲಸಿಕೆ ಪಡೆದುಕೊಂಡವರ ಪ್ರಮಾಣವು ಇನ್ನೂ ಕಡಿಮೆ ಇದೆ. ಲಸಿಕೆ ನೀಡುವ ಅಭಿಯಾನಕ್ಕೆ ವೇಗ ಸಿಗದೇ ಇದ್ದರೆ, ಕೊರೊನಾ ವೈರಾಣು ಮತ್ತೆ ಮತ್ತೆ ರೂಪಾಂತರಗಳನ್ನು ಹೊಂದಬಹುದು, ಕೋವಿಡ್ ಸಾಂಕ್ರಾಮಿಕವನ್ನು ತೊಡೆದುಹಾಕುವುದು ಮನುಕುಲಕ್ಕೆ ಇನ್ನಷ್ಟು ಸವಾಲಿನ ಕೆಲಸವಾಗಿ ಪರಿಣಮಿಸಬಹುದು. ಈಗ ಭಾರತವು ತಾನೇ ಅಭಿವೃದ್ಧಿಪಡಿಸಿರುವ ಕೋವ್ಯಾಕ್ಸಿನ್ ಲಸಿಕೆಯನ್ನು ಬಳಸಿಕೊಂಡು, ಜಾಗತಿಕ ಮಟ್ಟದಲ್ಲಿ ನಡೆದಿರುವ ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬಹುದು. ಭಾರತದಲ್ಲಿ ತಯಾರಾಗುವ ಹಲವು ಔಷಧ, ಲಸಿಕೆಗಳ ಮಾದರಿಯಲ್ಲಿ, ಕೋವ್ಯಾಕ್ಸಿನ್ ಕೂಡ ಮುಂದೊಂದು ದಿನ ಕಡಿಮೆ ಬೆಲೆಗೆ ಲಭ್ಯವಾಗಬಹುದು.

ಈಗ ಈ ಲಸಿಕೆಯ ಬೆಲೆಯು ದೇಶದ ಮಾರುಕಟ್ಟೆಯಲ್ಲಿ ಕೋವಿಶೀಲ್ಡ್‌ಗಿಂತ ತುಸು ಹೆಚ್ಚೇ ಇದೆ. ಈ ಲಸಿಕೆಯು ಕೈಗೆಟಕುವ ದರದಲ್ಲಿ ಲಭ್ಯವಾಗಬೇಕು ಎಂದಾದರೆ, ಅದರ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಬೇಕು. ಇದೊಂದೇ ಕಾರಣಕ್ಕೆ ಅಲ್ಲದೆ, ದೇಶಿ ಹಾಗೂ ಅಂತರರಾಷ್ಟ್ರೀಯ ಬೇಡಿಕೆಗೆ ತಕ್ಕಂತೆ ಲಸಿಕೆಯನ್ನು ಪೂರೈಸಲು ಕೋವ್ಯಾಕ್ಸಿನ್ ಉತ್ಪಾದನೆಯನ್ನು ಜಾಸ್ತಿ ಮಾಡಬೇಕು. ಸರ್ಕಾರದ ಬೆಂಬಲವು ಕೋವ್ಯಾಕ್ಸಿನ್‌ಗೆ ಇದ್ದರೂ, ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಉತ್ಪಾದಿಸುತ್ತಿರುವ ಕೋವಿಶೀಲ್ಡ್‌ನಷ್ಟು ಕೋವ್ಯಾಕ್ಸಿನ್ ಉತ್ಪಾದನೆ ಇಲ್ಲ. ಕೋವ್ಯಾಕ್ಸಿನ್ ತಯಾರಿಕೆಯಲ್ಲಿ ಬಳಕೆಯಾಗಿರುವ ನಿರ್ದಿಷ್ಟ ತಂತ್ರಜ್ಞಾನದ ಕಾರಣದಿಂದಾಗಿ, ಅದರ ಉತ್ಪಾದನೆಯು ಕ್ಲಿಷ್ಟಕರ ಎಂಬ ಮಾತು ಇದೆ. ಉತ್ಪಾದನೆಯ ಹೆಚ್ಚಳದ ಬಗೆ ಹೇಗೆ ಎಂಬ ಬಗ್ಗೆ ವಿಜ್ಞಾನಿಗಳ ಸಮುದಾಯ ದಾರಿ ತೋರಬಹುದೇನೋ. ಆದರೆ, ಈ ಲಸಿಕೆಯ ಉತ್ಪಾದನೆಯನ್ನು ಹೆಚ್ಚಿಸಿದಾಗ ಮಾತ್ರ, ಡಬ್ಲ್ಯುಎಚ್‌ಒ ಈಗ ನೀಡಿರುವ ಮಾನ್ಯತೆಯ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯ.

ದಿನದ ಟ್ವೀಟ್

ಭ್ರಷ್ಟ ಪರಿಪಾಟಕ್ಕೆ ತಡೆಯೊಡ್ಡಿ

ನಿವೃತ್ತಿಯ ಬಳಿಕ ಅರ್ಧದಷ್ಟು ಐಎಎಸ್ ಅಧಿಕಾರಿಗಳು ಖಾಸಗಿ ಸಂಸ್ಥೆಗಳಲ್ಲಿ ಸಲಹೆಗಾರರು/ಉದ್ಯೋಗಿಗಳಾಗಿ ನೇಮಕಗೊಳ್ಳುತ್ತಾರೆ ಮತ್ತು ತಾವು ದೀರ್ಘಕಾಲ ಸೇವೆ ಸಲ್ಲಿಸಿದ್ದ ಸಚಿವಾಲಯ/ಇಲಾಖೆಗಳ ನಡುವೆ ಸಂಪರ್ಕಾಧಿಕಾರಿಗಳಂತೆ ಕಾರ್ಯನಿರ್ವಹಿಸುವ ಹೊಣೆಯನ್ನು ಅವರಿಗೆ ವಹಿಸಲಾಗುತ್ತದೆ. ಈ ಭ್ರಷ್ಟ ಪರಿಪಾಟವನ್ನು ತಡೆಯಲು ಸರ್ಕಾರವು ಕಾನೂನು ತರಬೇಕಾಗಿದೆ.

ಸಂಜಯ್ ದೀಕ್ಷಿತ್, ನಿವೃತ್ತ ಐಎಎಸ್ ಅಧಿಕಾರಿ

ಕಿಡಿನುಡಿ

ಬಿಟ್ ಕಾಯಿನ್ ಹಗರಣ ಬೆಳಕಿಗೆ ಬಂದಿರುವುದೇ ಪ್ರಧಾನಿ ನರೇಂದ್ರ ಮೋದಿಯವರ ಅಮೆರಿಕ ಪ್ರವಾಸ ಕೈಗೊಂಡಾಗ. ಇದು ಕೋಟ್ಯಂತರ ರೂಪಾಯಿ ಹಗರಣವಾಗಿದ್ದು, ರಾಜಕಾರಣಿಗಳು ಮತ್ತು ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆ. ಲಂಚದ ಹಣವು ಬಿಟ್ ಕಾಯಿನ್ ಮೂಲಕ ವರ್ಗಾವಣೆಯಾಗಿದೆ.

ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ವಕ್ತಾರ, ಶಾಸಕ

50 ವರ್ಷಗಳ ಹಿಂದೆ

ಗುರುವಾರ, 11-11-1971

● ಕಾವೇರಿ ಯೋಜನೆ ಕಾರ್ಯ ಅತಿ ಶೀಘ್ರದಲ್ಲೇ ಪೂರ್ಣ: ಧರ್ಮವೀರ

ಮೈಸೂರು, ನ. 10- ಮೈಸೂರು ರಾಜ್ಯವು ತನ್ನ ಕಾವೇರಿ ಯೋಜನಾ ಕಾರ್ಯಗಳನ್ನು ನಿಲ್ಲಿಸಬೇಕೆಂದು ತಮಿಳುನಾಡು ಸರ್ಕಾರದ ಮನವಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿರುವುದರಿಂದ, ಆ ಯೋಜನಾ ಕಾರ್ಯಗಳನ್ನು ತ್ವರೆಗೊಳಿಸಿ ಅವನ್ನು ಶೀಘ್ರದಲ್ಲೇ ಪೂರ್ಣ ಮಾಡಲಾಗುವುದು ಎಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಇಲ್ಲಿ ಹೇಳಿದರು.

ಮೈಸೂರು ದಸರಾ ವಸ್ತುಪ್ರದರ್ಶನದ ಮುಕ್ತಾಯ ಸಮಾರಂಭದಲ್ಲಿ ಭಾಷಣ ಮಾಡುತ್ತಿದ್ದ ಶ್ರೀ ಧರ್ಮವೀರ ಅವರು, 'ನಮ್ಮ ನೆರೆಹೊರೆಯವರ ಬಗ್ಗೆ ನಮಗೆ ಯಾವ ದುರುದ್ದೇಶವೂ ಇಲ್ಲ, ನಮ್ಮ ರಾಜ್ಯವೊಂದೇ ಸಂಪದ್ಭರಿತವಾಗಬೇಕೆಂದೂ ಹಾಗೂ ಇನ್ನೊಂದು ರಾಜ್ಯ ನರಳಬೇಕೆಂದೂ ನಮ್ಮ ಇಚ್ಛೆಯಿಲ್ಲ, ನಾವು ನಮ್ಮ ಪಾಲಿನ ನೀರನ್ನು ತೆಗೆದುಕೊಳ್ಳುತ್ತೇವೆ. ಅವರು ಅವರ ಪಾಲಿನ ನೀರನ್ನು ತೆಗೆದುಕೊಳ್ಳಲಿ. ಅವರಿಗೆ ಹಕ್ಕು ಇರುವಷ್ಟು ನಮಗೂ ಹಕ್ಕು ಇದೆ' ಎಂದರು.

'ನಮ್ಮ ದೇಶದ ಯಾವ ಭಾಗವೂ ನೀರಾವರಿ ಸೌಲಭ್ಯವಿಲ್ಲದೆ ತೊಂದರೆ ಅನುಭವಿಸಬೇಕೆಂಬುದು ನಮ್ಮ ಇಚ್ಛೆಯಲ್ಲ' ಎಂದೂ ಅವರು ಸ್ಪಷ್ಟಪಡಿಸಿದರು.

● ತುರ್ತು ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಕಾರ್ಮಿಕರು, ಉದ್ಯಮಿಗಳ ಬೆಂಬಲ

ನವದೆಹಲಿ, ನ. 10- ರಾಷ್ಟ್ರವು ತುರ್ತು ಪರಿಸ್ಥಿತಿ ಸಂಭವಿಸಿದರೆ ಉತ್ಪಾದನೆ, ಸರಬರಾಜು ವ್ಯವಸ್ಥೆ ಮತ್ತು ಬೆಲೆಗಳ ಸ್ಥಿರತೆಯನ್ನು ಕಾಪಾಡಿಕೊಳ್ಳುವುದರಲ್ಲಿ ಸರ್ಕಾರಕ್ಕೆ ತಮ್ಮ ಬೆಂಬಲವಿದೆ ಎಂದು ಕಾರ್ಮಿಕರು ಮತ್ತು ಉದ್ಯಮಿಗಳ ಪ್ರತಿನಿಧಿಗಳು ಇಂದು ವಾಗ್ದಾನ ಮಾಡಿದರು.

ಉದ್ಯಮಗಳನ್ನು ಕುರಿತ ಕೇಂದ್ರ ಸಲಹಾ ಮಂಡಳಿಯ 23ನೇ ವಾರ್ಷಿಕ ಸಭೆಯಲ್ಲಿ ಮಾಡಿದ ತಮ್ಮ ಪ್ರಾರಂಭಿಕ ಭಾಷಣದಲ್ಲಿ ಕೇಂದ್ರ ಕೈಗಾರಿಕೆ ಸಚಿವ ಶ್ರೀ ಮೊಯಿನ್ ಉಲ್‌ಹಕ್ ಚೌಧುರಿ ಅವರು ಮಾಡಿಕೊಂಡ ಮನವಿಗೆ ಉತ್ತರವಾಗಿ ಈ ಭರವಸೆ ಬಂದಿತು.

ರಾಷ್ಟ್ರವು ತುರ್ತು ಪರಿಸ್ಥಿತಿಯಲ್ಲಿ ತಮ್ಮ ಪೂರ್ಣ ಪಾತ್ರವನ್ನು ನಿರ್ವಹಿಸುವುದಾಗಿ ತಮ್ಮ ತಮ್ಮ ಭಾಷಣಗಳಲ್ಲಿ ಭಾರತೀಯ ವಾಣಿಜ್ಯೋದ್ಯಮ ಸಂಘಗಳ ಒಕ್ಕೂಟದ ಅಧ್ಯಕ್ಷ ಶ್ರೀ ಎಸ್.ಎನ್. ಕನೋರಿಯಾ, ಶ್ರೀ ಜೆ.ಆರ್.ಡಿ. ಟಾಟಾ ಮತ್ತು ಕಾರ್ಮಿಕ ನಾಯಕ ಶ್ರೀ ಜಿ. ರಾಮಾನುಜಂ ಅವರು, ಕೈಗಾರಿಕೆ ಕ್ಷೇತ್ರದ ಬಹುತೇಕ ಪ್ರತಿನಿಧಿಗಳು ಆಶ್ವಾಸನೆ ಇತ್ತರು.

● ದಕ್ಷಿಣ ರೈಲ್ವೆಯ ಎಲ್ಲ ರೈಲುಗಳಿಗೂ ಡೀಸೆಲ್ ಎಂಜಿನ್

ಮಂಗಳೂರು, ನ. 10- 'ದಕ್ಷಿಣ ರೈಲ್ವೆಯ ಎಲ್ಲ ರೈಲುಗಳಿಗೂ ಡೀಸೆಲ್ ಎಂಜಿನ್ ಹಾಕುವ ಯೋಜನೆ ಇದೆ. ಇದಕ್ಕೆ ರೈಲ್ವೆ ಮಂಡಳಿ ತತ್ವಶಃ ಒಪ್ಪಿದ್ದು ಮುಂದೆ ಬೇಗ ಎಂಜಿನ್ ಒದಗಿಸಲಾಗುವುದು' ಎಂದು ದಕ್ಷಿಣ ರೈಲ್ವೆ ಜನರಲ್ ಮ್ಯಾನೇಜರ್ ಶ್ರೀ ಕೆ.ಎನ್. ಚನ್ನಬಸಪ್ಪ ಅವರು ತಿಳಿಸಿದರು.

ನಿನ್ನೆ ಇಲ್ಲಿ ಪತ್ರಕರ್ತರೊಡನೆ ಮಾತನಾಡುತ್ತಿದ್ದ ಶ್ರೀ ಚನ್ನಬಸಪ್ಪ ಅವರು, ಮೈಸೂರಿನ ಸಂಪರ್ಕವನ್ನು ಮಂಗಳೂರಿನವರೆಗೆ ವಿಸ್ತರಿಸಲು ನಿರ್ಧರಿಸಿದ್ದು, ಅದನ್ನು ಜಾಗ್ರತೆಯಾಗಿ ಈ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ಇತ್ತರು.

'ನೆಟ್ ಝೀರೊ'ದತ್ತ ಸಾಗುತ್ತಿದ್ದರೆ ಸ್ವಚ್ಛಭಾರತವೂ ತಂತಾನೇ ನಮ್ಮೆದುರು ಮೈದಳೆಯುತ್ತ ಹೋಗುತ್ತದೆ

ಇಂಗಾಲಶಾಹಿಯ ಅಂತ್ಯದ ಆರಂಭ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಇಡೀ ಉತ್ತರ ಭಾರತದ ಉದ್ದಗಲಕ್ಕೆಲ್ಲ ಈಗ ದಟ್ಟ ಹೊಂಜು ಆವರಿಸಿದೆ. ಹಗಲಿನಲ್ಲೇ ಹೆಡ್‌ಲೈಟ್ ಹಾಕಿಕೊಂಡು ವಾಹನ ಓಡಿಸುವ ದಿನಗಳು ಮತ್ತೆ ಬಂದಿವೆ. ಒಂದು ತಿಂಗಳ ಹಿಂದಷ್ಟೇ ಅಲ್ಲಿನ ಅನೇಕ ನಗರಗಳು- ದಿಲ್ಲಿಯಿಂದ ಹಿಡಿದು ಉತ್ತರಾಖಂಡದ ಗುಡ್ಡಬೆಟ್ಟಗಳವರೆಗೂ- ಪ್ರವಾಹದಿಂದ ತತ್ತರಿಸುತ್ತಿದ್ದವು. ಇನ್ನು ಎರಡು ತಿಂಗಳ ನಂತರ ಘೋರ ಚಳಿಯ ಅಲೆ ಅಲ್ಲಿ ಹೊಮ್ಮಲಿದೆ. ಅದಾದ ಮೂರು ತಿಂಗಳ ನಂತರ ಬಿಸಿಗಾಳಿಯ ಪರ್ವ ಆರಂಭವಾಗಲಿದೆ. ಇಂಗಾಲದ ಯುಗ ಅಂದರೆ ಹೀಗೇನೇ.

ಮುಂಬರುವ ವರ್ಷಗಳಲ್ಲಿ ಉತ್ತರ ಭಾರತ ಹೇಗಿರಬಹುದು? ಬಿಸಿಪ್ರಳಯದ ಕುರಿತು ಅಮೆರಿಕದ ಖ್ಯಾತ ವಿಜ್ಞಾನ ಬರಹಗಾರ ಕಿಮ್ ಸ್ಟಾನ್ಲಿ ರಾಬಿನ್ಸನ್ ಕಳೆದ ವರ್ಷ 'ದಿ ಮಿನಿಸ್ಟ್ರಿ ಆಫ್ ದಿ ಫ್ಯೂಚರ್' ಹೆಸರಿನ ವೈಜ್ಞಾನಿಕ ಕಾದಂಬರಿಯನ್ನು ಬರೆದಿದ್ದಾನೆ (ಆತನ ಎಲ್ಲ 21 ಸಾಹಿತ್ಯ ಕೃತಿಗಳಿಗೆ ಪ್ರಶಸ್ತಿಗಳು ಬಂದಿವೆ). ನಮ್ಮ ಉತ್ತರ ಪ್ರದೇಶದ ಒಂದು ಊರಿನ ದೃಶ್ಯದಿಂದಲೇ ಕಾದಂಬರಿ ಆರಂಭವಾಗುತ್ತದೆ: ಅಲ್ಲಿ ಬಿಸಿಗಾಳಿ ತುಂಬ ಪ್ರಖರವಾಗಿದೆ. ವಾತಾವರಣದಲ್ಲಿ ತೇವಾಂಶವೂ ಅತಿಯಾಗಿದ್ದುದರಿಂದ ಬೆವರು ಹರಿದರೂ ದೇಹ ತಂಪಾಗುವುದಿಲ್ಲ. ಸೆಖೆಯಿಂದ ಬಚಾವಾಗಲು ಎಲ್ಲರೂ ಏರ್ ಕಂಡೀಶನರ್‌ಗಳ ಆಸರೆ ಪಡೆದಿರುತ್ತಾರೆ. ಆದರೆ ಏಕಾಏಕಿ ವಿದ್ಯುತ್ ಗ್ರಿಡ್ ವೈಫಲ್ಯದಿಂದಾಗಿ ಎಲ್ಲೆಡೆ ಕರೆಂಟ್ ಹೋಗುತ್ತದೆ. ಸರಿಪಡಿಸಲು ಒಂದೆರಡು ದಿನ ಸಾಲುವುದಿಲ್ಲ; ಭೀಕರ ಉರಿಬೇಗೆಗೆ ಸಿಕ್ಕು ಎರಡು ಕೋಟಿ ಜನರು ಸಾಯುತ್ತಾರೆ.

ಆನಂತರ ಭಾರತದಲ್ಲಿ ಹೊಸ ಯುಗ ಆರಂಭವಾಗುತ್ತದೆ. ಹೇಗೆ ಇಡೀ ಜಗತ್ತಿಗೆ ಭಾರತವೇ ಹೊಸ ಮಾದರಿಯ ಕಲ್ಯಾಣ ರಾಷ್ಟ್ರವಾಗುತ್ತದೆ ಎಂಬುದನ್ನು ರಾಬಿನ್ಸನ್ ತನ್ನ ಕಾದಂಬರಿಯ ಮುಂದಿನ ಐದುನೂರು ಪುಟಗಳಲ್ಲಿ ವಿವರಿಸುತ್ತ ಹೋಗುತ್ತಾನೆ. ಈಗಿರುವ ಬಂಡವಾಳಶಾಹಿ ವ್ಯವಸ್ಥೆಯ ಬದಲು ಸಂಪೂರ್ಣ ವಿಕೇಂದ್ರೀಕೃತ ವ್ಯವಸ್ಥೆ ಬರಲಿದೆ; ಅದು ಈಗಿನ ಕೇರಳ ಮತ್ತು ಸಿಕ್ಕಿಮ್ ರಾಜ್ಯಗಳ ಆಡಳಿತದ ವಿಸ್ತೃತ ರೂಪವಾಗಿರುತ್ತದೆ. ಪ್ರತೀ ಊರಿನ ಜನರು ತಮ್ಮದೇ ಸ್ಥಳೀಯ ಶಕ್ತಿಮೂಲಗಳನ್ನು ಬಳಸಿಕೊಂಡು, ತಾವೇ ತಮ್ಮ ಸುರಕ್ಷಿತ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ. ಈಗ ಚಾಲ್ತಿಯಲ್ಲಿರುವ ಧನದಾಹಿ ವ್ಯವಸ್ಥೆಗೆ ವಿದಾಯ ಹೇಳಿ ಹೊಸ ಸಮಾಜವನ್ನು ಕಟ್ಟುತ್ತಾರೆ.

ಗ್ಲಾಸ್ಗೊ ನಗರದಲ್ಲಿ ಕಳೆದ ಹತ್ತು ದಿನಗಳಿಂದ ನಡೆಯುತ್ತಿರುವ ಜಾಗತಿಕ ತಾಪಮಾನ (ನಿಯಂತ್ರಣ) ಸಮಾವೇಶದ ಆರಂಭದಲ್ಲೇ ಪ್ರಧಾನಿ ನರೇಂದ್ರ ಮೋದಿಯವರು ಅಂಥದ್ದೇ ಕನಸಿನ ದೇಶವೊಂದನ್ನು ಕಟ್ಟಿ ನಿಲ್ಲಿಸಿದ್ದಾರೆ. ಅವರ ಉದ್ದೇಶಿತ ಯೋಜನೆಗಳೆಲ್ಲ ಕಾರ್ಯರೂಪಕ್ಕೆ ಬಂದಿದ್ದೇ ಹೌದಾದರೆ ಈಗ ಶತಕೋಟ್ಯಧೀಶರ ಮುಷ್ಟಿಯಲ್ಲಿರುವ ಎಲ್ಲ ಪೆಟ್ರೋಲ್ ಮತ್ತು ಕಲ್ಲಿದ್ದಲ ನಿಕ್ಷೇಪಗಳನ್ನು ಮುಚ್ಚಬೇಕಾಗುತ್ತದೆ. ಅದರ ಬದಲಿಗೆ ಗಾಳಿ, ಬಿಸಿಲು, ಜೀವದ್ರವ್ಯ ಮತ್ತು ಜಲಜನಕ ಇವೇ ಪ್ರಮುಖ ಶಕ್ತಿಮೂಲಗಳಾಗಲಿವೆ. ಇವೆಲ್ಲವೂ ನಮ್ಮಂಥ ಜನಸಾಮಾನ್ಯರಿಗೂ ಎಟುಕಬಲ್ಲ ಶಕ್ತಿಮೂಲಗಳೇ ತಾನೆ? ನಮ್ಮ ನಮ್ಮ ಹಿತ್ತಲಿನ ಅಂಥ ಶಕ್ತಿಮೂಲಗಳಿಂದಲೇ ವಿದ್ಯುತ್ ಉತ್ಪಾದನೆ ಸಾಧ್ಯವಾದರೆ, ಪೆಟ್ರೋಲ್ ಕಂಪನಿಗಳ ಹಾಗೂ ಕಲ್ಲಿದ್ದಲಿಕರತ್ತ ಹರಿದು ಹೋಗುತ್ತಿರುವ ಸಂಪತ್ತೆಲ್ಲ ಜನಸಾಮಾನ್ಯರ ಕೈಗೆ ಬಂದೀತೆ?

ತಾತ್ವಿಕವಾಗಿ ಹಾಗೇ ಆಗಬೇಕು. ಗ್ಲಾಸ್ಗೊ ವೇದಿಕೆಯಲ್ಲಿ ಮಾತನಾಡಿದ ಅನೇಕ ಮುತ್ಸದ್ದಿಗಳು ಅದನ್ನೇ ಒತ್ತಿ ಹೇಳುತ್ತಿದ್ದಾರೆ. ಬಂಡವಾಳಶಾಹಿ (ನಾವದನ್ನು 'ಇಂಗಾಲಶಾಹಿ' ಎನ್ನೋಣ) ಶಕ್ತಿಗಳಿಂದ ಈ ಭೂಮಿಗೆ ಬಿಡುಗಡೆ ಸಿಕ್ಕರೆ ಅದರ ಜ್ವರವೂ ತಾನಾಗಿ ಬಿಟ್ಟು-ಹೋಗುತ್ತದೆ ಎಂದಿದ್ದಾರೆ. ಆದರೆ ಬಿಡುಗಡೆ ಅಷ್ಟು ಸುಲಭವೇನಲ್ಲ. ಉದಾಹರಣೆಗೆ ಸೌರವಿದ್ಯುತ್ ಉತ್ಪಾದನೆಯಲ್ಲಿ ಭಾರತ ಭಾರಿ ಪ್ರಗತಿ ಸಾಧಿಸಿದೆ ಎಂದು ಮೋದಿಯವರು ಈಗಿನ ಸಮಾವೇಶದಲ್ಲಿ ಬಹು ಹೆಮ್ಮೆಯಿಂದ ಹೇಳಿದ್ದಾರೆ. ಅದು ನಿಜವೂ ಹೌದು. ನೂರು ಗಿಗಾವಾಟ್, ಅಂದರೆ ಒಂದು ಲಕ್ಷ ಮೆಗಾವಾಟ್ ವಿದ್ಯುತ್ ಶಕ್ತಿಯನ್ನು ಬದಲೀ ಶಕ್ತಿಮೂಲಗಳಿಂದ ಭಾರತ ಪಡೆಯುತ್ತಿದೆ. ಹಾಗೆಂದು ನಮ್ಮ ಅದೆಷ್ಟು ಪಂಚಾಯಿತಿಗಳು ತಮ್ಮೂರಿಗೆ ಬೇಕಾದ ವಿದ್ಯುತ್ತನ್ನು ಸೂರ್ಯನಿಂದ ಪಡೆಯುತ್ತಿವೆ? ಒಂದೂ ಇಲ್ಲ. ತಮಿಳುನಾಡಿನ ಒಡಂತುರೈ ಗ್ರಾಮ ಪಂಚಾಯಿತಿ ಮಾತ್ರ ಗಾಳಿಶಕ್ತಿಯಿಂದ ಉತ್ಪಾದಿಸಿದ ವಿದ್ಯುತ್ತನ್ನು ಮಾರಿ ಪ್ರತಿವರ್ಷ ಹನ್ನೊಂದು ಲಕ್ಷ ರೂಪಾಯಿಗಳ ಆದಾಯವನ್ನು ಸರ್ಕಾರದಿಂದ ಪಡೆಯುತ್ತಿದೆ. ದೇಶದ ಎಲ್ಲೆಡೆ ಸದ್ಯಕ್ಕಂತೂ ಅದಾನಿ ಕಂಪನಿಯೊಂದೇ ದೇಶದ ಸೌರವಿದ್ಯುತ್ತಿನ ಯಜಮಾನಿಕೆ ಪಡೆದಿದೆ (ಅದು ಕಲ್ಲಿದ್ದಲ ಗಣಿಯನ್ನೂ ಗುತ್ತಿಗೆ ಪಡೆದಿದೆ; ಇಂಡೊನೇಷ್ಯ ಮತ್ತು ಆಸ್ಟ್ರೇಲಿಯಾದಿಂದ ಕಲ್ಲಿದ್ದಲನ್ನು ತರಿಸುತ್ತಿದೆ). ಸೌರಫಲಕಗಳ ಸ್ಥಾಪನೆಯಲ್ಲಿ ಅದು ಜಗತ್ತಿನಲ್ಲೇ ಅತಿ ವೇಗದಲ್ಲಿ ಬೆಳೆಯುತ್ತಿರುವ ಕಂಪನಿ ಎಂದು ದಾಖಲು ಮಾಡಿದೆ. ಮೋದಿಯವರ ಗ್ಲಾಸ್ಗೊ ಭಾಷಣ ಮುಗಿದ ದಿನದಿಂದ, ಸೌರವಿದ್ಯುತ್ತಿಗೆ ಸಂಬಂಧಿಸಿದ 'ಅದಾನಿ ಗ್ರೀನ್' ಕಂಪನಿಯ ಷೇರುಮೌಲ್ಯ ನಿರಂತರ ಹೆಚ್ಚುತ್ತಿದೆ.

ಭಾರತದ ಅಭಿವೃದ್ಧಿ ರಥವನ್ನು ನೆಟ್ ಝೀರೊ ದಿಕ್ಕಿನಲ್ಲಿ ಸಾಗಿಸಲೆಂದು ಹಣ ಹೂಡಿಕೆ ಮತ್ತು ತಂತ್ರಜ್ಞಾನ ಎರಡೂ ಭಾರಿ ಪ್ರಮಾಣದಲ್ಲಿ ಬರುವುದರಲ್ಲಿ ಸಂಶಯವಿಲ್ಲ. 'ಬಂಡವಾಳ ಹೂಡುವುದಾದರೆ ಭಾರತವೇ ನಿಗಿಕೆಂಡವಾಗಿದೆ' ಎಂದು (ಕಬ್ಬಿಣ ಕಾದಿದೆ, ಬಡಿಯಲು ಹೊರಡಿ-ಎಂಬರ್ಥದಲ್ಲಿ) ಅಮೆರಿಕ ಸರ್ಕಾರದ ಕ್ಲೈಮೇಟ್ ವಕ್ತಾರ ಜಾನ್ ಕೆರ್ರಿ ಅಕ್ಟೋಬರ್‌ನಲ್ಲಿ ಹೇಳಿದ್ದು ನಮ್ಮ ಎಲ್ಲ ವಾಣಿಜ್ಯಪತ್ರಿಕೆಗಳಲ್ಲಿ ಹೆಡ್‌ಲೈನ್ ಆಗಿತ್ತು. ಶಕ್ತರಾಷ್ಟ್ರಗಳು ಹಿಂದೆ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ರೂಪದಲ್ಲಿ ಇತರ ದೇಶಗಳತ್ತ ಹೆಚ್ಚಿನ ಧನಧಾರೆ ಹರಿಸುವ ಸಾಧ್ಯತೆಗಳೂ ಕಾಣತೊಡಗಿವೆ. ಪ್ರಶ್ನೆ ಏನೆಂದರೆ, ಅಂಥ ಹರಿವನ್ನು ಜನಸಾಮಾನ್ಯರು ತಮ್ಮತ್ತ ತಿರುಗಿಸಿಕೊಳ್ಳಲು ಸಾಧ್ಯವೆ?

ತಂತ್ರಜ್ಞಾನವನ್ನೂ ಹಾಗೆ ತಿರುಗಿಸಲು ಸಾಧ್ಯವಾದರೆ ನಮ್ಮ ಯುವಜನಾಂಗ ಕಾರ್ಪೊರೇಟ್ ಶಕ್ತಿಗಳ ಮುಷ್ಟಿಯಿಂದ ಬಿಡುಗಡೆ ಪಡೆದು ತಾವಾಗಿ ಹೇರಳ ಉದ್ಯೋಗಾವಕಾಶಗಳನ್ನು ಸೃಷ್ಟಿಸಿಕೊಳ್ಳಬಹುದು. ಸ್ವಚ್ಛ ಭಾರತವೂ ನಮ್ಮದಾಗಬಹುದು. ಬೆಂಗಳೂರು ಮತ್ತು ಇತರ ನಗರಗಳ ತ್ಯಾಜ್ಯಗಳಿಂದ ಹೊಮ್ಮುವ ಮೀಥೇನ್ ಅನಿಲದಿಂದಲೇ ಹೊಸ ಆರ್ಥಿಕತೆಗೆ ಚಾಲನೆ ಕೊಡಬಹುದು. ಈ ಅಂಕಣದಲ್ಲಿ ಹಿಂದೆಷ್ಟೋ ಬಾರಿ ಉದಾಹರಣೆಗಳ ಮೂಲಕ ಹೇಳಿದ ಹಾಗೆ, ಚರಂಡಿ ನೀರನ್ನು, ಅದರಲ್ಲಿರುವ ಶಕ್ತಿಯಿಂದಲೇ ಶುದ್ಧೀಕರಿಸಬಹುದು. ಜೋಳದ ದಂಟು, ಬಾಳೆಯ ದಿಂಡು, ಕಾಫಿಸಿಪ್ಪೆ, ಭತ್ತದ ಹೊಟ್ಟು, ಗೋತ್ಯಾಜ್ಯಗಳಿಂದ ಬದಲೀ ಪ್ಲಾಸ್ಟಿಕ್ ಅಷ್ಟೇಕೆ, ಗ್ರೀನ್ ಹೈಡ್ರೊಜನನ್ನೂ ಉತ್ಪಾದಿಸಬಹುದು. ಗ್ರಾಮೀಣ ಜನರು ಪೆಟ್ರೋಲ್, ಡೀಸೆಲ್‌ಗಾಗಿ, ಪ್ಲಾಸ್ಟಿಕ್ ಸಾಮಗ್ರಿಗಳಿಗಾಗಿ ಪೇಟೆಗೆ ಬರುವ ಬದಲು ಇಲ್ಲಿಯವರೇ ಅತ್ತ ಹೋಗುವಂತೆ ಮಾಡಬಹುದು. ಆದರೆ ಅದಕ್ಕೆ ಕೇವಲ ಇಲೆಕ್ಟ್ರಿಕಲ್/ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸಾಲದು; ಸೋಶಿಯಲ್ ಎಂಜಿನಿಯರಿಂಗ್ ಕೂಡ ಬೇಕಾಗುತ್ತದೆ. ಜನರು ಉತ್ಸಾಹದಿಂದ ಅಂಥ ಹೊಸ ದಿಶೆಯತ್ತ ತಿರುಗುವಂತೆ ಮಾಡುವ ತಂತ್ರಗಾರಿಕೆ ಕೂಡ ಮುಖ್ಯವಾಗುತ್ತದೆ. ಶಾಲೆ, ಕಾಲೇಜುಗಳಲ್ಲಿ, ಧಾರ್ಮಿಕ ಸಂಘಸಂಸ್ಥೆಗಳಲ್ಲಿ, ಸಭಾಭವನ, ಕಲ್ಯಾಣಮಂಟಪಗಳಲ್ಲಿ, ಮನೆಯೊಳಗಿನ ಟಿ.ವಿಯಲ್ಲಿ, ಕೈಯಲ್ಲಿನ ಗಣಕದಲ್ಲಿ ಅದಕ್ಕೆ ಪ್ರೇರಣೆ ಸಿಗುತ್ತಿರಬೇಕಾಗುತ್ತದೆ. ಹಸಿಕಸವನ್ನು ಹೂಳುಗುಂಡಿಗೆ ಸುರಿಯುವವರೆಲ್ಲ ತಮ್ಮ ಮಕ್ಕಳ ಸುಗಮ ಭವಿಷ್ಯವನ್ನೂ ಹಾಗೇ ಸುರಿಯುತ್ತಿದ್ದೇವೆ ಎಂದು ಭಾವಿಸುವಂತಾಗಬೇಕು.

'ಕಳೆದ ಶತಮಾನದಲ್ಲಿ ಜಗತ್ತನ್ನು ವಸಾಹತುಶಾಹಿ ಸಂಕೋಲೆಯಿಂದ ಪಾರು ಮಾಡುವಲ್ಲಿ ಭಾರತವೇ ಮುಂದಾಳಾಗಿತ್ತು. ಈಗ ಇಂಗಾಲಶಾಹಿ ಮುಷ್ಟಿಯಿಂದ ಜಗತ್ತನ್ನು ಬಿಡಿಸಿ ತರಲು ಮತ್ತೆ ಭಾರತದ್ದೇ ನೇತೃತ್ವ ಬೇಕಾಗಿದೆಯೇನೊ' ಎಂದು ಪ್ರತಿಷ್ಠಿತ 'ನ್ಯೂಯಾರ್ಕರ್' ಪತ್ರಿಕೆಯಲ್ಲಿ ರಘು ಕಾರ್ನಾಡ್ (ಗಿರೀಶ ಕಾರ್ನಾಡರ ಮಗ) ಬರೆದಿದ್ದಾರೆ. ಭಾರತವನ್ನು ಆವರಿಸಿದ್ದ ನೆಹರೂ ಬಿಂಬವನ್ನೂ ಅವರ ಪಂಚಶೀಲ ತತ್ವಗಳನ್ನೂ ಇತಿಹಾಸಕ್ಕೆ ರವಾನಿಸಿ ಈಗಿನ ಪ್ರಧಾನಿಯವರು ಪುರಾಣದ 'ಪಂಚಾಮೃತ' ಸೂತ್ರವನ್ನು ಗ್ಲಾಸ್ಗೊ ವೇದಿಕೆಯಲ್ಲಿ ಸಾರಿದ್ದಾರೆ. ಅವರ ಕಲ್ಪನೆಯ ಐದೂ ಅಮೃತಗಳು ಎಲ್ಲರಿಗೂ ಸಮಾನವಾಗಿ ಸಿದ್ಧಿಸಲೆಂದು ಆಶಿಸಬೇಕಾಗಿದೆ.

ಹಿಂದೆ ಸಮುದ್ರಮಥನ ಮಾಡಿದಾಗ ಸಿಕ್ಕ ಅಮೃತ ಕೆಲವರಿಗೆ ಮಾತ್ರ ದಕ್ಕುವಂತೆ ಮಸಲತ್ತು ನಡೆದಿತ್ತಂತಲ್ಲ? ಸಾಲದ್ದಕ್ಕೆ ಅಮೃತ ಸಿಕ್ಕದವರಿಗೆ ರಾಕ್ಷಸ ಪಟ್ಟ ಕಟ್ಟಿದ್ದರಲ್ಲ? ಹಾಗೊಂದಾಗಬಾರದು.

ಚುರುಮುರಿ

ತಿಂಡಿಪೋತೋಂ ಕೀ ಬಾತ್!

● ಎಸ್.ಬಿ.ರಂಗನಾಥ್

ದಾವಣಗೆರೆ ನಗರ ತಿಂಡಿಬಾಕರ ಸಂಘದಲ್ಲಿ ಗಂಭೀರ ಚರ್ಚೆ ನಡೆದಿತ್ತು.

'ಮೊನ್ನೆಯಿಂದ ನಮ್ಮೂರ ಬೆಣ್ಣೆದೋಸೆ ಪ್ಲೇಟಿಗೆ ತೊಂಬತ್ತು ರೂಪಾಯಿ ಆಗಿದೆ. ಹೀಗಾದ್ರೆ ನಮ್ಮ ಗತಿಯೇನು?' ಚಿಕ್ಕೇಶಿ ಪೇಚಾಡಿದ.

'ಸದ್ಯದಲ್ಲೇ ಅದು ಸೆಂಚುರಿ ಬಾರಿಸುತ್ತೆ. ನನ್ನ ಫೇವರಿಟ್ ಚೌಚೌ ಬಾತ್ ಕೂಡಾ ಅದ್ರೊಡನೆ ಕಾಂಪಿಟ್ ಮಾಡ್ತಿದೆಯಲ್ರೋ' ಎಂದ ಪರಮೇಶಿ.

'ಹೀಗೇ ಹೋಟೆಲ್‌ಗಳ ತಿಂಡಿ ದರಗಳು ಗಗನಕ್ಕೇರಿದ್ರೆ ನಮ್ಮ ಸಂಘವನ್ನು ಬರಖಾಸ್ತು ಮಾಡಿ, ತಿಂಡಿಗಾಗಿ ನಾವು ಹೋಟೆಲ್‌ಗಳಲ್ಲಿ ಪಾತ್ರೆ ತೊಳೀಬೇಕಾಗುತ್ತೆ' ಚನ್ನೇಶಿಯ ಸಂಕಟ.

'ಈ ಬಗ್ಗೆ ನಮೋ ಅವರಿಗೆ ಕಂಪ್ಲೇಂಟ್ ಕೊಡೋಣ. ಪೆಟ್ರೋಲ್, ಡೀಸೆಲ್ ಬೆಲೆ ಇಳಿಸಿದಂತೆ ಹೋಟೆಲ್ ತಿಂಡಿ ಬೆಲೇನೂ ಇಳಿಸ್ತಾರೆ'.

'ಹೌದ್ಹೌದು. ಅವ್ರೀಗ ಫುಲ್ ಖುಷೀಲಿದಾರೆ'.

'ಅದ್ಯಾಕೋ?'

'ಸತತವಾಗಿ ಎರಡು ವರ್ಷ ಅವ್ರು ವಿಶ್ವದ ನಂಬರ್ ಒನ್ ಜನನಾಯಕರಾಗಿದಾರೇಂತ ಮೊನ್ನೆ ಸಮೀಕ್ಷೆ ಹೊರಬಂದಿದೆಯಲ್ಲ! ಅಮೆರಿಕದ ಅಧ್ಯಕ್ಷ ಬೈಡನ್‌ರನ್ನೇ ಬ್ರಿಟಿಷ್ ಪ್ರಧಾನಿ ಬೋರಿಸ್‌ರನ್ನೇ ಜನಪ್ರಿಯತೇಲಿ ಹಿಂದಿಕ್ಕಿದಾರಂತೆ! ಅಲ್ದೇ, ಈಚೆಗೆ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣೀನೂ ಅವ್ರಿಗೆ ಉಘೇ ಹೇಳಿ 'ಹ್ಯಾಟ್ಸ್ ಆಫ್' ಎಂದಿದೆ!

'ಹಾಗಿದ್ರೆ ಪತ್ರ ಬರೆಯೋಣ. ಮನ್ ಕೀ ಬಾತ್‌ನಲ್ಲಿ ಮಾತಾಡಿ ನಮ್ಮ ಸಮಸ್ಯೆ ಬಗೆಹರಿಸ್ತಾರೆ... ಇದ್ರಿಂದ ಚುನಾವಣೆಗಳಲ್ಲಿ ಅವ್ರಿಗೇ ಅನುಕೂಲವಲ್ವೇ? ಅದ್ರಿಂದ್ಲೇ ಈ ಬಾತ್‌ಗಳನ್ನು ಚುನಾವಣೆಗಳಲ್ಲಿ ಪ್ರಸಾರ ಮಾಡ್ತಾರಂತೆ!'

'ಸ್ವಲ್ಪ ನಿಧಾನವಾಗಿ ಬರೆಯೋಣ್ರಯ್ಯಾ... ಬಂಗಾಳಿ ಸಿನಿಮಾ ತಾರೆ ಪ್ರಸನ್ನಜಿತ್ ಚಟರ್ಜಿ ಅವರ ಪತ್ರಕ್ಕೆ ಅವ್ರ ಆ್ಯಕ್ಷನ್ ನೋಡಿಕೊಂಡೂ...'

'ಅದೇನಯ್ಯಾ ಚಟರ್ಜಿ ಪತ್ರ?'

'ಊಟ ಸರಬರಾಜು ಮಾಡೋ ಕಂಪನಿ ಸ್ವಿಗ್ಗಿ ಅವ್ರಿಗೆ ಆರ್ಡರ್ ಮಾಡಿದ ಆಹಾರ ತಂದು-ಕೊಟ್ಟಿಲ್ಲವಂತೆ, ಕ್ರಮ ಕೈಗೊಳ್ಳೀಂತ ಕೇಳಿದಾರೆ!'

'ಹಾಗಾದ್ರೆ ನಮ್ಮ ಪ್ಲಾನ್ ಹಂಡ್ರೆಂಡ್ ಪರ್ಸೆಂಟ್ ಸಕ್ಸಸ್!'

ಮೂವರೂ ಹೈಫೈ ಚಪ್ಪಾಳೆ ತಟ್ಟಿದರು!

ಚರ್ಚೆ

ತಾಂತ್ರಿಕ ಶಿಕ್ಷಣ: ಕನ್ನಡದ ಛಾಪು

ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ ನೀಡುವುದರಿಂದ ಸವಲತ್ತು, ಸವಾಲು ಎರಡೂ ಇವೆ

● ಮುಹಮ್ಮದ್ ಯೂನುಸ್ ಸಾರವಾನ್

ರಾಜ್ಯ ಸರ್ಕಾರವು ನಾಲ್ಕು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾಯೋಗಿಕವಾಗಿ ಈ ವರ್ಷದಿಂದಲೇ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ತಯಾರಿ ಆರಂಭಿಸಿರುವುದು ಅತ್ಯಂತ ಸಂಭ್ರಮದಿಂದ ಸ್ವಾಗತಿಸಬೇಕಾದ ವಿಷಯ. ಜ್ಞಾನಕ್ಕೆ ಭಾಷೆಯೊಂದು ಸಮಸ್ಯೆಯೇ ಅಲ್ಲ. ಇದಕ್ಕೆ ನಿದರ್ಶನವೆಂಬಂತೆ, ಜಗತ್ತಿನ ದಿಕ್ಕು ಬದಲಿಸಿದ ವೈಜ್ಞಾನಿಕ ಅನ್ವೇಷಣೆಗಳು, ಸಂಶೋಧನೆಗಳು ಆಯಾ ನೆಲದ ಭಾಷೆಯಲ್ಲಿಯೇ ಪ್ರಕಟಗೊಂಡಿವೆ. ಪ್ರಖ್ಯಾತ ವಿಜ್ಞಾನಿಗಳು ಸಂಶೋಧನಾ ಪ್ರಬಂಧಗಳನ್ನು ತಾಯ್ನುಡಿಯಲ್ಲಿಯೇ ಮಂಡಿಸಿದ್ದಾರೆ, ಮುಂದುವರಿದು ಕೆಲವರು ಅವುಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಆದರೂ ತಮ್ಮ ಸಂಶೋಧನೆಗೆ ಬಳಸಿದ ಭಾಷೆಯ ಹೆಸರು, ಅಂಕೆ, ಚಿಹ್ನೆಗಳನ್ನೇ ಅನುವಾದದಲ್ಲಿಯೂ ಕಾಣಬಹುದು ಮತ್ತು ಅವೇ ಮೂಲ ಹೆಸರಿನಿಂದ ಕರೆಯಲ್ಪಡುತ್ತವೆ. ಇಷ್ಟರಮಟ್ಟಿಗೆ ಸ್ಥಳೀಯ ಭಾಷೆಗಳು ವಿಜ್ಞಾನವನ್ನು ಆವರಿಸಿವೆ.

ದೇಶದ ಪ್ರಖ್ಯಾತ ವಿಜ್ಞಾನಿಗಳಾದ ಆರ್ಯಭಟ, ಭಾಸ್ಕರ ಅವರಂತಹ ಖಗೋಳಶಾಸ್ತ್ರಜ್ಞರು, ಕಣಾದ ಮಹರ್ಷಿಯಂತಹ ಅಣು ವಿಜ್ಞಾನಿಗಳು, ಸುಶ್ರುತರಂತಹ ವೈದ್ಯಕೀಯ ತಜ್ಞರು ತಾವು ಬಲ್ಲ ಸಂಸ್ಕೃತ ಭಾಷೆಯಲ್ಲಿಯೇ ತಮ್ಮ ಜ್ಞಾನ ಭಂಡಾರವನ್ನು ಬಿಚ್ಚಿಟ್ಟಿದ್ದಾರೆ. ಕಾಲಾಂತರದಲ್ಲಿ ಸಂಶೋಧಕರಿಂದ ಅವು ಇಂಗ್ಲಿಷಿಗೆ ತರ್ಜುಮೆಗೊಂಡು ವಿಶ್ವವ್ಯಾಪಿಯಾದವು. ಯಾವುದೇ ಒಂದು ವ್ಯವಸ್ಥೆಯಲ್ಲಿ ಹೊಸತನವನ್ನು ಅಳವಡಿಸಬೇಕಾದರೆ ಅದರ ಲಾಭ-ನಷ್ಟಗಳ ಬಗ್ಗೆ ಮೊದಲು ಚರ್ಚಿಸಬೇಕೆಂದು ತಾಂತ್ರಿಕ ಶಿಕ್ಷಣವೇ ನಮಗೆ ಕಲಿಸಿಕೊಡುತ್ತದೆ. ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಅಳವಡಿಸುವುದನ್ನೂ ನಾವು ಇದೇ ದೃಷ್ಟಿಕೋನದಿಂದ ನೋಡಬೇಕಿದೆ.

ಮೊದಲು ಈ ಕ್ರಮದಿಂದ ಆಗುವ ಉಪಯೋಗಗಳ ಬಗ್ಗೆ ಗಮನಹರಿಸೋಣ: ಕೇವಲ ಇಂಗ್ಲಿಷ್ ಭಾಷೆಯನ್ನೇ ನೆಪಮಾಡಿ ಉನ್ನತ ವಿದ್ಯಾಭ್ಯಾಸವನ್ನು ಕೈಚೆಲ್ಲುತ್ತಿದ್ದ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಇದು ವರವಾಗುತ್ತದೆ. ಕನ್ನಡ ಮಾಧ್ಯಮ ಎಂದಮೇಲೆ ಸಹಜವಾಗಿಯೇ ಸರ್ಕಾರದ ಬೆಂಬಲ ಹೆಚ್ಚಿಗೆ ಸಿಗಬಹುದು. ಇದರಿಂದಾಗಿ ಬೋಧನಾ ಶುಲ್ಕದಲ್ಲಿ ಹೆಚ್ಚಿನ ವಿನಾಯಿತಿ, ಪ್ರತ್ಯೇಕ ವಿದ್ಯಾರ್ಥಿವೇತನದಂತಹ ಸೌಲಭ್ಯಗಳು ಸಿಗಬಹುದು. ಇದರಿಂದ ಬಡವರ್ಗಕ್ಕೂ ತಾಂತ್ರಿಕ ಶಿಕ್ಷಣ ಕೈಗೆಟುಕಬಹುದು. ಕನ್ನಡ ಭಾಷೆಯು ತಾಂತ್ರಿಕ ವಲಯದಲ್ಲೂ ತನ್ನ ಛಾಪು ಮೂಡಿಸುತ್ತದೆ. ತಾಂತ್ರಿಕ ನಿಘಂಟು, ತಾಂತ್ರಿಕ ಪುಸ್ತಕಗಳಲ್ಲಿ ಹೊಸ ಬದಲಾವಣೆಯಾಗಿ ಹೊಸ ಪದಗಳ ಉದಯಕ್ಕೆ ನಾಂದಿಯಾಗುತ್ತದೆ. ಭಾಷೆಯೊಂದೇ ತೊಡಕಾಗಿ ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳ ತಲೆಯಲ್ಲಿಯೇ ಕುಳಿತಿರುವ ಸಂಶೋಧನೆಗಳು, ಅನ್ವೇಷಣೆಗಳು ಕನ್ನಡದ ಮೂಲಕ ವಿಶ್ವವ್ಯಾಪಿಯಾಗಲು ಅನುಕೂಲವಾಗುತ್ತದೆ.

ಇಷ್ಟೆಲ್ಲಾ ಲಾಭಗಳಿದ್ದರೂ ಕನ್ನಡವನ್ನು ತಾಂತ್ರಿಕ ಶಿಕ್ಷಣದಲ್ಲಿ ಅಳವಡಿಸುವಾಗ ಸಹಜವಾಗಿ ಕೆಲವೊಂದಿಷ್ಟು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅವುಗಳೆಂದರೆ: ಎಲ್ಲಾ ತಾಂತ್ರಿಕ ಶಬ್ದಗಳನ್ನು ಸಂಪೂರ್ಣವಾಗಿ ಕನ್ನಡೀಕರಿಸುವುದು ಸಾಧ್ಯವೇ?!, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್, ಸಿವಿಲ್ ಎಂಜಿನಿಯರಿಂಗ್‌ನಂತಹ ಮುಖ್ಯ ವಿಭಾಗಗಳ ಜೊತೆಗೆ ಹಲವಾರು ಉಪವಿಭಾಗಗಳೂ ಇವೆ. ಆಯಾ ವಿಷಯಗಳಲ್ಲಿ ಬಳಸುವ ಎಲ್ಲಾ ತಾಂತ್ರಿಕ ಶಬ್ದಗಳನ್ನು ಕನ್ನಡೀಕರಿಸುವುದು ಕಷ್ಟದ ಕೆಲಸ.

ಎಲ್ಲ ವಿಭಾಗಕ್ಕೂ ಬಳಕೆಯಾಗುವಂತೆ ಒಂದೇ ತಾಂತ್ರಿಕ ನಿಘಂಟನ್ನು ಹುಟ್ಟುಹಾಕುವುದು ಕಷ್ಟ. ಹೊಸ ಆವಿಷ್ಕಾರ, ತಂತ್ರಜ್ಞಾನಕ್ಕೆ ಅನುಗುಣವಾಗಿ ಹೊಸ ಶಬ್ದಸಂಪತ್ತು ಬೇಕಾಗುತ್ತದೆ. ಅದಕ್ಕಾಗಿ ತಾಂತ್ರಿಕ ಕ್ಷೇತ್ರ ಮತ್ತು ಕನ್ನಡ ಭಾಷಾ ಕ್ಷೇತ್ರ ಎರಡರಲ್ಲೂ ಮುತ್ಸದ್ದಿತನ ಹೊಂದಿರುವ ತಜ್ಞರು ಅವಶ್ಯಕ. ಇಂತಹ ಮಾನವ ಸಂಪನ್ಮೂಲ ದೊರೆಯುವುದು ವಿರಳ. ಈಗಿನ ಬೋಧಕರು ಸ್ವತಃ ಇಂಗ್ಲಿಷ್ ಭಾಷೆಯಲ್ಲಿ ತಾಂತ್ರಿಕ ಶಿಕ್ಷಣ ಪೂರೈಸಿದವರು. ಕನ್ನಡದಲ್ಲಿ ಬೋಧಿಸಲು ಅವರಿಗೆ ವಿಶೇಷ ತರಬೇತಿಯ ಅವಶ್ಯಕತೆಯಿದೆ.

ಶಾಸ್ತ್ರೀಯವಾಗಿ ಬಳಸುವ ಕನ್ನಡ ಶಬ್ದಗಳು ಕೆಲವೊಮ್ಮೆ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಪದಗಳಿಗಿಂತಲೂ ಕ್ಲಿಷ್ಟವೆನಿಸಬಹುದು. ತಾಂತ್ರಿಕ ಶಿಕ್ಷಣವನ್ನು ಕನ್ನಡದಲ್ಲಿ ಪಡೆಯುವ ವಿದ್ಯಾರ್ಥಿಗಳಿಗೆ ವಿಷಯ ಜ್ಞಾನವನ್ನು ಪರಿಪೂರ್ಣವಾಗಿ ಕೊಡಬಹುದು. ಆದರೆ ಕನ್ನಡ ಅರಿಯದ ಇತರರಿಗೆ ಅದೇ ವಿಷಯವನ್ನು ವಿವರಿಸಲು ಕಷ್ಟವಾಗಬಹುದು. ಕನ್ನಡ ಮಾಧ್ಯಮ ತಾಂತ್ರಿಕ ಶಿಕ್ಷಣ ವಿದ್ಯಾರ್ಥಿಗಳಿಗೆ ಕರ್ನಾಟಕದಲ್ಲಷ್ಟೇ ಉದ್ಯೋಗ ಪಡೆಯಲು ಸಾಧ್ಯವಾಗಬಹುದು. ಬಹುರಾಷ್ಟ್ರೀಯ ಕಂಪನಿಯಲ್ಲಿ ಬರೀ ಕನ್ನಡವನ್ನೇ ನಂಬಿ ಬದುಕಲು ಸಾಧ್ಯವಿಲ್ಲ. ಇಂಗ್ಲಿಷ್ ಸಂವಹನ ಕೌಶಲವೂ ಅವಶ್ಯ.

ಈ ರೀತಿಯಾಗಿ ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ ಬಳಕೆಯಿಂದ ಸವಲತ್ತು, ಸವಾಲು ಎರಡೂ ಇವೆ. ಅದೇನೇ ಇದ್ದರೂ ಕನ್ನಡದ ಉಳಿವಿಗಾಗಿ, ಬೆಳವಣಿಗೆಗಾಗಿ ಕನ್ನಡ ಮಾಧ್ಯಮದಲ್ಲಿ ತಾಂತ್ರಿಕ ಶಿಕ್ಷಣ ನೀಡುವ ನಿರ್ಣಯ ಶ್ಲಾಘನೀಯವಾದದ್ದೇ. ಆದಾಗ್ಯೂ ಅತ್ಯಂತ ಕೂಲಂಕಷವಾಗಿ ಈ ವಿಚಾರದ ಬಗ್ಗೆ ಪರ- ವಿರೋಧದ ಚರ್ಚೆಯಾಗಬೇಕಿದೆ. ವಾಸ್ತವಿಕ ಕಾರ್ಯಕ್ಷೇತ್ರದಲ್ಲಿ ಯಾವ ರೀತಿ ಈ ನಿರ್ಣಯ ಪ್ರಭಾವ ಬೀರಬಹುದೆಂಬುದನ್ನು ಪ್ರಾಯೋಗಿಕ ದೃಷ್ಟಿಯಿಂದ ಯೋಚಿಸಬೇಕಿದೆ.

ಲೇಖಕ: ಉಪನ್ಯಾಸಕ, ಅಂಜುಮನ್ ಪಾಲಿಟೆಕ್ನಿಕ್ ಕಾಲೇಜು, ಹುಬ್ಬಳ್ಳಿ

ವಾಚಕರ ವಾಣಿ

ರಾಜ್ಯೋತ್ಸವ ಪ್ರಶಸ್ತಿ: ಕರಾವಳಿ ಜಿಲ್ಲೆ ಸಾಧಕರ ಕಡೆಗಣನೆ

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ರಾಜ್ಯ ಸರ್ಕಾರ ಪ್ರತಿವರ್ಷ ರಾಜ್ಯೋತ್ಸವ ಪ್ರಶಸ್ತಿ ಕೊಡಮಾಡುತ್ತಿದೆ. ಆದರೆ, ಈ ಬಾರಿ ಕರಾವಳಿ ಭಾಗದ ಜಿಲ್ಲೆಗಳ ಯಕ್ಷಗಾನ ಸಾಧಕರನ್ನು ಕಡೆಗಣಿಸಲಾಗಿದೆ. ಇದು ಸರಿಯಲ್ಲ. ಯಕ್ಷಗಾನ ಕಲೆಯನ್ನು ಹುಟ್ಟುಹಾಕಿದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡದಲ್ಲಿ ಯಕ್ಷಗಾನ ವಿದ್ವಾಂಸರು, ಪ್ರಸಂಗ ಕರ್ತೃಗಳು ಹಲವಾರು ಮಂದಿ ಇದ್ದಾರೆ. ಇಷ್ಟೆಲ್ಲ ಸಾಧಕರಿದ್ದರೂ ಯಾರ ಸಾಧನೆಯನ್ನೂ ಪರಿಗಣನೆಗೆ ತೆಗೆದುಕೊಳ್ಳದಿರುವುದು ನೋವಿನ ಸಂಗತಿ.

ಕರಾವಳಿ ಜಿಲ್ಲೆಗಳ ಶಾಸಕರು, ಸಚಿವರು ಯಕ್ಷಕಲಾ ಆರಾಧಕರು, ಅಭಿಮಾನಿಗಳು. ಮುಂದಿನ ವರ್ಷವಾದರೂ ಯಕ್ಷಸಾಧಕರನ್ನು ಗುರುತಿಸುವ ಜವಾಬ್ದಾರಿ ಇಲ್ಲಿನ ಜನಪ್ರತಿನಿಧಿಗಳ ಮೇಲಿದೆ.

ಸಾಲಿಗ್ರಾಮ ಗಣೇಶ್ ಶೆಣೈ, ದಾವಣಗೆರೆ

ಸಿಹಿಗಿಂತ ಹೆಚ್ಚಾಯ್ತು ಕಹಿಯ ಅನುಭವ

ಹೆಚ್ಚಿನ ಹೋಟೆಲ್‌ಗಳಲ್ಲಿ ಕಾಫಿ, ಟೀ ಹಾಗೂ ವಿವಿಧ ತಿಂಡಿಗಳ ಬೆಲೆ ಕ್ರಮವಾಗಿ ₹ 2, ₹ 5ರಷ್ಟು ಏರಿಕೆಯಾಗಿದೆ. ಇದು ಹೋಟೆಲ್‌ನವರಿಗೆ ಅನಿವಾರ್ಯ ಕ್ರಮ ಆಗಿರಬಹುದು. ಅವರು ತಾನೇ ಏನು ಮಾಡಿಯಾರು? ಗ್ಯಾಸ್, ಪೆಟ್ರೋಲ್, ಡೀಸೆಲ್ ಇನ್ನಿತರ ವಸ್ತುಗಳ ದರ ಏರಿಕೆಯಾಗುತ್ತಲೇ ಇದೆ. ಆದರೆ, ಗ್ರಾಹಕರ ಬವಣೆಯೂ ಅದೇ ರೀತಿ ಇದೆ. ಕೋವಿಡ್ ಕಾರಣದಿಂದ ಅನೇಕರಿಗೆ ಸಂಬಳ ಕಡಿತ ಆಗಿದೆ. ಕೆಲವರು ಕೆಲಸವನ್ನೇ ಕಳೆದುಕೊಂಡಿದ್ದಾರೆ. ಕೆಲವು ಸಂಸ್ಥೆಗಳು, ಕಂಪನಿಗಳು ಆರ್ಥಿಕ ಮುಗ್ಗಟ್ಟು ಎದುರಿಸುತ್ತಿವೆ. ಅದರ ಪರಿಣಾಮವೇ ಸಂಬಳ ಕಡಿತ. ಸಣ್ಣ ಕೈಗಾರಿಕೆಗಳು ಕೆಲವು ಬಾಗಿಲು ಮುಚ್ಚಿವೆ. ಒಬ್ಬೊಬ್ಬರದೂ ಒಂದೊಂದು ರೀತಿಯ ಬವಣೆ. ಬೆಲೆ ಏರಿಕೆಯ ಬಿಸಿ ಎಲ್ಲರನ್ನೂ ತಟ್ಟಿದೆ.

ಈಗ ಹೋಟೆಲ್ ಕಾಫಿ- ತಿಂಡಿ ಕೂಡ ದುಬಾರಿಯಾಗಿರುವುದು ಮತ್ತೊಂದು ಬಗೆಯಲ್ಲಿ ಬರೆ. ಅಪರೂಪಕ್ಕೆ ತಿನ್ನುವಾಗ ಸಿಹಿಗಿಂತ ಕಹಿಯ ಅನುಭವವೇ ಆಗುತ್ತದೆ. ಬದುಕಬೇಕಾದ ಅನಿವಾರ್ಯದಿಂದ ಸಕಲವನ್ನೂ ಸಹಿಸಿಕೊಳ್ಳುವ ತಾಳ್ಮೆ ನಮ್ಮ ಜನರಿಗೆ ಬಂದಿದೆ.

ಮಲ್ಲತ್ತಹಳ್ಳಿ ಡಾ. ಎಚ್.ತುಕಾರಾಂ, ಬೆಂಗಳೂರು

ಆಚರಣೆ ಇರಲಿ, ರಜೆ ಬೇಡ

ಒನಕೆ ಓಬವ್ವ ಜಯಂತಿಗೆ ಸರ್ಕಾರ ಆದೇಶಿಸಿರುವುದು (ಪ್ರ.ವಾ., ನ. 10) ಸ್ವಾಗತಾರ್ಹ. ಚಿತ್ರದುರ್ಗದ ಇತಿಹಾಸದಲ್ಲಿ ಈ ಮಹಾತಾಯಿಯ ಹೆಸರು ಅಜರಾಮರ. ಕನ್ನಡ ನಾಡಿನ ನೂರಾರು ವೀರಾಗ್ರಣಿಯರಲ್ಲಿ ನಮ್ಮ ಓಬವ್ವ ಕೂಡಾ ಸೇರಿದ್ದಾರೆ. ಆದರೆ ಯಾವುದೇ ಜಯಂತಿಗೆ ರಜೆ ನೀಡದೇ ಆಯಾ ಸಾಧಕರ ಮಹತ್ವದ ಬಗ್ಗೆ ಶಾಲಾ ಮಕ್ಕಳಾದಿಯಾಗಿ ಸಾರ್ವಜನಿಕರೂ ಅರ್ಥೈಸಿಕೊಂಡಾಗ ಆ ಜಯಂತಿ ಸಾರ್ಥಕ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಮರಳು ನೀತಿ: ದುರುಪಯೋಗ ಆಗದಿರಲಿ

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಹೊಸ ಮರಳು ನೀತಿಗೆ ಒಪ್ಪಿಗೆ ನೀಡಿರುವುದು ಸ್ವಾಗತಾರ್ಹ. ಕೆಲವು ಕಡೆ ಮರಳು ಕ್ವಾರಿಗಳಿಗೆ ಸರ್ಕಾರ ಅನುಮತಿ ನೀಡಿದ್ದರಿಂದ, ಮರಳು ಬೇಕಾಬಿಟ್ಟಿ ಹೊರಗಡೆ ಸಾಗಣೆಯಾಗುತ್ತಿತ್ತು. ದಂಧೆಯ ಸ್ವರೂಪ ಪಡೆದುಕೊಂಡಿತ್ತು. ಸರ್ಕಾರದಿಂದ ವಸತಿ ಯೋಜನೆಯಡಿ ಮನೆ ಪಡೆದುಕೊಂಡ ಬಡವರಿಗೆ ದುಬಾರಿ ಹಣ ಕೊಟ್ಟು ಸ್ಥಳೀಯವಾಗಿ ಮರಳು ಪಡೆಯುವುದು ಕಷ್ಟಸಾಧ್ಯವಾಗಿತ್ತು. ಬಡವರ ಕಷ್ಟ ಹೇಳತೀರದಾಗಿತ್ತು. ಸರ್ಕಾರಕ್ಕೆ ಬರುವ ರಾಯಧನದಲ್ಲಿ ಅರ್ಧ ಭಾಗವನ್ನು ಗ್ರಾಮ ಪಂಚಾಯಿತಿಗೆ ನೀಡುವುದು, ಬಡವರಿಗೆ ರಿಯಾಯಿತಿ ದರದಲ್ಲಿ ಮರಳು ನೀಡುವ ಅಧಿಕಾರವನ್ನು ಗ್ರಾಮ ಪಂಚಾಯಿತಿಗೇ ನೀಡಿರುವುದು, ದ್ವಿಚಕ್ರ ವಾಹನ, ಎತ್ತಿನ ಗಾಡಿ ಮುಂತಾದವುಗಳ ಮೇಲೆ ಮರಳು ಕೊಂಡೊಯ್ಯುವ ರೈತರು ಮತ್ತು ಬಡವರಿಗೆ ರಾಯಧನದಿಂದ ರಿಯಾಯಿತಿ ನೀಡುವಂಥ ನಿರ್ಧಾರಗಳು ನಿಜಕ್ಕೂ ಉತ್ತಮವಾದವು.

ನಮ್ಮಲ್ಲಿ ಸರ್ಕಾರ ತರುವ ಕಾನೂನುಗಳೆಲ್ಲಾ ಒಳ್ಳೆಯ ಆಶಯಗಳನ್ನೇ ಹೊಂದಿರುತ್ತವೆ. ಆದರೆ ತಳಮಟ್ಟದಲ್ಲಿ ಅವು ಜಾರಿಗೊಳ್ಳುವಾಗ ದುರುಪಯೋಗ ಆಗುವುದು ಸಾಮಾನ್ಯವಾಗಿದೆ. ಹಾಗಾಗದಂತೆ ನೋಡಿಕೊಳ್ಳುವುದರಲ್ಲೇ ಆ ಯೋಜನೆಯ ಸಫಲತೆ ಅಡಗಿರುತ್ತದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ರೂಪಾಂತರಿ ವೈರಸ್: ಬೇಕು ಎಚ್ಚರ

ದೇಶದಲ್ಲಿ ಕೊರೊನಾ ಸೋಂಕಿಗೆ ರಾಮಬಾಣ ಎನಿಸಿರುವ ಲಸಿಕೆಯನ್ನು ನೂರು ಕೋಟಿ ಡೋಸ್ ವಿತರಿಸಿದ ಉತ್ಸಾಹದಲ್ಲಿರುವ ಸರ್ಕಾರಗಳಿಗೆ ಇದೀಗ ರೂಪಾಂತರಿ ಕೊರೊನಾದ ಆತಂಕ ಶುರುವಾಗಿದೆ. ರೂಪಾಂತರಿ ವೈರಸ್ ಐರೋಪ್ಯ ರಾಷ್ಟ್ರಗಳಲ್ಲಿ ಆತಂಕವನ್ನು ಸೃಷ್ಟಿಸುತ್ತಿರುವುದರಿಂದ ಇವುಗಳಲ್ಲಿ ಹಲವು ರಾಷ್ಟ್ರಗಳು ಪುನಃ ಲಾಕ್‌ಡೌನ್ ಮೊರೆ ಹೋಗಿವೆ. ಭಾರತದಲ್ಲಿಯೂ ಡೆಲ್ಟಾದ ರೂಪಾಂತರಿ ವೈರಸ್ ಕಾಣಿಸಿಕೊಂಡಿರುವ ಬಗ್ಗೆ ವರದಿಯಾಗಿದೆ. ಈಗಷ್ಟೇ ಸಹಜ ಸ್ಥಿತಿಗೆ ಬರುತ್ತಿರುವ ಜನಜೀವನ ಮತ್ತೆ ಸಂಕಷ್ಟಕ್ಕೆ ಈಡಾಗುವುದು ಬೇಡ ಎನ್ನುವುದಾದರೆ ಎಚ್ಚರ ಅಗತ್ಯ. ಲಸಿಕೆ ಪಡೆದಿದ್ದರೂ ರೂಪಾಂತರಿ ಕೊರೊನಾ ವೈರಸ್ ದಾಳಿ ಮಾಡುವ ಸಾಧ್ಯತೆ ಇರುವುದರಿಂದ ಲಸಿಕೆ ಪಡೆದ ಮಾತ್ರಕ್ಕೆ ಕೋವಿಡ್ ವಿರುದ್ಧ ಪರಿಪೂರ್ಣ ಗೆದ್ದಂತೆ ಎಂದು ಭಾವಿಸಬೇಕಿಲ್ಲ. ಜೀವನ ಹಾಗೂ ಜೀವದ ನಡುವಣ ಈ ಹೋರಾಟವನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಂಡು ಎಚ್ಚರಿಕೆಯಿಂದ ಇರಬೇಕು.

ಕೊರೊನಾ ಸೋಂಕು ಹೆಚ್ಚಾದಾಗ ಪ್ರತಿಸಲ ಲಾಕ್‌ಡೌನ್ ಹೇರಲಾಗದು. ಎಲ್ಲರನ್ನೂ ತಿಂಗಳುಗಟ್ಟಲೆ ಮನೆಯಲ್ಲಿಯೇ ಇರುವಂತೆ ನಿರ್ಬಂಧ ವಿಧಿಸುವುದಕ್ಕೆ ಸಾಧ್ಯವಿಲ್ಲ. ಜನರು ಜವಾಬ್ದಾರಿ ಅರಿತು ನೆರೆಹೊರೆಯಲ್ಲಿ ಜಾಗೃತಿ ಮೂಡಿಸಬೇಕು. ಸೋಂಕು ಕ್ಷೀಣಿಸುತ್ತಿದ್ದಂತೆ ಮಾಸ್ಕ್ ಧರಿಸದೇ ಇರುವುದು, ಅಂತರ ಕಾಯ್ದುಕೊಳ್ಳದೇ ಇರುವುದು ಸರಿಯಲ್ಲ. ಕೊರೊನಾ ವೈರಸ್ ಸಂಪೂರ್ಣವಾಗಿ ನಿರ್ಮೂಲನೆಯಾಗಿಲ್ಲ ಎನ್ನುವುದನ್ನು ಮರೆಯಬಾರದು. ಈ ಎಲ್ಲಕ್ಕಿಂತ ಮುಖ್ಯವಾಗಿ, ಸರ್ಕಾರವೇ ಎಲ್ಲವನ್ನೂ ಮಾಡಬೇಕು ಎನ್ನುವ ಮನಃಸ್ಥಿತಿಯಿಂದ ಹೊರಬಂದು, 'ನಮ್ಮ ಆರೋಗ್ಯ ನಮ್ಮ ಕೈಯಲ್ಲಿ' ಎನ್ನುವುದನ್ನು ಅರಿಯಬೇಕು.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬ್ಯಾಟರಿ ವಾಹನದ ಪರೋಕ್ಷ ಮಾಲಿನ್ಯ

• ಜಯಸಿಂಹ ಆರ್.

ಭಾರತದಲ್ಲಿ ಬ್ಯಾಟರಿಚಾಲಿತ ವಾಹನಗಳ (ಇವಿ) ಬಳಕೆ ಹೆಚ್ಚುತ್ತಿದೆ. ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಉದ್ದೇಶ ಮತ್ತು ಪೆಟ್ರೋಲ್-ಡೀಸೆಲ್ ವಾಹನಗಳಿಗಿಂತ ಕಡಿಮೆ ವೆಚ್ಚ ಎಂಬುದು ಇವಿಗಳ ಬಳಕೆ ಹೆಚ್ಚಾಗಲು ಪ್ರಮುಖ ಕಾರಣ. ಸರ್ಕಾರವೂ ಇವಿಗಳ ಬಳಕೆಯನ್ನು ಉತ್ತೇಜಿಸುತ್ತಿದೆ. ಇವಿಗಳ ಖರೀದಿಗೆ ಸಹಾಯಧನವನ್ನೂ ನೀಡುತ್ತಿದೆ. ಆದರೆ ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲಿನ ಉಷ್ಣ ವಿದ್ಯುತ್ ಸ್ಥಾವರಗಳನ್ನೇ ಹೆಚ್ಚು ನೆಚ್ಚಿಕೊಂಡಿರುವ ಕಾರಣ ಇವಿಗಳಿಂದಲೂ ಹೆಚ್ಚು ವಾಯುಮಾಲಿನ್ಯವಾಗುತ್ತದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಭಾರತದಲ್ಲಿ ಇವಿಗಳ ಬಳಕೆಯಿಂದ ಪರೋಕ್ಷವಾಗಿ ವಿದ್ಯುತ್‌ಗೆ ಬೇಡಿಕೆ ಹೆಚ್ಚುತ್ತದೆ. ದೇಶದಲ್ಲಿ ಒಟ್ಟು ಬಳಕೆಯ ಶೇ 60ರಷ್ಟು ವಿದ್ಯುತ್ ಅನ್ನು ಪಳೆಯುಳಿಕೆ ಇಂಧನದಿಂದ (ಕಲ್ಲಿದ್ದಲು, ಡೀಸೆಲ್, ನೈಸರ್ಗಿಕ ಅನಿಲ) ಉತ್ಪಾದಿಸಲಾಗುತ್ತದೆ. ಹೀಗಾಗಿ ವಿದ್ಯುತ್ ಚಾಲಿತ ವಾಹನಗಳು ಚಲಿಸುವಾಗ ಇಂಗಾಲದ ಡೈಆಕ್ಸೈಡ್ ಅನ್ನು ಹೊರಹಾಕುವುದಿಲ್ಲ. ಆದರೆ, ಚಾರ್ಜಿಂಗ್ ಮಾಡಲು ಬಳಸುವ ವಿದ್ಯುತ್‌ನ ಉತ್ಪಾದನೆ ವೇಳೆ ವಾತಾವರಣಕ್ಕೆ ಇಂಗಾಲದ ಡೈಆಕ್ಸೈಡ್ ಬಿಡುಗಡೆಯಾಗುತ್ತದೆ.

ಈಗಿನ ಸ್ಥಿತಿಯಲ್ಲಿ ಭಾರತದಲ್ಲಿ ಇವಿಗಳ ಬಳಕೆಯಿಂದ ಪರಿಸರ ಮಾಲಿನ್ಯ ಕಡಿಮೆಯಾಗುವುದಿಲ್ಲ. ನವೀಕರಿಸಬಹುದಾದ ಇಂಧನ ಮೂಲಗಳು, ಜಲವಿದ್ಯುತ್ ಮತ್ತು ಅಣು ವಿದ್ಯುತ್‌ನ ಪ್ರಮಾಣವನ್ನು ಹೆಚ್ಚಿಸಿದರೆ, ಇವಿಗಳಿಂದಾಗುವ ಪರೋಕ್ಷ ವಾಯು ಮಾಲಿನ್ಯವನ್ನು ತಡೆಗಟ್ಟಬಹುದು.

2070ರ ವೇಳೆಗೆ ಭಾರತವು ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯ ಪ್ರಮಾಣವನ್ನು ಶೇ 99.9ರಷ್ಟು ತಗ್ಗಿಸುವ ಗುರಿ ಹಾಕಿಕೊಂಡಿದೆ. ಅಲ್ಲಿಯವರೆಗೆ ಇವಿ ಚಾರ್ಜಿಂಗ್ ಮಾಡುವಾಗ, ಪರೋಕ್ಷವಾಗಿ ವಾತಾವರಣಕ್ಕೆ ಇಂಗಾಲದ ಡೈಆಕ್ಸೈಡ್ ಬಿಡುಗಡೆಯಾಗುತ್ತಿರುತ್ತದೆ. ಆದರೆ ಕಲ್ಲಿದ್ದಲು ಆಧಾರಿತ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆಯಾದಂತೆ, ಇವಿಗಳಿಂದಾಗುವ ಪರೋಕ್ಷ ವಾಯುಮಾಲಿನ್ಯದ ಪ್ರಮಾಣವೂ ಕಡಿಮೆಯಾಗುತ್ತದೆ.

ಭಾರತದಲ್ಲಿ ಮಧ್ಯಮ ಗಾತ್ರದ ಇ-ಕಾರು ಪ್ರತೀ ಕಿ.ಮೀ. ಕ್ರಮಿಸುವಲ್ಲಿ ಪರೋಕ್ಷವಾಗಿ ಹೊರಹಾಕುವ ಇಂಗಾಲದ ಡೈ ಆಕ್ಸೈಡ್‌ನ ಪ್ರಮಾಣ

ಭಾರತದಲ್ಲಿ ಮಧ್ಯಮ ಗಾತ್ರದ ಪೆಟ್ರೋಲ್ ಕಾರು ಪ್ರತೀ ಕಿ.ಮೀ. ಕ್ರಮಿಸುವಲ್ಲಿ ಪ್ರತ್ಯಕ್ಷವಾಗಿ ಹೊರಹಾಕುವ ಇಂಗಾಲದ ಡೈ ಆಕ್ಸೈಡ್‌ನ ಪ್ರಮಾಣ

ಭಾರತದಲ್ಲಿ ಮಧ್ಯಮ ಗಾತ್ರದ ಡೀಸೆಲ್ ಕಾರು ಪ್ರತೀ ಕಿ.ಮೀ. ಕ್ರಮಿಸುವಲ್ಲಿ ಪ್ರತ್ಯಕ್ಷವಾಗಿ ಹೊರಹಾಕುವ ಇಂಗಾಲದ ಡೈ ಆಕ್ಸೈಡ್‌ನ ಪ್ರಮಾಣ

ಬ್ಯಾಟರಿಗಳಿಂದಲೂ ಹಾನಿ

ಇವಿಗಳಲ್ಲಿ ಈಗ ಲಿಥಿಯಂ ಅಯಾನ್ ಬ್ಯಾಟರಿಗಳನ್ನು ಬಳಸಲಾಗುತ್ತಿದೆ. ಈ ಸ್ವರೂಪದ ಬ್ಯಾಟರಿಗಳಲ್ಲಿ ಲಿಥಿಯಂ, ನಿಕ್ಕಲ್ ಮತ್ತು ಕೋಬಾಲ್ಟ್‌ಗಳನ್ನು ಬಳಸಲಾಗುತ್ತದೆ. ಈ ಮೂರು ರಾಸಾಯನಿಕ ವಸ್ತುಗಳು ಭೂಮಿಯಲ್ಲಿ ಖನಿಜ ರೂಪದಲ್ಲಿ ದೊರೆಯುತ್ತವೆ. ವಿಶ್ವದಲ್ಲಿ ಈಗ ಬಳಕೆಯಾಗುತ್ತಿರುವ ಬಹುಪಾಲು ಲಿಥಿಯಂ ಚೀನಾದಿಂದ ಪೂರೈಕೆಯಾಗುತ್ತದೆ. ಲಿಥಿಯಂ ಅನ್ನು ಗಣಿಗಳಿಂದ ಹೊರತೆಗೆಯುವಾಗ ವಾತಾವರಣಕ್ಕೆ ಅಪಾಯಕಾರಿ ರಾಸಾಯನಿಕ ವಸ್ತುಗಳು ಬಿಡುಗಡೆಯಾಗುತ್ತವೆ. ವಿಶ್ವದ ಶೇ 70ರಷ್ಟು ಕೋಬಾಲ್ಟ್ ಅನ್ನು ಕಾಂಗೋ ಪೂರೈಸುತ್ತದೆ. ಲಿಥಿಯಂ ಅಯಾನ್ ಬ್ಯಾಟರಿಯಲ್ಲಿ ಇದು ಅತ್ಯಂತ ಪ್ರಮುಖವಾದ ರಾಸಾಯನಿಕ ವಸ್ತು. ಇದನ್ನು ಭೂಮಿಯಿಂದ ಹೊರತೆಗೆಯುವಾಗ ವಿಷಕಾರಿ ರಾಸಾಯನಿಕ ವಸ್ತುಗಳು ವಾತಾವರಣಕ್ಕೆ ಬಿಡುಗಡೆಯಾಗುತ್ತವೆ. ಈ ಕಾರಣದಿಂದ ಇವಿಗಳ ಬಳಕೆ ಹೆಚ್ಚಿದರೆ, ಪರೋಕ್ಷವಾಗಿ ಪರಿಸರಕ್ಕೆ ಹಾನಿಯಾಗುತ್ತದೆ.

ಲಿಥಿಯಂ ಅಯಾನ್ ಬ್ಯಾಟರಿಗಳ ಕಾರ್ಯಕ್ಷಮತೆ ಕುಸಿದಾಗ ಅವನ್ನು ಬದಲಿಸಬೇಕಾಗುತ್ತದೆ. ಹೀಗೆ ಬದಲಿಸಿದ ಹಳೆಯ ಬ್ಯಾಟರಿಗಳಲ್ಲಿ ಮರುಬಳಕೆ ಆಗುತ್ತಿರುವ ಬ್ಯಾಟರಿಗಳ ಪ್ರಮಾಣ ಶೇ 5 ಮಾತ್ರ. ಉಳಿದ ಶೇ 95ರಷ್ಟು ಹಳೆಯ ಬ್ಯಾಟರಿಗಳನ್ನು ಅವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ. ಇದರಿಂದ ಪರಿಸರಕ್ಕೆ ಅಪಾಯಕಾರಿ ರಾಸಾಯನಿಕ ವಸ್ತುಗಳು ಬಿಡುಗಡೆಯಾಗುತ್ತವೆ. ಈ ಸ್ವರೂಪದ ಮಾಲಿನ್ಯವನ್ನು ತಡೆಯಲು ಹಳೆಯ ಬ್ಯಾಟರಿಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ನೀತಿಗಳನ್ನು ರೂಪಿಸಬೇಕಾಗುತ್ತದೆ.

ಭಾರತ: ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆ ಹೆಚ್ಚು



ಮುಂದಿರುವ ಸವಾಲುಗಳು

ಇವಿಗಳಿಂದಾಗುವ ಪರೋಕ್ಷ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಬಹಳ ದೂರ ಸಾಗಬೇಕಾಗಿದೆ. ವಿದ್ಯುತ್ ಉತ್ಪಾದನೆಗೆ ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ತಗ್ಗಿಸಬೇಕಿದೆ. ಅಂದರೆ ಕಲ್ಲಿದ್ದಲು ಉಷ್ಣ ವಿದ್ಯುತ್ ಸ್ಥಾವರ, ಡೀಸೆಲ್ ಆಧಾರಿತ ವಿದ್ಯುತ್ ಉತ್ಪಾದನಾ ಸ್ಥಾವರ ಮತ್ತು ನೈಸರ್ಗಿಕ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಸ್ಥಾವರಗಳ ಮೇಲಿನ ಅವಲಂಬನೆಯನ್ನು ಸಂಪೂರ್ಣವಾಗಿ ತಪ್ಪಿಸಬೇಕು.

ಇದಕ್ಕೆ ಪರ್ಯಾಯವಾಗಿ ಜಲವಿದ್ಯುತ್, ಸೌರವಿದ್ಯುತ್, ಪವನ ವಿದ್ಯುತ್ ಮತ್ತು ಅಣುವಿದ್ಯುತ್ ಸ್ಥಾವರಗಳ ಸಂಖ್ಯೆ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಅಗತ್ಯವಿರುವ ವಿದ್ಯುತ್‌ನ ಶೇ 100ರಷ್ಟನ್ನೂ ಈ ಮೂಲಗಳಿಂದಲೇ ಪೂರೈಸುವಂತಾದರೆ, ಇವಿಗಳಿಂದಾಗುವ ವಾಯುಮಾಲಿನ್ಯವನ್ನು ಸಂಪೂರ್ಣವಾಗಿ ತಗ್ಗಿಸಲು ಸಾಧ್ಯವಿದೆ. ಆದರೆ ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳ ಅವಲಂಬನೆಯನ್ನು ಸಂಪೂರ್ಣವಾಗಿ ತಗ್ಗಿಸಲು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು 2050ರವರೆಗಿನ ಗಡುವು ಹಾಕಿಕೊಂಡಿವೆ. ರಷ್ಯಾ 2060, ಭಾರತವು 2070ರಲ್ಲಿ ಈ ಗುರಿಯನ್ನು ಮುಟ್ಟುವ ಪ್ರತಿಜ್ಞೆ ಮಾಡಿವೆ. ಇದಕ್ಕಾಗಿ ಅಪಾರ ಪ್ರಮಾಣದ ಬಂಡವಾಳ ಹೂಡಿಕೆ ಮಾಡಬೇಕಾಗುತ್ತದೆ. ಆದರೆ ಭಾರತವು ಹಾಕಿಕೊಂಡಿರುವ ಗುರಿಯನ್ನು 2070ರ ಒಳಗೆ ಮುಟ್ಟಲು ಸಾಧ್ಯವಿಲ್ಲ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಬ್ಯಾಟರಿಗಳಿಂದಾಗುವ ಪರಿಸರ ಮಾಲಿನ್ಯವನ್ನು ತಡೆಗಟ್ಟಲೂ ಹಲವು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಕಡಿಮೆ ಹಾನಿಕಾರಕ ರಾಸಾಯನಿಕ ವಸ್ತುಗಳ ಸಂಯೋಜನೆಯ ಬ್ಯಾಟರಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕಿದೆ. ಬ್ಯಾಟರಿಗಳ ಮರುಬಳಕೆಯನ್ನು ಉತ್ತೇಜಿಸಬೇಕಿದೆ. ಅಲ್ಲದೆ, ಹಳೆಯ ಬ್ಯಾಟರಿಗಳ ವೈಜ್ಞಾನಿಕ ವಿಲೇವಾರಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಿದೆ.

ಆಧಾರ: ಇಂಟರ್‌ನ್ಯಾಷನಲ್ ಕೌನ್ಸಿಲ್ ಆನ್ ಕ್ಲೀನ್ ಟ್ರಾನ್ಸ್‌ಪೋರ್ಟೇಷನ್ ವರದಿ, ಇಂಧನ ಸಚಿವಾಲಯ, ಪಿಟಿಐ

ಶುದ್ಧ ಇಂಧನ ಅನಿವಾರ್ಯ

ವಿಶ್ವದ ಇತರೆಡೆಗೆ ಹೋಲಿಸಿದರೆ, ಯುರೋಪ್ ಖಂಡದಲ್ಲಿ ಇವಿಗಳ ಮಾರಾಟ ಅಧಿಕವಾಗಿದೆ. ಆದರೆ ಪೋಲೆಂಡ್ ಮತ್ತು ಕೊಸೊವೊ ಮೊದಲಾದ ದೇಶಗಳಲ್ಲಿ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರಗಳೇ ಅಧಿಕ. ಹಾಗಾಗಿ, ಇಲ್ಲಿ ಇವಿಗಳಿಂದ ಆಗುವ ಪರೋಕ್ಷ ಮಾಲಿನ್ಯ ಹೆಚ್ಚು ಎಂದು ರೇಡಿಯಂಟ್ ಎನರ್ಜಿ ಗ್ರೂಪ್ (ಆರ್‌ಇಜಿ) ಸಂಶೋಧನಾ ಸಂಸ್ಥೆಯ ವರದಿ ತಿಳಿಸಿದೆ.

ಅಣು ವಿದ್ಯುತ್ ಹಾಗೂ ಜಲವಿದ್ಯುತ್ ಗ್ರಿಡ್‌ನಿಂದ ಪೂರೈಕೆಯಾಗುವ ವಿದ್ಯುತ್‌ನಿಂದ ಚಾರ್ಜ್ ಮಾಡಲಾದ ಇ-ವಾಹನಗಳು ಪರಿಸರ ಸ್ನೇಹಿ. ಆದರೆ ಪಳೆಯುಳಿಕೆ ಇಂಧನ ಆಧಾರಿತ ವಿದ್ಯುತ್ ಸ್ಥಾವರಗಳು ಅಧಿಕವಾಗಿರುವಲ್ಲಿ ಇವಿಗಳಿಂದಲೂ ದೊಡ್ಡ ಪ್ರಮಾಣದ ವಾಯುಮಾಲಿನ್ಯ ಉಂಟಾಗುತ್ತದೆ. ಟೆಸ್ಲಾ ಮಾಡೆಲ್ 3 ಇವಿಯನ್ನು 100 ಕಿ.ಮೀ ಓಡಿಸಲು ಬೇಕಾದ, ವಿದ್ಯುತ್ ಉತ್ಪಾದನೆ ವೇಳೆ ವಾತಾವರಣಕ್ಕೆ ಬಿಡುಗಡೆಯಾದ ಇಂಗಾಲದ ಪ್ರಮಾಣ ಮತ್ತು ಪೆಟ್ರೋಲ್/ಡೀಸೆಲ್ ಚಾಲಿತ ವಾಹನವನ್ನು ಅಷ್ಟೇ ದೂರ ಓಡಿಸಿದಾಗ ಬಿಡುಗಡೆಯಾದ ಇಂಗಾಲದ ಪ್ರಮಾಣವನ್ನು ಹೋಲಿಸಿ ಈ ಅಧ್ಯಯನ ಮಾಡಲಾಗಿದೆ.

ಹೀಗಾಗಿ ಶುದ್ಧ ಇಂಧನ ಮೂಲವು, ಇವಿಗಳ ಉದ್ದೇಶ ಈಡೇರಿಕೆಗೆ ಅನಿವಾರ್ಯ. ಸ್ವಿಟ್ಜರ್ಲೆಂಡ್ ಈ ದಿಸೆಯಲ್ಲಿ ಶೇ 100ರಷ್ಟು ಸಾಧನೆ ಮಾಡಿದೆ. ನಾರ್ವೆ ಶೇ 98, ಫ್ರಾನ್ಸ್ ಶೇ 96, ಆಸ್ಟ್ರಿಯಾ ಶೇ 93ರಷ್ಟು ಇಂಗಾಲ ಹೊರಸೂಸುವಿಕೆಯನ್ನು ತಡೆದಿವೆ ಎಂದು ವರದಿ ಅಭಿಪ್ರಾಯಪಟ್ಟಿದೆ. ಸೈಪ್ರಸ್, ಸರ್ಬಿಯಾ, ಎಸ್ಟೋನಿಯಾ, ನೆದರ್ಲೆಂಡ್ಸ್ ದೇಶಗಳು ಹಿಂದಿವೆ. ಯುರೋಪ್‌ನ ಅತಿದೊಡ್ಡ ಕಾರು ತಯಾರಿಕಾ ದೇಶವಾಗಿರುವ ಜರ್ಮನಿಯು ನವೀಕರಿಸಬಹುದಾದ ಮೂಲದಿಂದ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಿದೆ. ಹೀಗಾಗಿ, ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಶೇ 55ರಷ್ಟು ಕಡಿತ ಮಾಡಿದೆ.

ಸೌರ ಮತ್ತು ಪವನ ವಿದ್ಯುತ್ ಮೇಲೆ ಹೆಚ್ಚು ಹೂಡಿಕೆ ಮಾಡಿರುವ ಸ್ಪೇನ್ ಹಾಗೂ ಜರ್ಮನಿಯಲ್ಲಿ ನವೀಕರಿಸಬಹುದಾದ ಮೂಲಗಳಿಂದ ಪಡೆದ ವಿದ್ಯುತ್ ಅನ್ನು ಸಂಗ್ರಹಿಸಿಡುವ ಸಮಸ್ಯೆಯಿದೆ. ಹೀಗಾಗಿ ಚಾರ್ಜ್ ಮಾಡುವ ಸಮಯ ಯಾವುದು ಎಂಬುದರ ಮೇಲೆ ಇಂಗಾಲ ಹೊರಸೂಸುವಿಕೆ ಪ್ರಮಾಣ ನಿರ್ಧಾರವಾಗುತ್ತದೆ. ಅಂದರೆ, ಸೂರ್ಯನ ಕಿರಣಗಳು ಪ್ರಖರವಾಗಿರುವ ಹಾಗೂ ಹೆಚ್ಚು ಗಾಳಿ ಬೀಸುವ ಮಧ್ಯಾಹ್ನದ ಹೊತ್ತು ಇವಿಗಳನ್ನು ಚಾರ್ಜ್ ಮಾಡುವುದರಿಂದ ಶೇ 16–18ರಷ್ಟು ಇಂಗಾಲ ಹೊರಸೂಸುವಿಕೆ ನಿಯಂತ್ರಿಸಬಹುದು.

ವಿದ್ಯುತ್ ತಯಾರಿಕೆಯನ್ನು ಇಂಗಾಲಮುಕ್ತಗೊಳಿಸುವ ಹಾಗೂ ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸಿದ ಇಂಧನವನ್ನು ದಾಸ್ತಾನು ಮಾಡುವ ಉತ್ತಮ ಮಾರ್ಗಗಳನ್ನು ಕಂಡುಕೊಳ್ಳುವ ಸವಾಲು ವಾಹನ ಉದ್ಯಮದ ಮುಂದಿದೆ. ಲಿಥಿಯಂ ಅಯಾನ್ ಬ್ಯಾಟರಿಗಳು ಕೇವಲ 4 ಗಂಟೆಗಳವರೆಗೆ ಪೂರ್ಣ ಸಾಮರ್ಥ್ಯದಲ್ಲಿ ವಿದ್ಯುತ್ ಸಂಗ್ರಹಿಸುವ ಸಾಮರ್ಥ್ಯ ಹೊಂದಿವೆ. ಅಂದರೆ ಹಗಲಿನಲ್ಲಿ ಗಮನಾರ್ಹ ಪ್ರಮಾಣದ ಸೌರ ಮತ್ತು ಪವನ ಶಕ್ತಿಯನ್ನು ಉತ್ಪಾದಿಸುವ ದೇಶಗಳು, ರಾತ್ರಿಯ ವೇಳೆ ಇಂಗಾಲ ಆಧಾರಿತ ವಿದ್ಯುತ್ ಮೂಲಗಳ ಮೇಲೆ ಅವಲಂಬಿತವಾಗಬೇಕಾದ ಪರಿಸ್ಥಿತಿ ಇದೆ.

ದೇಶಗಳು ಹೊಂದಿರುವ ವಿದ್ಯುತ್ ಉತ್ಪಾದನಾ ಮೂಲಗಳು ಯಾವುವು ಎಂಬುದರ ಮೇಲೆ, ಸಾರಿಗೆಯನ್ನು ಪೂರ್ಣ ವಿದ್ಯುದೀಕರಣಗೊಳಿಸುವ ಅಂಶ ಅವಲಂಬಿತವಾಗಿದೆ. ಇವಿ ಯಶಸ್ವಿಯಾಗ ಬೇಕಾದರೆ, ಇಂಗಾಲಮುಕ್ತ ವಿದ್ಯುತ್ ಕಾರ್ಯ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಂಶೋಧಕ ಸಿದ್ ಬಗ್ಗಾ ಹೇಳುತ್ತಾರೆ.

ರಾಯಿಟರ್ಸ್ ವರದಿ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 4

ಕಾರ್ತಿಕೇಯನಿಗಾಗಿ ಹುಡುಕಾಟ

ಶಿವಪುತ್ರನು ಆರು ಕೃತ್ತಿಕೆಯರ ಮಡಿಲಲ್ಲಿ ಬೆಳೆದು ಕಾರ್ತಿಕೇಯನೆಂಬ ಹೆಸರು ಸಂಪಾದಿಸಿದ. ಸುಮಾರು ಕಾಲ ಸರಿದ ನಂತರ ಪಾರ್ವತಿಗೆ ತಮ್ಮ ದಾಂಪತ್ಯಸುಖಕ್ಕೆ ದೇವತೆಗಳು ಅಡ್ಡಿಪಡಿಸಿದಾಗ ಜಾರಿದ ಶಿವನ ರೇತಸ್ಸು ಏನಾಯಿತು ಎಂಬ ಪ್ರಶ್ನೆ ಕಾಡಿತು. ಇದರ ಬಗ್ಗೆ ಪತಿ ಪರಶಿವನನ್ನೇ ಕೇಳಿದಳು. ಆಗ ಶಿವನು ದೇವತೆಗಳನ್ನೆಲ್ಲಾ ಕೈಲಾಸಕ್ಕೆ ಕರೆಸಿಕೊಂಡು ವಿಚಾರಣೆ ನಡೆಸಿದ. ಮೊದಲಿಗೆ ಅಗ್ನಿ ಭಯಭೀತನಾಗಿ ಶಿವನ ಮುಂದೆ ನಿಂತು, ಆ ರೇತಸ್ಸು ಭೂಮಿಗೆ ಬೀಳುವಾಗ ದುರಾಸೆಯಿಂದ ತಾನು ಪಾರಿವಾಳದ ರೂಪದಲ್ಲಿ ಸ್ವೀಕರಿಸಿದೆ. ಆದರೆ ಅದನ್ನು ಸಹಿಸಿಕೊಳ್ಳಲಾಗ-ದೆ, ಹಿಮಪರ್ವತದ ಮೇಲೆ ಬಿಟ್ಟೆ ಎಂದ. ಹಿಮವಂತನು ನಿಮ್ಮ ರೇತಸ್ಸನ್ನು ತಡೆಯಲಾಗದೆ, ಗಂಗೆಗೆ ಬಿಟ್ಟೆ ಎಂದ. ಗಂಗೆ ತಾನೂ ಸಹ ಅದನ್ನ ತಡೆಯಲು ಆಗದೆ ಪರ್ವತ ಬುಡದ ಜೊಂಡು ಹುಲ್ಲಿನ ಬಳಿ ತಳ್ಳಿದೆ ಎಂದಳು. ಇದು ನಿಜವೆಂದು ಸಾಕ್ಷೀಕರಿಸಿದ ವಾಯುವು, 'ಆ ರೇತಸ್ಸು ಜೊಂಡು ಹುಲ್ಲಿನ ಮೇಲೆ ಬಿದ್ದಾಗ ಮುದ್ದಾದ ಮಗು ಹುಟ್ಟಿದ್ದನ್ನು ಕಂಡೆ' ಎಂದ. ಹಗಲಿನಲ್ಲಿ ನಡೆದ ಘಟನೆಯನ್ನು ತಾನು ನೋಡಿದ್ದಾಗಿ ಸೂರ್ಯ ಹೇಳಿದರೆ, ರಾತ್ರಿಯಾದಾಗ ಕೃತ್ತಿಕಾ ಸ್ತ್ರೀಯರು ಅಳುತ್ತಿದ್ದ ಮಗುವನ್ನು ಎತ್ತಿಕೊಂಡು ಹೋದರೆಂದು ಚಂದ್ರ ಹೇಳಿದ. ಹಸಿವಿನಿಂದ ಅಳುತ್ತಿದ್ದ ಮಗುವಿಗೆ ಕೃತ್ತಿಕೆಯರು ಸ್ತನ್ಯಪಾನ ಮಾಡಿಸಿ ಸಂತೈಸಿದರು ಎಂದು ಜಲದೇವತೆ ಹೇಳಿದರೆ, ಆ ಮಗುವನ್ನು ಪೋಷಿಸುತ್ತಿರುವ ಕೃತ್ತಿಕೆಯರು 'ಕುಮಾರ'ನೆಂದು ನಾಮಕರಣ ಮಾಡಿದ್ದಾರೆಂದು ಸಂಧ್ಯಾದೇವತೆ ಹೇಳಿದಳು. ರಾತ್ರಿದೇವತೆಯು ಮಗುವನ್ನು ಕೃತ್ತಿಕೆಯರು ಕಣ್ಣಲ್ಲಿ ಕಣ್ಣಿಟ್ಟು ಪೋಷಿಸುತ್ತಿದ್ದಾರೆ ಎಂದರೆ, ಹಗಲು ಆ ಮಗುವಿಗೆ ಶ್ರೇಷ್ಠವಾದ ಬಟ್ಟೆ ಒಡವೆಗಳನ್ನು ತೊಡಿಸಿ ಸಂತೋಷದಿಂದ ನೋಡಿಕೊಳ್ಳುತ್ತಿದ್ದಾರೆ ಎಂದಿತು.

ದೇವತೆಗಳ ಮಾತು ಕೇಳಿ ಸಂತುಷ್ಟಳಾದ ಪಾರ್ವತಿ ತನ್ನ ಕುಮಾರ ಸುರಕ್ಷಿ-ವಾಗಿದ್ದಾನೆಂದು ಲಕ್ಷ್ಮಿ-ಸರಸ್ವತಿ ಆದಿಯಾಗಿ ಎಲ್ಲಾ ದೇವತೆಗಳಿಗೂ ವಜ್ರವೈ-ಡೂರ್ಯಗಳನ್ನು ದಾನ ಮಾಡಿದಳು. ಇತ್ತ ಲೋಕೇಶ್ವರನೂ ಕೃತ್ತಿಕಾ ಸ್ತ್ರೀಯರ ಬಳಿ ಇರುವ ತನ್ನ ಮಗನನ್ನು ಕರೆತರುವಂತೆ ಶಿವಗಣಗಳಿಗೆ ಆದೇಶಿಸಿದ. ಆಗ ನಂದಿಕೇಶ್ವರನ ನೇತೃತ್ವದಲ್ಲಿ ಹೊರಟ ಶಿವಗಣಗಳು ಕೃತ್ತಿಕೆಯರ ಮನೆಗೆ ಮುತ್ತಿಗೆ ಹಾಕಿದರು. ವೀರಭದ್ರ, ವಿಶಾಲಾಕ್ಷ, ಶಂಕುಕರ್ಣ, ಕರಾಕ್ರಮ, ಮಹಾಕಾಲ, ವಜ್ರದಂಷ್ಟ್ರ, ಮಹೋನ್ಮದ, ಗೋಕರ್ಣಾಸ್ಯ, ದಧಿಮುಖ ಮತ್ತಿತರ ಶಿವಧೂತರನ್ನು ಕಂಡು ಭಯ ವಿಹ್ವಲರಾದ ಕೃತ್ತಿಕಾ ಸ್ತ್ರೀಯರು ಬ್ರಹ್ಮತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಕಾರ್ತಿಕೇಯನ ಬಳಿ ಓಡಿದರು. ಬಾಲಸುಬ್ರಹ್ಮಣ್ಯನೂ ಕೃತ್ತಿಕೆಯರನ್ನು ಸಮಾಧಾನಿಸಿ, ಧೈರ್ಯ ತುಂಬಿದ. ತಾನು ಬಾಲಕನಾದರೂ, ಅವರನ್ನೆಲ್ಲಾ ಎದುರಿಸುವ ಶಕ್ತಿ ತನಗಿದೆ ಎಂದು ಹೊರಬಂದ. ಮನೆ ಮುಂಭಾಗದಲ್ಲಿ ನಿಂತಿದ್ದ ನಂದಿಕೇಶ್ವರನು ವಿನೀತನಾಗಿ ಸುಬ್ರಹ್ಮಣ್ಯನಿಗೆ ತಾನು ಬಂದ ವಿಷಯ ತಿಳಿಸಿದ.

ಪಾರ್ವತಿಪರಮೇಶ್ವರರು ರತಿವಿಲಾಸದಲ್ಲಿದ್ದಾಗ ದೇವತೆಗಳು ನೋಡಿದ್ದರಿಂದ ಶಿವನ ರೇತಸ್ಸು ಭೂಮಿಗೆ ಜಾರಿ, ಗಂಗಾತೀರದ ಜೊಂಡು ಹುಲ್ಲಿನ ಮೇಲೆ ಬಿದ್ದು ಸುಬ್ರಹ್ಮಣ್ಯ ಹುಟ್ಟಿದ ಪ್ರಸಂಗವನ್ನು ಕೃತ್ತಿಕಾ ಸ್ತ್ರೀಯರಿಗೂ ಮನದಟ್ಟು ಮಾಡಿಸಿದ ನಂದಿಕೇಶ್ವರ, 'ಶಿವನ ಆಜ್ಞೆಯಂತೆ ನಿನ್ನ ಕರೆದುಕೊಂಡು ಹೋಗಲು ಬಂದಿದ್ದೇನೆ. ದೇವತೆಗಳ ಸೈನ್ಯಾಧಿಪತಿಯಾಗಿ ತಾರಕಾಸುರನ ಸಂಹರಿಸಿ, ಲೋಕಕಲ್ಯಾಣವಾಗಬೇಕಿದೆ. ಇದಕ್ಕಾಗಿ ನೀನು ಕೃತ್ತಿಕೆಯರ ಬಳಿ ಇದ್ದರೆ ಯುದ್ಧಕೌಶಲ ಕಲಿಯಲಾರೆ. ಆದ್ದರಿಂದ ನಮ್ಮೊಂದಿಗೆ ಬ' ಎಂದು ವಿನಂತಿಸಿದ. ನಂದಿಕೇಶ್ವರನ ಆಹ್ವಾನವನ್ನು ಸ್ವೀಕರಿಸಿದ ಬಾಲ-ಸುಬ್ರಹ್ಮಣ್ಯ, 'ಪಾರ್ವತಿದೇವಿ ತನ್ನನ್ನು ಸಲಹದಿದ್ದರೂ ಆಕೆ ನನ್ನ ತಾಯಿಯೇ. ಇಲ್ಲಿವರೆಗೆ ಸಾಕಿ ಸಲಹಿದ ಕೃತ್ತಿಕೆಯರು ನನಗೆ ತಾಯಿ ಸಮಾನರು' ಎಂದು ಅವರಿಗೆ ಕೃತಜ್ಞತೆ ಸಲ್ಲಿಸಿ, ಶಿವಗಣಗಳೊಂದಿಗೆ ಹೊರಟ.

ಐದರಲ್ಲಿ ಒಂದು ಕಾರು ಇವಿ

ಯುರೋಪ್‌ನಲ್ಲಿ ಕಳೆದ ತ್ರೈಮಾಸಿಕದಲ್ಲಿ ಮಾರಾಟವಾದ ಪ್ರತೀ ಐದು ಕಾರುಗಳಲ್ಲಿ ಒಂದು ವಿದ್ಯುತ್‌ಚಾಲಿತ ವಾಹನವಾಗಿದೆ. 2028ರ ವೇಳೆಗೆ ಈ ಪ್ರಮಾಣ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಅರ್ನೆಸ್ಟ್ ಅಂಡ್ ಯಂಗ್ ಕಂಪನಿ ತಿಳಿಸಿದೆ.

ಜನರಲ್ ಮೋಟಾರ್ಸ್, ಫೋಕ್ಸ್‌ವ್ಯಾಗನ್ ಸೇರಿದಂತೆ ಪ್ರಮುಖ ವಾಹನ ತಯಾರಿಕಾ ಕಂಪನಿಗಳು ಮುಂಬರುವ ವರ್ಷಗಳಲ್ಲಿ ವಿದ್ಯುತ್‌ಚಾಲಿತ ವಾಹನಗಳನ್ನೇ ಹೆಚ್ಚು ಮಾರಾಟ ಮಾಡಬೇಕು ಎಂಬ ಗುರಿ ಹಾಕಿಕೊಂಡಿವೆ. ಫೋಕ್ಸ್‌ವ್ಯಾಗನ್ ಕಂಪನಿಯು 2030ರ ವೇಳೆಗೆ ವಿದ್ಯುತ್‌ಚಾಲಿತ ವಾಹನಗಳ ಮಾರಾಟ ಪ್ರಮಾಣವನ್ನು ಶೇ 70ಕ್ಕೆ ಏರಿಸುವ ಬದ್ಧತೆ ಪ್ರದರ್ಶಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಮಲದ ಚಿಹ್ನೆ ಇರುವ ಟಿ-ಶರ್ಟ್ ಧರಿಸಿರುವ ಬಾಲಕನ ಜೊತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಮಾರಂಭವೊಂದರಲ್ಲಿ ಕಾಣಿಸಿಕೊಂಡ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, ವೈರಲ್ ಆಗಿರುವ ಚಿತ್ರವನ್ನು ತಿರುಚಲಾಗಿದೆ ಎಂಬುದು ಕಂಡುಬಂದಿದೆ. 2017ರಲ್ಲಿ ಗುಜರಾತ್‌ನಲ್ಲಿ ಭೂ ಸ್ವಾಧೀನ ಸಮಸ್ಯೆ ಎದುರಿಸುತ್ತಿದ್ದ ಧರ್ಮಪುರದ ಗ್ರಾಮಸ್ಥರ ಜೊತೆಗಿನ ಸಭೆಯಲ್ಲಿ ರಾಹುಲ್ ಗಾಂಧಿ ಅವರು ಭಾಗಿಯಾಗಿದ್ದಾಗ ಈ ಚಿತ್ರವನ್ನು ಸೆರೆಹಿಡಿಯಲಾಗಿತ್ತು. ಕೇಸರಿ ಬಣ್ಣದ ಟಿ ಶರ್ಟ್ ಧರಿಸಿರುವ ಬಾಲಕ, ವಿಜಯದ ಸಂಕೇತ ತೋರುತ್ತಿರುವುದು ಮೂಲ ಚಿತ್ರದಲ್ಲಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬೆರಗಿನ ಕ್ಷೇತ್ರಗಳು

ಅರುಣೋದಯ ಪ್ರಭೆಯ, ಗಿರಿಶೃಂಗದುನ್ನತಿಯ|
ವರುಣಾಲಯಾಯತಿಯ ನಿರುಕಿಸಿದೊಡಹುದೇಂ?||
ಬೆರಗು, ಬರಿ ಬೆರಗು, ನುಡಿಗರಿದೆನಿಪ್ಪಾನಂದ|
ಪರಮಪೂಜೆಯುಮಂತು – ಮಂಕುತಿಮ್ಮ ||495||

ಪದ-ಅರ್ಥ: ವರುಣಾಲಯಾಯತಿಯ = ವರುಣಾಲಯ (ಸಮುದ್ರ) + ಆಯತಿಯ (ವಿಸ್ತಾರದ), ನಿರುಕಿಸಿದೊಡಹುದೇಂ = ನಿರುಕಿಸಿದೊಡೆ (ನಿರೀಕ್ಷಿಸಿದರೆ, ನೋಡಿದರೆ) + ಅಹುದೇಂ, ನುಡಿಗರಿದೆನಿಪ್ಪಾನಂದ = ನುಡಿಗೆ (ಮಾತಿಗೆ) + ಅರಿದು (ಮೀರಿದ್ದು) + ಎನಿಪ್ಪ (ಎನ್ನಿಸುವ) + ಆನಂದ, ಪರಮಪೂಜೆಯುಮಂತು = ಪರಮಪೂಜೆಯುಂ + ಅಂತು

ವಾಚ್ಯಾರ್ಥ: ಸೂರ್ಯೋದಯದ ಬೆಳಕನ್ನು, ಪರ್ವತ ಶಿಖರಗಳ ಉನ್ನತಿಯನ್ನು, ಸಮುದ್ರದ ವಿಸ್ತಾರವನ್ನು ನೋಡಿದರೆ ಏನಾದೀತು? ಬೆರಗು, ಕೇವಲ ಬೆರಗು, ಮಾತನ್ನು ಮೀರಿದ ಆನಂದವಾಗುತ್ತದೆ. ಪರಮಾತ್ಮನ ಪೂಜೆಯೂ ಹಾಗೆಯೇ.

ವಿವರಣೆ: ಒಂದು ಸೂರ್ಯೋದಯ ಮತ್ತೊಂದು ದಿನದ ಸೂರ್ಯೋದಯದಂತೆ ಇರದು. ಕ್ಷಣ ಕ್ಷಣಕ್ಕೆ ಬದಲಾಗುವ ಅವರ್ಣನೀಯ ಚಿತ್ರಪಟ. ಬಾನಿನಂಗಳದಲ್ಲಿ ವಿಶಿಷ್ಟ ವಿನ್ಯಾಸ, ಹೊಳಪು, ರಂಗಿನಾಟದೊಂದಿಗೆ ಮನವನ್ನು ಮೋಹಕತೆಯ ಬಂಧನದಲ್ಲಿ ಬಿಗಿದು ಚುಂಬಕದಂತೆ ಸೆಳೆಯುತ್ತದೆ ಸೂರ್ಯೋದಯ. ಅದೆಷ್ಟು ಕವಿಗಳು, ಅದೆಷ್ಟು ಬಗೆಯಿಂದ ಈ ಸೂರ್ಯೋದಯವನ್ನು ಹೊಗಳಿ, ಮಾತು ನಿಲ್ಲಿಸಿಲ್ಲ? ಯಾಕೆಂದರೆ ಆ ಅನುಭವ ಮಾತನ್ನು ಮೀರಿದ್ದು. ಅದರಂತೆಯೇ ಬೆರಗು ಹುಟ್ಟಿಸುವುದು ಪರ್ವತದ ಶಿಖರಗಳ ದರ್ಶನ. ನನ್ನ ಕೆಲವು ಸ್ನೇಹಿತರು ಮಾನಸಸರೋವರದ ಯಾತ್ರೆಗೆ ಹೋಗಿ ಬಂದು ತಮ್ಮ ಅನುಭವಗಳನ್ನು ಹೇಳುತ್ತಿದ್ದರು. ಅವರು ಕೈಲಾಸ ಪರ್ವತದ ಪ್ರದಕ್ಷಿಣೆಗೆ (ಪರಿಕ್ರಮ) ಹೊರಟಿದ್ದರು. ಬೆಳಿಗ್ಗೆ ಸುಮಾರು ಆರೂವರೆ, ಆರೂಮುಕ್ಕಾಲಿನ ಸಮಯಕ್ಕೆ ಅವರ ತಂಡದ ನಾಯಕರು ಪರ್ವತದ ಶಿಖರವನ್ನೇ ನೋಡುತ್ತ, ನಿಶ್ಚಲವಾಗಿ ನಿಲ್ಲಲು ಹೇಳಿದರಂತೆ. ಇವರೆಲ್ಲ ಏವೆಯಿಕ್ಕದೆ ಅದನ್ನೇ ನೋಡುತ್ತ ನಿಂತಾಗ, ಒಂದು ಕ್ಷಣದಲ್ಲಿ ಸೂರ್ಯೋದಯವಾಗಿ, ಸೂರ್ಯನ ಕಿರಣಗಳು ಕೈಲಾಸ ಪರ್ವತದ ಶಿಖರವನ್ನು ಚುಂಬಿಸಿದಾಗ, ಕಲ್ಪನಾತೀತವಾದ ಹೊಂಬಣ್ಣ ಉದ್ಭವಿಸಿ, ಕೆಲ ಕ್ಷಣವಿದ್ದು ಮಾಯವಾಯಿತಂತೆ. ಅವರು ಹೇಳಿದರು, 'ಅದೊಂದು ಕ್ಷಣ ಭಗವಂತನ ದರ್ಶನವಾದಂತಾಯಿತು. ಅದನ್ನು ವಿವರಿಸುವುದು ಅಸಾಧ್ಯ. ಆದರೆ ಅದು ಬದುಕಿನುದ್ದಕ್ಕೂ ನಮ್ಮನ್ನು ಆವರಿಸಿಕೊಳ್ಳುವ ಅಮೃತಕ್ಷಣವಾಯಿತು'. ಉನ್ನತವಾದ ಹಿಮಾಲಯದ ಶ್ರೇಣಿಗಳನ್ನು ಕಂಡಾಗ, ನಾವು ಎಷ್ಟು ಸಣ್ಣವರೆಂಬ ಅರಿವಾಗುತ್ತದೆ. ಅವುಗಳ ಔನ್ನತ್ಯ ಬೆರಗಾಗಿಸುತ್ತದೆ. ಇನ್ನೊಂದು ನಮ್ಮನ್ನು ಸದಾಕಾಲದ ಬೆರಗಿಗೆ ಈಡುಮಾಡುವುದು ಸಮುದ್ರದ ಆಳ ಮತ್ತು ವಿಸ್ತಾರ. ಸಮುದ್ರ ತೀರದಲ್ಲಿ ನಿಂತಾಗ ಸಂತೋಷ ತರುವ ದೃಶ್ಯ, ನಾವೆಯಲ್ಲಿ ದೂರ ಸಾಗಿದಾಗ ಭಯಕ್ಕೆ ಕಾರಣವಾಗುತ್ತದೆ.

ಸೂರ್ಯೋದಯ, ಪರ್ವತಗಳ ಉನ್ನತ ಶ್ರೇಣಿಗಳು ಮತ್ತು ಅನಂತವಾದ ಸಾಗರ ಮೂರೂ ನಮ್ಮ ವಚನಶಕ್ತಿಯನ್ನು ಮೀರಿದವುಗಳು. ಅದಕ್ಕೇ ಅವು ಅವರ್ಣನೀಯ. ಅವುಗಳನ್ನು ವರ್ಣಿಸಲು ಸಾಧ್ಯವಾಗದೆ ಹೋದಾಗ ಬೆರಗು ಮಾತ್ರ ಮೂಡುತ್ತದೆ. ಅದು ಎಂಥದ್ದು ಎಂದು ಅಲ್ಲಮಪ್ರಭು ಹೇಳುತ್ತಾನೆ. 'ಅರಿದು ಮರೆದು ಬೆರಗು ಹತ್ತಿತ್ತು. ಏನೆಂದರಿಯದೆ, ಅದೆಂತೆಂದರಿಯದೆ ಗುಹೇಶ್ವರಾ, ಗುಹೇಶ್ವರಾ ಎನುತ ಅಲ್ಲಿಯೇ ನಿಂದಿತ್ತು'.

ಭಗವಂತನ ಪೂಜೆಯೂ ಅಂಥದ್ದೆ ಎಂದು ಕಗ್ಗ ಹೇಳುತ್ತದೆ. ಈ ಪೂಜೆ ಮನಸ್ಸು, ಬುದ್ಧಿಗಳನ್ನು ಮೀರಿದ್ದು. ಅದಕ್ಕೇ ಅದು 'ಯೋ ಬುದ್ಧೇ: ಪರತಸ್ತು ಸ:' ಅದು ಬುದ್ಧಿಯ ಅತೀತವಾದದ್ದು. ಕೇವಲ ಬೆರಗಿಗೆ ಒಳಗಾಗುವಂಥದ್ದು.

ದಿನ ಭವಿಷ್ಯ

ಗುರುವಾರ ನವೆಂಬರ್ 11, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ಸಪ್ತಮೀ ಗಂ. 13-31 (ಹ. 11-47) ಗುರುವಾರ ನಿತ್ಯ ನಕ್ಷತ್ರ ಶ್ರವಣ ಗಂ. 34-54 (ರಾ. 8-20) ಗಂಡ ನಾಮ ಯೋಗ ಗಂ. 15-31 ವಣಿಜ ಕರಣ ಗಂ. 13-31 ವಿಷ ಗಂ. 44-34 ಅಮೃತ ಗಂ 10-25 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-19 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 2 6

ಮೇಷ: ರಾಜಕೀಯದಲ್ಲಿ ಉನ್ನತ ಸ್ಥಾನ ಲಭ್ಯವಾಗಲಿದೆ. ಗ್ರಹಬಲಗಳು ನಿಮ್ಮ ವ್ಯಕ್ತಿತ್ವವನ್ನು ಔಚಿತ್ಯಪೂರ್ಣ ಸ್ಥಾನಕ್ಕೆ ಕೊಂಡೊಯ್ಯಲಿವೆ. ಸಿಡುಕುತನದ ಸ್ವಭಾವ ಬೇಡ. ಆರಕ್ಷಣಾಧಿಕಾರಿಗಳಿಗೆ ಆರೋಪ ಬಂದೆರಗುವ ಸಾಧ್ಯತೆ.

ವೃಷಭ: ಧೈರ್ಯದಿಂದಾಗಿ ಯಶಸ್ಸನ್ನು ಸಾಧಿಸಿ. ಹಳೆಯ ಸಾಲವನ್ನು ತೀರಿಸಲು ಸಕಾಲ. ಉದ್ಯೋಗದ ಬದಲಾವಣೆ ಬೇಡವೇ ಬೇಡ. ಉಲ್ಲಾಸದ ಕ್ಷಣಗಳಿಗಾಗಿ ಕಾಯಬೇಕಾದೀತು.

ಮಿಥುನ: ಹೊಸ ವಸ್ತ್ರ ಖರೀದಿ ಸಾಧ್ಯತೆ. ಶುಭಸಮಾರಂಭಗಳಲ್ಲಿ ಭಾಗಿಯಾಗುವ ಸಾಧ್ಯತೆ. ದೂರದಿಂದ ಸಹೋದರಿಯ ಆಗಮನ. ಅನಿರೀಕ್ಷಿತ ಧನಾಗಮನ. ಆರೋಗ್ಯದಲ್ಲಿ ಚೇತರಿಕೆ. ಈ ದಿನ ಮನಸ್ಸಿಗೆ ನೆಮ್ಮದಿ.

ಕರ್ಕಾಟಕ: ಸಿಮೆಂಟ್ ಮತ್ತು ಕಬ್ಬಿಣ ಮುಂತಾದ ಗೃಹನಿರ್ಮಾಣ ವಸ್ತುಗಳ ವ್ಯಾಪಾರದಲ್ಲಿ ಪ್ರಗತಿ. ಹಿರಿಯರ ಆಗಮನ ಮತ್ತು ಮಾರ್ಗದರ್ಶನಕ್ಕಾಗಿ ಕಾಯುತ್ತಿರುವ ನಿಮಗೆ ಶುಭ ಸುದ್ದಿ ಸಿಗಲಿದೆ.

ಸಿಂಹ: ಆರಂಭಶೂರತ್ವ ಬೇಡ. ಮಾಡುವ ಕೆಲಸದಲ್ಲಿ ಜಾಗೃತೆ ಇರಲಿ. ನಿಧಾನವಾದರೂ ಕಾರ್ಯಸಾಧನೆಯಾಗಲಿದೆ. ಸಾಲಗಾರರ ಕಾಟ ಸಾಧ್ಯತೆ. ಜಿಗುಪ್ಸಾ ಮನೋಭಾವ ಬೇಡ.

ಕನ್ಯಾ: ಚಿಲ್ಲರೆ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ನೆಮ್ಮದಿ. ಮುಂಚೂಣಿಯಲ್ಲಿರುವ ನಿರ್ಧಾರವನ್ನು ಸರಿದೂಗಿಸಿಕೊಂಡು ನಡೆಯುವುದು ಉತ್ತಮ. ಆರೋಗ್ಯದ ಬಗ್ಗೆ ಜಾಗೃತೆ ವಹಿಸಿ.

ತುಲಾ: ಸಂಗಾತಿಯ ಸಹಕಾರದಿಂದ ಕಾರ್ಯದಲ್ಲಿ ಪ್ರಗತಿ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಚರ್ಚೆ ನಡೆಯುವ ಸಾಧ್ಯತೆ. ಸಾಯಂಕಾಲ ಸಂತೋಷ ಕೂಟದಲ್ಲಿ ಭಾಗಿಯಾಗಲಿದ್ದೀರಿ.

ವೃಶ್ಚಿಕ: ಪತ್ರಿಕಾರಂಗ ಮುದ್ರಣ ಉದ್ಯಮದವರಿಗೆ ಸಂಚಲನ ಮೂಡುವ ದಿನ. ಸಕಾರಾತ್ಮಕ ಮನೋಭಾವವನ್ನು ರೂಢಿಸಿಕೊಳ್ಳುವುದು ಉನ್ನತ ಸ್ಥಾನಕ್ಕೇರಲು ನಿಮಗೆ ದಾರಿಯಾಗಲಿದೆ.

ಧನು: ನಿಮಗ ಬೇಕಾದ ಸೌಲತ್ತುಗಳು ಶೀಘ್ರದಲ್ಲಿ ದೊರೆಯಲಿವೆ. ಪ್ರೇಮಿಗಳಿಗೆ ಆಶೋತ್ತರಗಳು ಕೈಗೂಡುವ ಶುಭದಿನ. ಮನೆಯಲ್ಲಿ ಶುಭ ಸಮಾಚಾರ ನಿರೀಕ್ಷಣೆ. ಕೆಲಸ ಕಾರ್ಯಗಳಲ್ಲಿ ಧೈರ್ಯದಿಂದ ಮುನ್ನುಗ್ಗಿ.

ಮಕರ: ಕೆಲಸದಲ್ಲಿ ಭಿನ್ನಾಭಿಪ್ರಾಯಗಳು ಒದಗಿಬಂದರೂ ಚಿಂತಿಸುವ ಅವಶ್ಯಕತೆ ಇಲ್ಲ. ಹಾಗೆಂದು ಎಲ್ಲಾ ವಿಷಯಗಳಲ್ಲೂ ಮೂಗುತೂರಿಸಬೇಡಿ. ಉದ್ಯೋಗದ ಬಗ್ಗೆ ಗಮನವಹಿಸುವುದು ಉತ್ತಮ.

ಕುಂಭ: ಕಠಿಣ ಪರಿಶ್ರಮ ನಿಮಗೆ ಅನುಕೂಲವನ್ನು ತರಲಿದೆ. ಕಲಾವಿದರು, ಸಿನಿಮಾ ರಂಗದವರಿಗೆ ಹೊಸ ಅವಕಾಶ ಸಿಗಲಿದೆ. ಕಾರ್ಯವನ್ನು ಮುಂದೂಡುವ ಅವಶ್ಯಕತೆ ಕಂಡಬರುವುದಿಲ್ಲ.

ಮೀನ: ನಿತ್ಯ ಕೆಲಸಗಳನ್ನು ಮುಂದೂಡಿ ಸಂಸಾರದ ಬಗ್ಗೆ ಗಮನ ಕೊಡುವುದು ಲೇಸು. ಅನಿರೀಕ್ಷಿತ ಪ್ರಯಾಣ ಸಾಧ್ಯತೆ ಕಂಡುಬರುತ್ತಿದೆ. ಬೇರೆಯವರ ಕೇಡುಂಟು ಮಾಡುವ ಯೋಚನೆ ಬಿಡಿ.

ನಿಮ್ಮ ಜನ್ಮದಿನ 11-ನವೆಂಬರ್ ಈದಿನ ಅತ್ಯಂತ ಶುಭ ದಿನವಾಗಿದೆ. ಕಲಾರಂಗದಲ್ಲಿ ಉತ್ತಮ ಅವಕಾಶಗಳು ನಿಮ್ಮನ್ನು ಅರಸಿ ಬರಲಿವೆ. ಅನಿರೀಕ್ಷಿತವಾದ ಕೆಲಸಗಳನ್ನು ನಿರೀಕ್ಷಿಸಿ. ಮತ್ಸ್ಯೋದ್ಯಮ, ಜಲಸಾರಿಗೆ ನಡೆಸುವವರಿಗೆ ಆದಾಯದಲ್ಲಿ ಏರುಪೇರು ಸಾಧ್ಯತೆ. ವಾಣಿಜ್ಯ ಬೆಳೆ ಬೆಳೆಯುವ ರೈತರಿಗೆ ಉತ್ತಮ ಆದಾಯ.

ಪದಬಂಧ 4774

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಗರ ಬಡಿದರೆ ಗಣಿ ಕಂಡೀತೇ? (3)
6.ಗಡಿ ಕೊನೆಗೆ ಹೂಡಿದ ವಂಚನೆ (5)
7.ರಸಾಭಾಸ ಇಷ್ಟು ಜೋರು! (3)
10.ಮನಸ್ಸು ಬದಲಾಗುವಿಕೆ (5)
15.ಮನ್ಮಥನಿಂದಲೇ ಶುರುವಾದ ಆಸೆ (3)
16.ಯಾರಿಗೂ ಕಾಣದಂತೆ ಪ್ರವಹಿಸುವುದು (5)
17. ಆನೆಯ ದಾಡೆಯಿದು (3)

ಮೇಲಿಂದ ಕೆಳಕ್ಕೆ
1.ಆ ಭರಣಿಯಲ್ಲಿರುವ ನಗ (4)
2.ಸರಕ್ಕನೆ ಕಾಣಿಸಿಕೊಂಡಿರುವ ಅಸುರ! (3)
3.ಭೂಮಿಯ ಕೆಳಗಿನ ಲೋಕಗಳಲ್ಲಿ ಇದೊಂದು (3)
4.ಇದು ಕೊನೆಯದು (3)
5.ಎಡಬಿಡದಿರುವ ಹನಿಯ ಮಳೆ (4)
8.ಪ್ರಶ್ನೆಗೆ ಪೂರಕವಾಗಿ ಹೇಳುವ ಜವಾಬು (3)
9.ಚಡ್ಡಿಯನ್ನು ಹೀಗೂ ಹೇಳುವರು (3)
11.ಅವನ ಕೆಟ್ಟಗುಣವಿದು (4)
12.ಮನದೊಳಗಿರುವ ಕುಲ (4)
13.ಸಂಗತಿ ಹಂಚಿಕೊಳ್ಳುವ ಜೊತೆಗಾತಿ (3)
14.ಇಬ್ಬನಿಯಲ್ಲಿ ಪ್ರಿಯಕರ ಬಂದಿಹನಲ್ಲಾ? (3)
15.ಆತುರ ಈ ತರ ಬಂದಿದೆಯಲ್ಲಾ? (3)



4773ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರವಾಹ 3.ಪದ್ಮರಾಗ 5.ಬರ 6.ಹತ್ಯಾಕಾಂಡ 7.ವರಮಾನತೆರಿಗೆ 10.ಮೃಗಜಲ 11.ಕೋತಿ 13.ಕೆಕ್ಕರಿಸು 14.ಗಿಲೀಟು

ಮೇಲಿಂದ ಕೆಳಕ್ಕೆ: 1.ಪ್ರತಿ 2.ಹಗುರ 4.ಗರುಡ 5.ಬಡವ 6.ಹಣತೆ 8.ಮಾತುಲ 9.ಗೆಳತಿ 10.ಮೃತ್ತಿಕೆ 11.ಕೋಡಂಗಿ 12.ಘಾಟು

ಸುಡೊಕು 5160

	7			3		1		6
4		9						
	1		7		2		5	4
		3	5		6	4		
	4			2			6	7
		5	1		7	3		
	8		6		5	2		3
2		6						
	3	4		7		6	1	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5159 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ರಾಜ್ಯಪಾಲರು, ಲೆಫ್ಟಿನೆಂಟ್ ಗವರ್ನರ್‌ಗಳ ಸಮ್ಮೇಳನ ಇಂದು

ನವದೆಹಲಿ (ಪಿಟಿಐ): ರಾಷ್ಟ್ರಪತಿ ಭವನದಲ್ಲಿ ಗುರುವಾರ ನಡೆಯಲಿರುವ ರಾಜ್ಯಪಾಲರು ಮತ್ತು ಲೆಫ್ಟಿನೆಂಟ್ ಗವರ್ನರ್‌ಗಳ 51ನೇ ಸಮ್ಮೇಳನದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಲ್ಲ ರಾಜ್ಯಗಳ ರಾಜ್ಯಪಾಲರು ಮತ್ತು ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳ ಸಮ್ಮೇಳನದಲ್ಲಿ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ.

1949ರಲ್ಲಿ ರಾಷ್ಟ್ರಪತಿ ಭವನದಲ್ಲಿ ಮೊದಲ ಸಮ್ಮೇಳನ ನಡೆದಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಭಾವಪೂರ್ಣ ಶ್ರದ್ಧಾಂಜಲಿ

ಜನನ: 01-10-1993 ನಿಧನ: 09-11-2021
ವಿ.ಶಕ್ತಿಪ್ರಸಾದ್
ನನ್ನ ತಮ್ಮ ದಿ|| ವಿ.ಜಯರಾಮ್ ಮತ್ತು ಶ್ರೀಮತಿ ಸೋಮೇಶ್ವರಿ ರವರ ಸುಪುತ್ರ (ಹೊಸಪೇಟೆ)
ಇವರು ದಿನಾಂಕ 09-11-2021 ಮಂಗಳವಾರ ದೈವಾಧೀನರಾದರು ಇವರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಕೋರುವ.
ಇಂತಿ ದುಃಖತಪ್ತರು:
ಡಾ|| ವಿ.ಚಂದ್ರಶೇಖರ್ ಮತ್ತು ಸಹೋದರರು, ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

EXPERIENCED ACCOUNTANT reqd. for Logistics Company at Koramangala, Bangalore Send CV to hr@dfclogistics.com Ph: 7483731856

Drivers

ಬೈಕ್ ರೈಡರ್ಸ್ ಬೇಕಾಗಿದ್ದಾರೆ! ನೀವು ಬೈಕ್ ಹೊಂದಿದ್ದೀರಾ ಪಾರ್ಟ್ ಟೈಮ್ ಅಥವಾ ಫುಲ್ ಟೈಮ್ ಕೆಲಸ ಹುಡುಕುತ್ತಿದ್ದೀರಾ ಬೇಕಾದ ದಾಖಲೆಗಳು ಬೈಕ್. ಆರ್ ಸಿ. ಡಿಎಲ್. ಹಾಗೂ ಆಂಡ್ರಾಯ್ಡ್ ಮೊಬೈಲ್ ಹೊಂದಿರಬೇಕು. ಕೂಡಲೇ ಕರೆ ಮಾಡಿ 080 -45687040.

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000 -15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ನಮ್ಮ ಕಾರುಗಳಲ್ಲಿ ತೆರಳಿ ಪ್ರಮೋಟ್ ಮಾಡಿ.ಉಚಿತ ವಸತಿಯೊಂದಿಗೆ ದಿನಕ್ಕೆ 800-1200 ಸಂಪಾದಿಸಲು ಸಂಪರ್ಕಿಸಿ: 8904379634 / 9513670249

ಕರ್ನಾಟಕದಾದ್ಯಂತ ಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ-ಯುವತಿಯರು ಬೇಕಾಗಿದ್ದಾರೆ. Any education, ವಸತಿಯೂಟದೊಂದಿಗೆ Salary+ ಓ.ಟಿ. 17,800- 48,000/-. 8884666597, 8884666594.

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree,ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ.8884777502, 8884777503

ಸುವರ್ಣ ಅವಕಾಶ:ಫಾರಂನಲ್ಲಿ ಅಂಕಿಗಳು ತುಂಬುವ ಮತ್ತು ಬುಕ್ ಬರೆಯುವ ಮೂಲಕ ಗಳಿಸಿ ವಾರಕ್ಕೆ 4,000-6,000/- ಕೊರಿಯರ್ ಸೌಲಭ್ಯವಿದೆ.9108059956, 9901929956.

Wanted

ಬೆಂಗಳೂರಿನಲ್ಲಿರುವ ಕಂಪನಿಯಲ್ಲಿ ಕೆಲಸ ಮಾಡುವುದಕ್ಕೆ ಯುವತಿಯರು ಯುವಕರು ಬೇಕಾಗಿದ್ದಾರೆ ವಯಸ್ಸು 25ರೊಳಗೆ ವಸತಿಯೂಟವಿರುತ್ತದೆ. ಸಂಬಳ 15,000/ 25,000/ 7899931996/ 8050060001

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/-ESI & PF ಸೌಲಭ್ಯವಿರುತ್ತದೆ. ಬೆಂಗಳೂರು.ಸಂಪರ್ಕಿಸಿ: 9606385001, 9606384001.

ವ್ಯಾಪಾರ

Business to Business

Business

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.8792252077, ಶಿವಮೊಗ್ಗ.9008013895

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

★||ಶ್ರೀಕಬ್ಬಾಳಮ್ಮ ದೇವಿ||★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾಧೆ,ವ್ಯಾಪಾರ, ಶತ್ರುಕಾಟ,ಇನ್ಯಾವುದೇ ಕಠಿಣ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಶಾಶ್ವತಪರಿಹಾರ. "ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ವಿಶೇಷ ಪರಿಹಾರ" ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★||ಸಿಗಂದೂರು ಚೌಡೇಶ್ವರಿ||★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ, ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ. 9845153558

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವಶೀಕರಣ ಸ್ಪೆಷಲಿಸ್ಟ್: ಸ್ತ್ರೀಪುರುಷ ವಶೀಕರಣ, ಲೈಂಗಿಕ ವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ. ಸ್ತ್ರೀಯರಿಗೆ ಉಚಿತ ಪರಿಹಾರ. 9448687421

ಪ್ರವಾಸ

Travel

13-11-2021 ರಿಂದ 4ದಿನ ಮಂತ್ರಾಲಯ ಶ್ರೀ ಶೈಲ, ಅಹೋಬಲಂ, ಮಹಾನಂದಿ, ಯಾಗಟಿ. 13-11-2021 ರಿಂದ 4ದಿನ ಧರ್ಮಸ್ಥಳ, ಮುರುಡೇಶ್ವರ, ಕೊಲ್ಲೂರು, ಸಿಗಂದೂರು, ಕುಕ್ಕೇ ಸುಬ್ರಹ್ಮಣ್ಯ,ಹೊರನಾಡು. ಶ್ರೀ ಗುರುರಾಜ ಟ್ರಾವಲ್ಸ್, ಕೋಲಾರ ಸಂ: 9900124333, 8123099913, 9611082432.

ವಿಜಯವಾಡ, ಭದ್ರಾಚಲಂ, ಅನ್ನಾವರಂ, ವಿಶಾಖಪಟ್ಟಣಂ, ಬುರ್ರಾಗುಹೆಗಳು, ಶ್ರೀಕಾಕುಳಂ ಶ್ರೀವಾಸವಿಪೆನುಗೊಂಡ, 24.12.2021, 10 ದಿನಗಳು. ನೈಮೀಶಾರಣ್ಯ, ಅಯೋಧ್ಯ, ಅಲಹಾಬಾದ್, ಚಿತ್ರಕೂಟ, ಗಯಾ, ಬೈದ್ಯನಾಥ್, ಕಾಶಿ 19.01.2022, 10 ದಿನಗಳು. ತಿರುವಣಮಲೈ, ಚಿದಂಬರಂ, ನವಗ್ರಹಗಳು, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ರಾಮೇಶ್ವರಂ, ಕನ್ಯಾಕುಮಾರಿ, ಮದುರೈ, ಪಳನಿ, ತಿರುವನಂತಪುರಂ, ಕಾಲಡಿ, ಗುರುವಾಯುರು 20.12.2021, 01.01.2022, 7/10 ದಿನಗಳು. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ NO- 92, 2ನೇ ಮುಖ್ಯ ರಸ್ತೆ, ಎಸ್.ಆರ್.ಕಾಲೋನಿ, ತ್ಯಾಗರಾಜನಗರ, Near KEB Quarters ಬೆಂಗಳೂರು-70. 9342287551, 8050629305

"ತಮಸೋಮ ಜ್ಯೋತಿಗಮಯ" ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/14 ದಿನಗಳು 08.12.2021 ಅಹೋಬಲ, ನವನರಸಿಂಹ, ಶ್ರೀಶೈಲ 14 ಕ್ಷೇತ್ರಗಳು 7400/-. 16.12.2021 ನವಗ್ರಹದರ್ಶನ ತಿರುನಲ್ಲಾರ್ ಶನಿದೇವರ ಅನುಗ್ರಹ 18 ಕ್ಷೇತ್ರಗಳು 6000/-. 29.12.2021 ರಾಮೇಶ್ವರ, ಕನ್ಯಾಕುಮಾರಿ 10 ಕ್ಷೇತ್ರಗಳು 7400/-. 14.01.2022 ಗೋವಾ, ಕಾರವಾರ, ಗೋಕರ್ಣ, ಮುರುಡೇಶ್ವರ, ಕೊಲ್ಲೂರು 6500/-. 25.01.2022 ಮದ್ಯಪ್ರದೇಶ, ಗುಜರಾತ್. 15.02.2022 ಕಾಶಿ, ಅಯೋಧ್ಯ, ಗಯಾ, ಕಲ್ಕತ್ತಾ, ಇತ್ಯಾದಿ. 8310564002

ವಿಜಯವಾಡ, ಭದ್ರಾಚಲಂ, ವಾಸವಿಪೆನುಗೊಂಡ, ಪಂಚರಾಮ ಮಂದಿರಗಳು 20.12.2021, 24.12.2021 ರಿಂದ 10 ದಿನಗಳು. ರಾಮೇಶ್ವರ, ಕನ್ಯಾಕುಮಾರಿ, ನವಗ್ರಹ ದೇವಾಲಯಗಳು, ತಂಜಾವೂರು 24.12.2021 ರಿಂದ 8 ದಿನಗಳು. ಸೋಮನಾಥ್, ದ್ವಾರಕಾ,ಮಾತೃಗಯಾ, ಉಜ್ಜಯಿನಿ,ಅಷ್ಟ ಜ್ಯೋತಿರ್ಲಿಂಗಗಳು 20.01.2022 ರಿಂದ 15/18 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ, ಬೆಂಗಳೂರು-18

ಶ್ರೀಶ್ರೇಯಸ್ ಟೂರ್ಸ್: 23.11.2021 13ದಿನಗಳು ದೆಹಲಿ,ಚಂಡೀಗಡ್,ಸಿಮ್ಲಾ, ಮನಾಲಿ, 5ದೇವಿಯರು,ಚಂಭ, ಡಾಲ್‌ಹೌಸಿ,ಜಮ್ಮು, ವೈಷ್ಣೋದೇವಿ,ಅಮೃತಸರ್, ಕುರುಕ್ಷೇತ್ರ.,23.12.2021 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಠಕ ಮಯ್ಯಾರ್ ಸಹಿತ).,22.12.2021 16ದಿನಗಳು ಅಖಂಡ ಆಂಧ್ರ ತೆಲಂಗಾಣ ರಾಜ್ಯಪ್ರವಾಸ 49ಸ್ಥಳಗಳು.9743351212/ 9206979202/ 9902050065

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಜಿತ್ ಡೊಭಾಲ್ ನೇತೃತ್ವದಲ್ಲಿ 8 ದೇಶಗಳ ಭದ್ರತಾ ಸಲಹೆಗಾರರ ಸಭೆ

ಅಫ್ಗನ್ ಸ್ಥಿತಿ ಸುಧಾರಣೆಗೆ ಯತ್ನ

ದೆಹಲಿಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಭಾರತ, ರಷ್ಯಾ, ಇರಾನ್ ಹಾಗೂ ಮಧ್ಯ ಏಷ್ಯಾದ ಐದು ದೇಶಗಳ ರಾಷ್ಟ್ರೀಯ ಭದ್ರತಾ ಸಲಹೆಗಾರರು ಭಾಗಿಯಾಗಿದ್ದರು–ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನವು ಜಾಗತಿಕ ಭಯೋತ್ಪಾದಕರ ಸುರಕ್ಷಿತ ನೆಲೆಯಾಗದಂತೆ ನೋಡಿಕೊಳ್ಳುವ ದಿಸೆಯಲ್ಲಿ ಕೆಲಸ ಮಾಡಲು ಭಾರತ, ರಷ್ಯಾ, ಇರಾನ್ ಹಾಗೂ ಮಧ್ಯ ಏಷ್ಯಾದ ಐದು ದೇಶಗಳು ಬುಧವಾರ ಇಲ್ಲಿ ಪ್ರತಿಜ್ಞೆ ಮಾಡಿದವು. ಅಫ್ಗನ್‌ನಲ್ಲಿ ಮುಕ್ತ ಹಾಗೂ ಎಲ್ಲರನ್ನೂ ಒಳಗೊಂಡ ಸರ್ಕಾರ ರಚನೆಗೆ ಕರೆ ನೀಡಿದವು.ಮಧ್ಯ ಏಷ್ಯಾದ ಕಜಕಸ್ತಾನ, ಕಿರ್ಗಿಸ್ತಾನ, ತಜಕಿಸ್ತಾನ, ತುರ್ಕ್‌ಮೆನಿಸ್ತಾನ ಮತ್ತು ಉಜ್ಬೇಕಿಸ್ತಾನ ದೇಶಗಳು ಭಾಗವಹಿಸಿದ್ದವು.

ಅಫ್ಗಾನಿಸ್ತಾನವು ಭಯೋತ್ಪಾದಕರ ತರಬೇತಿಗೆ, ಸಂಚು ರೂಪಿಸುವುದಕ್ಕೆ, ಹಣಕಾಸು ನೆರವು ನೀಡುವುದಕ್ಕೆ ಬಳಕೆಯಾಗಬಾರದು ಎಂಬ ನಿರ್ಣಯವನ್ನು ಎಂಟು ದೇಶಗಳ ಉನ್ನತ ಭದ್ರತಾ ಅಧಿಕಾರಿಗಳ ಸಭೆಯಲ್ಲಿ ಕೈಗೊಳ್ಳಲಾಯಿತು. ಅಫ್ಗಾನಿಸ್ತಾನದ ಆಂತರಿಕ ವಿಚಾರದಲ್ಲಿ ಮಧ್ಯಪ್ರವೇಶಿಸದಿರುವ, ದೇಶದ ಏಕತೆ ಹಾಗೂ ಸಾರ್ವಭೌಮತೆಯನ್ನು ಗೌರವಿಸುವ ನಿರ್ಣಯವು ಇದರಲ್ಲಿ ಮುಖ್ಯವಾಗಿದ್ದು, ಪಾಕಿಸ್ತಾನಕ್ಕೆ ಪರೋಕ್ಷ ಸಂದೇಶ ರವಾನಿಸಲಾಗಿದೆ. ಶಾಂತಿಯುತ, ಸುರಕ್ಷಿತ ಮತ್ತು ಸುಸ್ಥಿರ ಅಫ್ಗಾನಿಸ್ತಾನಕ್ಕೆ ಬೆಂಬಲ ನೀಡುವುದನ್ನು ನಿರ್ಣಯ ಒತ್ತಿ ಹೇಳಿದೆ.

ಅಫ್ಗಾನಿಸ್ತಾನದಲ್ಲಿ ಕುಸಿಯುತ್ತಿರುವ ಸಾಮಾಜಿಕ– ಆರ್ಥಿಕ ಸ್ಥಿತಿ ಬಗ್ಗೆ ಭದ್ರತಾ ಸಭೆ ಕಳವಳ ವ್ಯಕ್ತಪಡಿಸಿತು. ಅಫ್ಗನ್ ಜನರಿಗೆ ತುರ್ತಾಗಿ ಮಾನವೀಯ ನೆಲೆಯಲ್ಲಿ ನೆರವು ನೀಡಬೇಕಿದೆ ಎಂಬುದನ್ನು ಸಭೆ ಒತ್ತಿ ಹೇಳಿತು. ಅಫ್ಗಾನಿಸ್ತಾನಕ್ಕೆ ಮಾನವೀಯ ನೆರವನ್ನು ಅಡೆತಡೆಯಿಲ್ಲದೆ, ನೇರ ಮತ್ತು ಭರವಸೆಯ ರೀತಿಯಲ್ಲಿ ಒದಗಿಸಬೇಕು ಮತ್ತು ಎಲ್ಲ ವರ್ಗಗಳಿಗೂ ತಾರತಮ್ಯವಿಲ್ಲದೆ ಸಹಾಯ ನೀಡಬೇಕು ಎಂದು ಭದ್ರತಾ ಅಧಿಕಾರಿಗಳು ಹೇಳಿದರು. ಅಫ್ಗಾನಿಸ್ತಾನದಲ್ಲಿ ಕೋವಿಡ್ ಪ್ರಸರಣ ತಡೆಗಟ್ಟಲು ನೆರವಾಗುವುದರ ಜೊತೆಗೆ ಭವಿಷ್ಯದಲ್ಲಿ ಸದಸ್ಯ ದೇಶಗಳು ಪರಸ್ಪರ ಸಂಪರ್ಕದಲ್ಲಿರಬೇಕು ಎಂಬುದಾಗಿ ಸಭೆಯಲ್ಲಿ ನಿರ್ಧರಿಸಲಾಯಿತು.

ಅಫ್ಗಾನಿಸ್ತಾನದಲ್ಲಿ ಇತ್ತೀಚೆಗೆ ನಡೆದ ಬೆಳವಣಿಗೆಗಳು ಅಫ್ಗನ್ ಮಾತ್ರವಲ್ಲದೇ ಏಷ್ಯಾ ವಲಯದನ್ನು ಪ್ರಭಾವಿಸಿವೆ ಎಂದು ಸಭೆಯ ನೇತೃತ್ವ ವಹಿಸಿದ್ದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅಭಿಪ್ರಾಯಪಟ್ಟರು. ಸಭೆಯ ಬಳಿಕ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಅಧಿಕಾರಿಗಳು ಸಭೆಯ ನಿರ್ಣಯದ ಬಗ್ಗೆ ಮಾಹಿತಿ ನೀಡಿದರು.

ಜನರ ಕಷ್ಟಗಳ ಬಗ್ಗೆ ಕಳವಳ

ಅಫ್ಗಾನಿಸ್ತಾನದ ಜನರು ಎದುರಿಸುತ್ತಿರುವ ಕಷ್ಟಗಳ ಬಗ್ಗೆ ಸಭೆ ಕಳವಳ ವ್ಯಕ್ತಪಡಿಸಿತು. ಮಹಿಳೆ, ಮಕ್ಕಳು ಮತ್ತು ಅಲ್ಪಸಂಖ್ಯಾತ ಸಮುದಾಯದ ಮೂಲಭೂತ ಹಕ್ಕುಗಳು ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕಾದ ಅಗತ್ಯವಿದೆ ಎಂದು ಸಭೆ ಹೇಳಿದೆ.

ಕಂದಹಾರ್, ಕಾಬೂಲ್ ಮೊದಲಾದೆಡೆ ನಡೆದ ಭಯೋತ್ಪಾದಕ ದಾಳಿಗಳನ್ನು ಖಂಡಿಸಲಾಯಿತು. ಮಾದಕದ್ರವ್ಯ ಸಾಗಣೆ, ತೀವ್ರವಾದ ಮತ್ತು ಭಯೋತ್ಪಾದನೆ ವಿರುದ್ಧ ಸಂಘಟಿತ ಹೋರಾಟ ಅಗತ್ಯ ಎಂದು ಸಭೆ ಅಭಿಪ್ರಾಯಪಟ್ಟಿತು.

ಅಫ್ಗನ್ ವಿಚಾರದಲ್ಲಿ ವಿಶ್ವಸಂಸ್ಥೆ ಕೈಗೊಂಡ ನಿರ್ಣಯವನ್ನು ಸಭೆ ಪ್ರಸ್ತಾಪಿಸಿತು. ಅಫ್ಗಾನಿಸ್ತಾನದಲ್ಲಿ ವಿಶ್ವಸಂಸ್ಥೆ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದು, ಅಲ್ಲಿ ಅದರ ನಿರಂತರ ಉಪಸ್ಥಿತಿ ಅಗತ್ಯವಿದೆ ಎಂದು ವಿವಿಧ ದೇಶಗಳ ಪ್ರತಿನಿಧಿಗಳು ಅಭಿಪ್ರಾಯಪಟ್ಟರು.

> ಅಫ್ಗಾನಿಸ್ತಾನದಿಂದ ಎದುರಾಗುವ ಸವಾಲುಗಳನ್ನು ಎದುರಿಸಲು ಪ್ರಾದೇಶಿಕ ದೇಶಗಳ ನಡುವೆ ಸಮಾಲೋಚನೆ, ಹೆಚ್ಚಿನ ಸಹಕಾರ ಮತ್ತು ಸಮನ್ವಯ ಬೇಕು
> **ಅಜಿತ್ ಡೊಭಾಲ್,** ರಾಷ್ಟ್ರೀಯ ಭದ್ರತಾ ಸಲಹೆಗಾರ

> ತಾಲಿಬಾನ್ ಅಧಿಕಾರಕ್ಕೆ ಬಂದ ಬಳಿಕ ದೇಶದ ಪರಿಸ್ಥಿತಿ ಇನ್ನಷ್ಟು ಜಟಿಲವಾಗಿದೆ. ಪರಿಣಾಮಕಾರಿ ಸರ್ಕಾರಿ ವ್ಯವಸ್ಥೆಯನ್ನು ರೂಪಿಸುವಲ್ಲಿ ಸಾಕಷ್ಟು ಅಡೆತಡೆಗಳಿವೆ
> **ಕರೀಮ್ ಮಿಸ್ಸಿಮೊವ್,** ಕಜಕಸ್ತಾನದ ರಾಷ್ಟ್ರೀಯ ಭದ್ರತಾ ಸಲಹೆಗಾರ

ಮುಖ್ಯಾಂಶಗಳು

- ಚೀನಾ, ಪಾಕಿಸ್ತಾನಕ್ಕೆ ಭಾರತ ಆಹ್ವಾನ ನೀಡಿದ್ದರೂ, ಅವು ಭಾಗವಹಿಸಿರಲಿಲ್ಲ
- 2022ರಲ್ಲಿ ಮತ್ತೆ ಸಭೆ ಹಮ್ಮಿಕೊಳ್ಳಲು ಎಂಟು ದೇಶಗಳು ಒಪ್ಪಿಕೊಂಡಿವೆ

ಏನೇನು ಚರ್ಚೆ

- ಅಫ್ಗನ್ ಭದ್ರತಾ ಸ್ಥಿತಿ ಮತ್ತು ಅದರ ಪ್ರಾದೇಶಿಕ–ಜಾಗತಿಕ ಪರಿಣಾಮಗಳು
- ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿ
- ಭಯೋತ್ಪಾದನೆ, ತೀವ್ರವಾದದ ಬೆದರಿಕೆ
- ಮಾದವಸ್ತು ಕಳ್ಳ ಸಾಗಣೆ
- ಅಫ್ಗನ್‌ಗೆ ನೀಡಬೇಕಿರುವ ನೆರವು

ಬೆಲೆ ಏರಿಕೆ ವಿರುದ್ಧ ನ. 14ರಿಂದ ಕಾಂಗ್ರೆಸ್‌ನಿಂದ ಪ್ರತಿಭಟನೆ

ವೇಣುಗೋಪಾಲ್

ನವದೆಹಲಿ (ಪಿಟಿಐ): ಬೆಲೆ ಏರಿಕೆ ಹಾಗೂ ಹಣದುಬ್ಬರ ವಿರುದ್ಧ ನ. 14ರಿಂದ 15 ದಿನಗಳ ಕಾಲ ಪಕ್ಷದ ವತಿಯಿಂದ ದೇಶದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಬುಧವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಲೆ ಏರಿಕೆಯಿಂದ ಜನರು ಜೀವನ ನಡೆಸುವುದೇ ಕಷ್ಟವಾಗಿದೆ. ಆರ್ಥಿಕ ಸ್ಥಿತಿ ಹದಗೆಟ್ಟಿರುವುದು, ನಿರುದ್ಯೋಗ ಪ್ರಮಾಣದಲ್ಲಿ ಹೆಚ್ಚಳ, ಕೃಷಿ ಕ್ಷೇತ್ರ ಎದುರಿಸುತ್ತಿರುವ ಬಿಕ್ಕಟ್ಟಿನಿಂದಾಗಿ ಜನರು ಮತ್ತಷ್ಟು ಸಂಕಷ್ಟ ಎದುರಿಸುವಂತಾಗಿದೆ' ಎಂದರು.

'ಸಾಸಿವೆ ಎಣ್ಣೆ ಸೇರಿದಂತೆ ಇತರ ಎಲ್ಲ ಖಾದ್ಯತೈಲಗಳ ಬೆಲೆಗಳು ಕಳೆದ ಒಂದು ವರ್ಷದ ಅವಧಿಯಲ್ಲಿ ದ್ವಿಗುಣಗೊಂಡಿವೆ. ತರಕಾರಿಗಳ ಬೆಲೆಗಳಲ್ಲಿ ತಿಂಗಳ ಅವಧಿಯಲ್ಲಿ ಶೇ 40–50ರಷ್ಟು ಏರಿಕೆಯಾಗಿದೆ' ಎಂದು ದೂರಿದರು.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅತ್ಯಂತ ದುಬಾರಿ ಆಡಳಿತ ಎಂಬುದು ಸಾಬೀತಾಗಿದೆ' ಎಂದು ಪಕ್ಷದ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಟೀಕಿಸಿದರು.

'ಈ ಪ್ರತಿಭಟನೆಯನ್ನು 'ಜನ ಜಾಗರಣ ಅಭಿಯಾನ' ಎಂದು ಕರೆಯಲಾಗುತ್ತಿದ್ದು, ಬೆಲೆ ಏರಿಕೆ ವಿರುದ್ಧದ ಜನರ ಆಕ್ರೋಶಕ್ಕೆ ಪಕ್ಷವು ಈ ಮೂಲಕ ದನಿಯಾಗಲಿದೆ. ಸಿಎನ್‌ಜಿ, ಅಡುಗೆ ಅನಿಲ, ಡೀಸೆಲ್, ಪೆಟ್ರೋಲ್, ಖಾದ್ಯ ತೈಲ, ಬೇಳೆ ಕಾಳುಗಳು ಹಾಗೂ ಇತರ ಅಗತ್ಯ ವಸ್ತುಗಳ ಬೆಲೆಗಳ ಹೆಚ್ಚಳದ ವಿರುದ್ಧ ಜನರ ಸಂಘಟನೆಯನ್ನು ಗಟ್ಟಿಗೊಳಿಸಲಾಗುವುದು' ಎಂದು ಹಿರಿಯ ಮುಖಂಡ ದಿಗ್ವಿಜಯ ಸಿಂಗ್ ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ದಕ್ಷಿಣ ಭಾರತದಲ್ಲಿ ಬಿಜೆಪಿ ಹಿನ್ನಡೆಗೆ ಕಾರಣಗಳೇನು?
ಸಂವಾದ ಬೆಳಿಗ್ಗೆ 11ರಿಂದ 12
ಭಾಗವಹಿಸುವವರು:
ಸಿ.ಎಂ. ಧನಂಜಯ, ಕೆಪಿಸಿಸಿ ವಕ್ತಾರ, ಶಿಸ್ತು ಸಮಿತಿ ಸದಸ್ಯ.
ಸುರೇಶ ನೆಲಮಂಗಲ, ಬೆಂಗಳೂರು ಜಿಲ್ಲಾ ಬಿಜೆಪಿ ವಕ್ತಾರ.
ಮಲ್ಲಿಕಾರ್ಜುನ ಯಂಡಿಗೇರಿ, ಜೆಡಿಎಸ್ ಜಿಲ್ಲಾಧ್ಯಕ್ಷ, ವಿಜಯಪುರ.
ರಾಜಲಕ್ಷ್ಮಿ ಅಂಕಲಗಿ, ನ್ಯಾಯವಾದಿ, ಸಾಮಾಜಿಕ ಕಾರ್ಯಕರ್ತೆ
ಮಿಸಳ್ ಹಾಪ್ಚಾ
ಧಾರವಾಡ ಎಮ್ಮಿ ಬೆನ್ಹತ್ತಿ..
https://bit.ly/2YwqXnd
ಪಾಡ್‌ಕಾಸ್ಟ್: ಈದಿನದ ವಿಶೇಷ: ಸಂಜೆ 4 ಆಟನೋಟ, ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ
ಪ್ರಜಾವಾಣಿ ಕನ್ನಡ ಧ್ವನಿ

ಟ್ರಕ್–ಬಸ್ ಡಿಕ್ಕಿ, 12 ಮಂದಿ ಸಾವು

ಜೈಪುರ (ಪಿಟಿಐ): ರಾಜಸ್ಥಾನದ ಬಾಡಮೇರ್ ಜಿಲ್ಲೆಯಲ್ಲಿ ಬುಧವಾರ ಬಸ್–ಟ್ರಕ್ ಡಿಕ್ಕಿಯಾಗಿ 5 ತಿಂಗಳ ಹೆಣ್ಣು ಮಗು ಸೇರಿ 12 ಮಂದಿ ಮೃತಪಟ್ಟಿದ್ದು, 38 ಮಂದಿ ಗಾಯಗೊಂಡಿದ್ದಾರೆ.

ಬಾಡಮೇರ್ – ಜೋಧಪುರ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಭಂಡಿಯಾವಾಸ್ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ. ಡಿಕ್ಕಿಯ ರಭಸಕ್ಕೆ ಎರಡೂ ವಾಹನಗಳಿಗೆ ಬೆಂಕಿ ಹೊತ್ತಿಕೊಂಡಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಪರಿಹಾರ ಘೋಷಣೆ: ಘಟನೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ ₹ 2 ಲಕ್ಷ ಪರಿಹಾರವನ್ನು ಅವರು ಘೋಷಿಸಿದ್ದಾರೆ.

ಪ್ರವಾಹ ಚೆನ್ನೈನ ಪುರಸೈವಕ್ಕಂನ ಕೆ.ಎಂ. ಗಾರ್ಡನ್‌ನಲ್ಲಿ ಭಾರಿ ಮಳೆಯಿಂದ ಪ್ರವಾಹದಂತಾಗಿರುವ ರಸ್ತೆಯ ನೀರಿನಲ್ಲಿ ಮುಳುಗಿ ಮೃತಪಟ್ಟ ಮೇಕೆ ಕಳೇಬರವನ್ನು ವ್ಯಕ್ತಿಯೊಬ್ಬರು ಎತ್ತಿ ಹೊರತಂದರು –ಪಿಟಿಐ ಚಿತ್ರ

ಫಡಣವೀಸ್ ವಿರುದ್ಧ ಮತ್ತೆ ಮುಗಿಬಿದ್ದ ಮಲಿಕ್

ಪ್ರಜಾವಾಣಿ ವಾರ್ತೆ

ಮುಂಬೈ: ದೇವೇಂದ್ರ ಫಡಣವೀಸ್ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಾಗ, ಅಪರಾಧ ಹಿನ್ನೆಲೆಯುಳ್ಳವರನ್ನು ಸರ್ಕಾರದ ಹುದ್ದೆಗಳಿಗೆ ನೇಮಿಸಿ ರಾಜಕೀಯ ಅಪರಾಧೀಕರಣಕ್ಕೆ ಉತ್ತೇಜನ ನೀಡಿದ್ದಾರೆ ಹಾಗೂ ನಕಲಿ ನೋಟು ಜಾಲದಲ್ಲಿರುವರ ರಕ್ಷಣೆ ಮಾಡಿದ್ದಾರೆ ಎಂದು ಮಹಾರಾಷ್ಟ್ರದ ಸಚಿವ, ಎನ್‌ಸಿಪಿ ವಕ್ತಾರ ನವಾಬ್ ಮಲಿಕ್ ವಾಗ್ದಾಳಿ ನಡೆಸಿದ್ದಾರೆ.

1993ರ ಮುಂಬೈ ಸರಣಿ ಸ್ಫೋಟದ ಸಂಚುಕೋರ ದಾವೂದ್ ಇಬ್ರಾಹಿಂನ ಗ್ಯಾಂಗ್‌ನೊಂದಿಗೆ ನಂಟು ಹೊಂದಿರುವ ಸರ್ದಾರ್ ಶಾ ವಲಿ ಖಾನ್ ಹಾಗೂ ಸಲೀಂ ಪಟೇಲ್ ಎಂಬುವವರೊಂದಿಗೆ ಸಚಿವ ಮಲಿಕ್ ಕುಟುಂಬದವರು ಭೂ ವ್ಯವಹಾರ ನಡೆಸಿದ್ದಾರೆ ಎಂದು ವಿರೋಧ ಪಕ್ಷದ ನಾಯಕ, ಬಿಜೆಪಿಯ ದೇವೇಂದ್ರ ಫಡಣವೀಸ್ ಮಂಗಳವಾರ ಆರೋಪಿಸಿದ್ದರು. ಇದನ್ನು ತಳ್ಳಿಹಾಕಿದ್ದ ಮಲಿಕ್, ಬುಧವಾರ ಸ್ಫೋಟಕ ಮಾಹಿತಿ ಬಹಿರಂಗಪಡಿಸುವುದಾಗಿ ಹೇಳಿದ್ದರು.

'ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮದಲ್ಲಿ, ದಾವೂದ್ ಇಬ್ರಾಹಿಂ ಗ್ಯಾಂಗ್‌ನ ರಿಯಾಜ್ ಭಾತಿ ಭಾಗಿಯಾಗಿದ್ದು ಹೇಗೆ? ಅವರೊಂದಿಗೆ ಫೋಟೊ ತೆಗೆಸಿಕೊಳ್ಳಲು ಸಾಧ್ಯವಾಗಿದ್ದು ಹೇಗೆ' ಎಂದು ಮಲಿಕ್ ಕೇಳಿದ್ದಾರೆ.

'ರಿಯಾಜ್ ಯಾರು? ಈತ ನಕಲಿ ಪಾಸ್‌ಪೋರ್ಟ್‌ನೊಂದಿಗೆ ಸಿಕ್ಕಿಬಿದ್ದವನು. ಅಂಥವನು ನಿಮ್ಮೊಂದಿಗೆ (ಫಡಣವೀಸ್) ಸಮಾರಂಭಗಳಲ್ಲಿ, ಬಿಜೆಪಿ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಾನೆ' ಎಂದು ಮಲಿಕ್ ಆರೋಪಿಸಿದ್ದಾರೆ. ಈ ಬಗ್ಗೆ ಫಡಣವೀಸ್ ಪ್ರತಿಕ್ರಿಯಿಸಿಲ್ಲ. ಆದರೆ, 'ಕೊಳಚೆಯಲ್ಲಿ ಹೊರಳಾಡುವುದನ್ನು ಇಷ್ಟಪಡುವ ಹಂದಿಯೊಂದಿಗೆ ಕಾದಾಟಕ್ಕೆ ನಿಂತರೆ, ಹೊಲಸಾಗುವುದು ನೀವೇ' ಎಂಬ ಜಾರ್ಜ್ ಬರ್ನಾಡ್ ಷಾ ಅವರ ಉಕ್ತಿಯನ್ನು ಉಲ್ಲೇಖಿಸಿ ಟ್ವೀಟ್ ಮಾಡಿದ್ದಾರೆ.

ಆದರೆ, ಫಡಣವೀಸ್ ಅವರ ಆಪ್ತ, ಆಶಿಶ್ ಶೇಲಾರ್ ಅವರು ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಅವರ ಪುತ್ರ ಮತ್ತು ಸಚಿವ ಆದಿತ್ಯ ಠಾಕ್ರೆ ಅವರೊಂದಿಗೆ, ಮಾಜಿ ಮುಖ್ಯಮಂತ್ರಿ ಕಾಂಗ್ರೆಸ್‌ನ ಪೃಥ್ವಿರಾಜ್ ಚೌಹಾಣ್ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರೊಂದಿಗೆ ರಿಯಾಜ್ ಭಾತಿ ಇರುವ ಚಿತ್ರಗಳನ್ನು ಬಿಡುಗಡೆ ಮಾಡಿದ್ದಾರೆ.

ಔರಂಗಾಬಾದ್ ಲಸಿಕೆ ಪಡೆಯದಿದ್ದರೆ ಪಡಿತರ, ಗ್ಯಾಸ್ ಇಲ್ಲ

ಔರಂಗಾಬಾದ್ (ಪಿಟಿಐ): ಪಡಿತರ, ಅಡುಗೆ ಅನಿಲ ಹಾಗೂ ಪೆಟ್ರೋಲ್ ಪಡೆಯಲು ಕನಿಷ್ಠ ಒಂದು ಡೋಸ್ ಆದರೂ ಕೋವಿಡ್ –19 ಲಸಿಕೆ ಹಾಕಿಸಿಕೊಂಡಿರಬೇಕು ಎಂದು ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲಾಡಳಿತ ಆದೇಶ ಮಾಡಿದೆ.

ರಾಜ್ಯದಲ್ಲಿ 36 ಜಿಲ್ಲೆಗಳ ಪೈಕಿ ಕೋವಿಡ್ ಲಸಿಕೆ ಹಾಕಿಸುವಿಕೆಯಲ್ಲಿ ಔರಂಗಾಬಾದ್ 26ನೇ ಸ್ಥಾನದಲ್ಲಿದೆ.

ಆಧಾರ್: ಆಫ್‌ಲೈನ್ ದೃಢೀಕರಣಕ್ಕೆ ಅವಕಾಶ

ನವದೆಹಲಿ (ಪಿಟಿಐ): ಇನ್ನು ಮುಂದೆ ಆಫ್‌ಲೈನ್ ಮೂಲಕವೂ ಆಧಾರ್ ದೃಢೀಕರಣ ಮಾಡಿಕೊಳ್ಳುವ ಅವಕಾಶವನ್ನು ಭಾರತ ವಿಶಿಷ್ಟ ಗುರುತು ಪ್ರಾಧಿಕಾರ (ಯುಐಎಐ) ಕಲ್ಪಿಸಿದೆ.

ಪ್ರಾಧಿಕಾರ ನೀಡುವ ಡಿಜಿಟಲ್ ಸಹಿ ಹೊಂದಿದ ದಾಖಲೆಯನ್ನು ಒದಗಿಸುವ ಮೂಲಕ ದೃಢೀಕರಣ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದಾಗಿದೆ. ಈ ಕುರಿತು ಪ್ರಾಧಿಕಾರವು ಹೊಸ ಮಾರ್ಗಸೂಚಿಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಈ ಮಾರ್ಗಸೂಚಿಯಂತೆ, ದೃಢೀಕರಣ ಸಂದರ್ಭದಲ್ಲಿ ಪ್ರಾಧಿಕಾರ ನೀಡುವ 'ಆಧಾರ್ ಪೇಪರ್‌ಲೆಸ್ ಆಫ್‌ಲೈನ್ ಇ–ಕೆವೈಸಿ' ಎಂಬ ಡಿಜಿಟಲ್ ಸಹಿ ಇರುವ ದಾಖಲೆಯನ್ನು ಸಲ್ಲಿಸುವ ಆಯ್ಕೆಯನ್ನು ಕಾರ್ಡುದಾರರು ಹೊಂದಿರುತ್ತಾರೆ.

ಈ ದಾಖಲೆಯು ಕಾರ್ಡುದಾರರ ಆಧಾರ್ ಸಂಖ್ಯೆಯ ಕೊನೆಯ ನಾಲ್ಕು ಅಂಕಿಗಳನ್ನು ಹೊಂದಿರುತ್ತದೆ. ಅಲ್ಲದೇ, ಕಾರ್ಡುದಾರರ ಹೆಸರು, ಭಾವಚಿತ್ರ, ವಿಳಾಸ, ಲಿಂಗ, ಜನ್ಮದಿನಾಂಕದಂತಹ ವೈಯಕ್ತಿಕ ಮಾಹಿತಿ ಹಾಗೂ ಈ ದಾಖಲೆಯನ್ನು ನೀಡುವ ಇ–ಕೆವೈಸಿ ಏಜೆನ್ಸಿಯ ವಿವರಗಳನ್ನು ಸಹ ಹೊಂದಿರುತ್ತದೆ.

ಪ್ರಾಧಿಕಾರವು ಕ್ಯೂಆರ್ ಕೋಡ್ ಆಧಾರಿತ ದೃಢೀಕರಣ, ಇ–ಆಧಾರ್ ದೃಢೀಕರಣ ವ್ಯವಸ್ಥೆಗಳನ್ನು ಸಹ ಪರಿಚಯಿಸಿದೆ. ಅಲ್ಲದೇ, ಈಗ ಜಾರಿಯಲ್ಲಿರುವ ಒಟಿಪಿ ಆಧಾರಿತ ಮತ್ತು ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆಗಳೂ ಇರಲಿವೆ ಎಂದು ಪ್ರಾಧಿಕಾರ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,044
ಇಂದಿನ ಅಂತ್ಯ	18,017
▼	27
ದಿನದ ಗರಿಷ್ಠ	17,915

ವಿನಿಮಯ ದರ

$ ಡಾಲರ್	74.37
£ ಪೌಂಡ್	100.67
€ ಯುರೊ	--
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1370 (1390)
ಸೋಯಾ (ರಿಫೈನ್ಡ್)	₹1245 (1245)
ಸೂರ್ಯಕಾಂತಿ (ರಿಫೈನ್ಡ್)	₹1280 (1300)
ಪಾಮೋಲಿನ್	₹1182 (1185)

ದಾಖಲೆ ಬರೆದ ಪೇಟಿಎಂ ಐಪಿಒ

ನವದೆಹಲಿ (ಪಿಟಿಐ): ಪೇಟಿಎಂ ಕಂಪನಿಯ ₹ 18,300 ಕೋಟಿ ಮೊತ್ತದ ಐಪಿಒಗೆ ಹೂಡಿಕೆದಾರರಿಂದ ಉತ್ತಮ ಸ್ಪಂದನ ದೊರೆತಿದ್ದು, ಇದುವರೆಗಿನ ಅತಿದೊಡ್ಡ ಮೊತ್ತದ ಐಪಿಒ ಎನ್ನುವ ದಾಖಲೆ ಬರೆದಿದೆ.

ಷೇರು ವಿನಿಮಯ ಕೇಂದ್ರದಲ್ಲಿ ಇರುವ ಮಾಹಿತಿಯ ಪ್ರಕಾರ, ಪೇಟಿಎಂನ ಮಾತೃಸಂಸ್ಥೆ ಒನ್‌97 ಕಮ್ಯುನಿಕೇಷನ್ಸ್ ಲಿಮಿಟೆಡ್, 4.83 ಕೋಟಿ ಷೇರುಗಳನ್ನು ಖರೀದಿಗೆ ಬಿಡುಗಡೆ ಮಾಡಿತ್ತು. ಒಟ್ಟಾರೆ 9.14 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆ ಆಗಿದೆ.

ಅರ್ಹ ಸಾಂಸ್ಥಿಕ ಖರೀದಿದಾರರಿಗೆ (ಕ್ಯುಐಬಿ) 2.63 ಕೋಟಿ ಷೇರುಗಳನ್ನು ಮೀಸಲಿಡಲಾಗಿತ್ತು, ಈ ವಿಭಾಗದಲ್ಲಿ 7.36 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆ ಆಗಿದೆ. ಸಣ್ಣ ಹೂಡಿಕೆದಾರರಿಗೆ 87.98 ಲಕ್ಷ ಷೇರುಗಳನ್ನು ಮೀಸಲಿಡಲಾಗಿತ್ತು, ಈ ವಿಭಾಗದಲ್ಲಿ 1.28 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆ ಆಗಿದೆ.

ಷೇರು ವಿನಿಮಯ ಕೇಂದ್ರದಲ್ಲಿ ಇರುವ ಅಂಕಿ–ಅಂಶಗಳ ಪ್ರಕಾರ, ಕ್ಯುಐಬಿ, ದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ಮ್ಯೂಚುವಲ್ ಫಂಡ್‌ಗಳು ಅಂತಿಮ ದಿನ ಹೆಚ್ಚಿನ ಉತ್ಸಾಹದಿಂದ ಭಾಗವಹಿಸಿದವು. ಇದರಿಂದಾಗಿ ಪೇಟಿಎಂ ಐಪಿಒಗೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಯಿತು.

ಪೇಟಿಎಂ ಷೇರುಗಳು ಮುಂದಿನ ವಾರದಿಂದ ಷೇರುಪೇಟೆಯಲ್ಲಿ ವಹಿವಾಟು ನಡೆಸಲಿದ್ದು, ದೇಶದ ಅತ್ಯಂತ ಮೌಲ್ಯಯುತ ಕಂಪನಿಗಳಲ್ಲಿ ಒಂದಾಗಲಿದೆ. ನವೆಂಬರ್ 15ರಂದು ಷೇರು ಹಂಚಿಕೆ ನಡೆಯುವ ಸಾಧ್ಯತೆ ಇದೆ. ನವೆಂಬರ್ 18ರಂದು ಷೇರು ಮಾರುಕಟ್ಟೆ ಪ್ರವೇಶಿಸುವ ನಿರೀಕ್ಷೆ ಇದೆ.

ಕೇಂದ್ರ ಹಣಕಾಸು ಸಚಿವಾಲಯದ ವರದಿ

ಅತ್ಯಂತ ವೇಗದ ಬೆಳವಣಿಗೆ ಕಾಣುವತ್ತ ಭಾರತ

ನವದೆಹಲಿ (ಪಿಟಿಐ): ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಅರ್ಥ ವ್ಯವಸ್ಥೆ ಆಗುವ ಹಾದಿಯಲ್ಲಿ ಭಾರತ ಇದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಬುಧವಾರ ಹೇಳಿದೆ.

ದೇಶದಲ್ಲಿ ಕೋವಿಡ್ ಲಸಿಕೆ ನೀಡುವ ಕಾರ್ಯ ಭರದಿಂದ ಸಾಗುತ್ತಿರುವುದು ಹಾಗೂ ಹಬ್ಬಗಳು ಒಂದಾದ ನಂತರ ಒಂದರಂತೆ ಬಂದಿರುವುದು ಅರ್ಥ ವ್ಯವಸ್ಥೆಯ ಚೇತರಿಕೆಗೆ ಇನ್ನಷ್ಟು ಉತ್ತೇಜನ ನೀಡಲಿವೆ. ಇದರಿಂದಾಗಿ ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರವು ತಗ್ಗಲಿದೆ. ಉದ್ಯೋಗ ಅವಕಾಶಗಳು ಹೆಚ್ಚಲಿವೆ ಎಂದು ಸಚಿವಾಲಯ ಸಿದ್ಧಪಡಿಸಿರುವ ಮಾಸಿಕ ವರದಿಯು ಹೇಳಿದೆ.

ಮುಖ್ಯಾಂಶಗಳು

- ‘ಆತ್ಮನಿರ್ಭರ ಭಾರತ’ ಯೋಜನೆ ಬೆಳವಣಿಗೆಗೆ ಪೂರಕ
- ಹಬ್ಬದ ಸಂದರ್ಭದಲ್ಲಿ ₹ 1.3 ಲಕ್ಷ ಕೋಟಿ ವಹಿವಾಟು

‘ಪ್ರಮುಖ ಸುಧಾರಣೆಗಳನ್ನು ಒಳಗೊಂಡಿರುವ ಆತ್ಮನಿರ್ಭರ ಭಾರತ ಯೋಜನೆಯು ದೇಶದ ಅರ್ಥವ್ಯವಸ್ಥೆಯ ಪುನಶ್ಚೇತನದಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಮುಂದುವರಿಸಲಿದೆ. ದೇಶದಲ್ಲಿ ಹೂಡಿಕೆಯ ಬಂಡಿಯ ಪಯಣ ಆರಂಭವಾಗುವುದಕ್ಕೆ ಭೂಮಿಕೆ ಸಜ್ಜುಗೊಂಡಿದೆ’ ಎಂದು ವರದಿಯು ವಿವರಿಸಿದೆ.

ಹಬ್ಬಗಳ ಋತುವಿನಲ್ಲಿ ದೇಶದ ಅರ್ಥ ವ್ಯವಸ್ಥೆಯ ಚೇತರಿಕೆಯು ಇನ್ನಷ್ಟು ಹುರುಪು ಪಡೆದುಕೊಂಡಿತು. ಅಖಿಲ ಭಾರತ ವರ್ತಕರ ಒಕ್ಕೂಟದ ನೀಡಿರುವ ಮಾಹಿತಿ ಪ್ರಕಾರ ಈ ಬಾರಿಯ ದೀಪಾವಳಿ ಸಂದರ್ಭದಲ್ಲಿನ ಮಾರಾಟದ ಪ್ರಮಾಣವು ಒಂದು ದಶಕದ ಗರಿಷ್ಠ ಮಟ್ಟದಲ್ಲಿದೆ. ಈ ಬಾರಿ ಒಟ್ಟು ₹ 1.3 ಲಕ್ಷ ಕೋಟಿ ಮೌಲ್ಯದ ವಸ್ತುಗಳು ಬಿಕರಿಯಾಗಿವೆ ಎಂದು ಒಕ್ಕೂಟವು ಹೇಳಿದೆ.

ಈಗಿನ ಹಾಗೂ ಮುಂಬರುವ ಆರ್ಥಿಕ ವರ್ಷಗಳಲ್ಲಿ ಪ್ರಮುಖ ದೇಶಗಳ ಪೈಕಿ ಭಾರತವು ಅತ್ಯಂತ ವೇಗದ ಬೆಳವಣಿಗೆ ಸಾಧಿಸಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಕೂಡ ಅಂದಾಜು ಮಾಡಿದೆ.

ಮಾರುತಿ ಸುಜುಕಿ ಕಂಪನಿಯ ಸಿಇಒ ಕೆನಿಚಿ ಅಯುಕವಾ ಅವರು ಹೊಸ ಸೆಲೆರಿಯೊ ಬಿಡುಗಡೆ ಮಾಡಿದರು —ಪಿಟಿಐ ಚಿತ್ರ

ಹೊಸ ಸೆಲೆರಿಯೊ ಬೆಲೆ ₹ 4.99 ಲಕ್ಷದಿಂದ ಆರಂಭ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ (ಎಂಎಸ್‌ಐ) ಕಂಪನಿಯು ತನ್ನ ಪ್ರೀಮಿಯಂ ಹ್ಯಾಚ್‌ಬ್ಯಾಕ್ ‘ಸೆಲೆರಿಯೊ’ದ ಹೊಸ ಆವೃತ್ತಿಯನ್ನು ಬುಧವಾರ ಬಿಡುಗಡೆ ಮಾಡಿದೆ. ದೆಹಲಿಯಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 4.99 ಲಕ್ಷದಿಂದ ₹ 6.94 ಲಕ್ಷದವರೆಗೆ ಇದೆ.

ಮ್ಯಾನುಯಲ್ ಟ್ರಿಮ್‌ನ ಬೆಲೆಯು ₹ 4.99 ಲಕ್ಷದಿಂದ ₹ 6.44 ಲಕ್ಷ ಹಾಗೂ ಆಟೊ ಗಿಯರ್ ಶಿಫ್ಟ್ ಆವೃತ್ತಿಯ ಬೆಲೆಯು ₹ 6.13 ಲಕ್ಷದಿಂದ ₹ 6.94 ಲಕ್ಷದವರೆಗೆ ಇದೆ ಎಂದು ಕಂಪನಿಯು ತಿಳಿಸಿದೆ.

ಹೊಸ ಸೆಲೆರಿಯೊ, ಹಿಲ್ ಹೋಲ್ಡ್ ಅಸಿಸ್ಟ್ ಸೇರಿದಂತೆ 12 ಹೊಸ ಸುರಕ್ಷತಾ ವೈಶಿಷ್ಟ್ಯಗಳನ್ನು ಹೊಂದಿದೆ. ಈ ಹ್ಯಾಚ್‌ಬ್ಯಾಕ್‌ನ ಹೊಸ ಎಂಜಿನ್ ಕೆ10 ಸಿ ಪ್ರತಿ ಲೀಟರ್ ಪೆಟ್ರೋಲ್‌ಗೆ 26.68 ಕಿಲೋ ಮೀಟರ್ ಮೈಲೇಜ್ ನೀಡುತ್ತದೆ. ಇದು, ದೇಶದಲ್ಲಿಯೇ ಅತ್ಯಂತ ಹೆಚ್ಚು ಇಂಧನ ದಕ್ಷತೆಯ ಪೆಟ್ರೋಲ್ ಕಾರ್ ಎಂದು ಕಂಪನಿ ಹೇಳಿಕೊಂಡಿದೆ. ಮುಂಬರುವ ತಿಂಗಳುಗಳಲ್ಲಿ ಇನ್ನುಳಿದ ಮಾದರಿಗಳು ಸಹ ಮುಂದಿನ ಪೀಳಿಗೆಯ ಕೆ ಫ್ಯಾಮಿಲಿ ಎಂಜಿನ್‌ಗಳನ್ನು ಹೊಂದಲಿವೆ ಎಂದು ಕಂಪನಿ ತಿಳಿಸಿದೆ.

ದೇಶದಲ್ಲಿ ಮಾರಾಟ ಆಗುತ್ತಿರುವ ಪ್ರತಿ ಎರಡು ಕಾರ್‌ನಲ್ಲಿ ಒಂದು ಹ್ಯಾಚ್‌ಬ್ಯಾಕ್ ಆಗಿದೆ. ಹ್ಯಾಚ್‌ಬ್ಯಾಕ್ ವಿಭಾಗದಲ್ಲಿ ಕಂಪನಿಯ ಮಾರುಕಟ್ಟೆ ಪಾಲನ್ನು ಹೆಚ್ಚಿಸುವಲ್ಲಿ ಸೆಲೆರಿಯೊ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ ಎಂದು ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಎಕ್ಸ್‌ಯುವಿ700: ಸುರಕ್ಷತೆಯಲ್ಲಿ ‘5 ಸ್ಟಾರ್’ ಶ್ರೇಯಾಂಕ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಈಚೆಗೆ ಬಿಡುಗಡೆ ಮಾಡಿರುವ ಎಕ್ಸ್‌ಯುವಿ700, ವಯಸ್ಕ ಪ್ರಯಾಣಿಕರ ಸುರಕ್ಷತೆಯ ಮಾನದಂಡಗಳಲ್ಲಿ 5–ಸ್ಟಾರ್ ಶ್ರೇಯಾಂಕ ಪಡೆದಿದೆ ಎಂದು ಕಂಪನಿಯು ಬುಧವಾರ ಹೇಳಿದೆ.

ಈ ವಾಹನವು ವಯಸ್ಕರು ಮತ್ತು ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ 66 ಅಂಕಗಳಲ್ಲಿ 57.69ರಷ್ಟು ಅಂಕ ಪಡೆದಿದ್ದು, ಜಾಗತಿಕವಾಗಿ ಪರೀಕ್ಷೆಗೆ ಒಳಗಾದ ಭಾರತದ ವಾಹನವೊಂದು ಪಡೆದಿರುವ ಗರಿಷ್ಠ ಅಂಕ ಇದು ಎಂದು ಕಂಪನಿ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

10-11-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1380 (1400)
ಒಂದು ವಾರದ ಡೆಲಿವರಿ	1375 (1395)
ಸೋಯಾ ಕಚ್ಚಾ	1181 (1181)
ಪಾಮ್ ವಾರದ ಡೆಲಿವರಿ	1180 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

48,200 (48,000)

ಬೆಳ್ಳಿ ಕೆ.ಜಿ 64,550 (64,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಶೇ 96ರಷ್ಟು ಮೌಲ್ಯ ಹೆಚ್ಚಿಸಿಕೊಂಡ ನೈಕಾ

ನವದೆಹಲಿ (ಪಿಟಿಐ): ಸೌಂದರ್ಯವರ್ಧಕ ಸಾಧನಗಳ ಆನ್‌ಲೈನ್ ಮಾರುಕಟ್ಟೆಯಾದ ನೈಕಾ ಕಂಪನಿಯ ಷೇರುಗಳು ಬುಧವಾರ ಷೇರು ಮಾರುಕಟ್ಟೆ ಪ್ರವೇಶಿಸಿದ್ದು, ಐಪಿಒ ಸಂದರ್ಭದಲ್ಲಿ ನಿಗದಿ ಮಾಡಿದ್ದ ಬೆಲೆಗಿಂತ ಶೇಕಡ 96 ರಷ್ಟು ಮೌಲ್ಯವನ್ನು ಒಂದೇ ದಿನದಲ್ಲಿ ಹೆಚ್ಚಿಸಿಕೊಂಡಿವೆ.

ಕಂಪನಿಯ ಷೇರು, ಷೇರು ಮಾರುಕಟ್ಟೆಯಲ್ಲಿ ಬುಧವಾರ ಬೆಳಿಗ್ಗೆ ₹ 2,001 ರಂತೆ ವಹಿವಾಟು ಆರಂಭಿಸಿತು. ಈ ಮೂಲಕ ಷೇರುಗಳ ಮೌಲ್ಯವು ಐಪಿಒ ಸಂದರ್ಭದ ಬೆಲೆಗಿಂತ ಶೇಕಡ 77ರಷ್ಟು ಹೆಚ್ಚು ಮೌಲ್ಯವನ್ನು ಆರಂಭದಲ್ಲಿಯೇ ಪಡೆದುಕೊಂಡವು. ನಂತರ ಒಂದು ಹಂತದಲ್ಲಿ ಷೇರು ಮೌಲ್ಯವು ಶೇ 99.83ರವರೆಗೂ ಹೆಚ್ಚಳ ಕಂಡಿತ್ತು.

ಮುಂಬೈ ಷೇರುಪೇಟೆಯಲ್ಲಿ ಕಂಪನಿಯ ಮಾರುಕಟ್ಟೆ ಮೌಲ್ಯವು ಮೊದಲ ದಿನವೇ ₹ 1 ಲಕ್ಷ ಕೋಟಿಯ ಗಡಿಯನ್ನು ದಾಟಿದೆ. ಈಗ ಈ ಕಂಪನಿಯ ಮಾರುಕಟ್ಟೆ ಮೌಲ್ಯ ₹ 1.04 ಲಕ್ಷ ಕೋಟಿ ಆಗಿದೆ. ಐಪಿಒ ಮೂಲಕ ಕಂಪನಿಯ ಷೇರುಗಳನ್ನು ಖರೀದಿಸಿದ್ದವರ ಹೂಡಿಕೆಯು ಬುಧವಾರದ ವಹಿವಾಟಿನಲ್ಲಿ ಸರಿಸುಮಾರು ದುಪ್ಪಟ್ಟು ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-51500
ಕುಮಟ	
ಚಿಪ್ಪು	25509-39999
ಕೋಕ	20169-35099
ಫ್ಯಾಕ್ಟರಿ	13509-18929
ಹಳೆಚಾಲಿ	43099-46299
ಹೊಸಚಾಲಿ	33509-39099
ಕಾರ್ಕಳ	
ಹೊಸತು	35000-42500
ಹಳತು	46000-51000
ಪುತ್ತೂರು	
ಕೋಕ	10500-26000
ಹೊಸತು	35500-50000
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	45166-50490
ಗೊರಬಲು	17109-39859
ರಾಶಿ	44699-46999
ಸರಕು	50019-72066
ಸಾಗರ	
ಬಿಳಿಗೋಟು	36909-36909
ಚಾಲಿ	37199-42889
ಕೋಕ	36899-36899
ಕೆಂಪುಗೋಟು	30299-30299
ರಾಶಿ	42009-45899
ಸಿಪ್ಪೆಗೋಟು	19250-25233
ರಾಮನಗರ ರೇಷ್ಮೆ	
ಮಿಶ್ರತಳಿ	300-528
ದ್ವಿತಳಿ	350-710

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13,000	---	205.90ಸೆಂಟ್ಸ್
ಎಸಿ	---	---	---	
ಆರ್‌ಪಿ	---	---	6250	ಲಂಡನ್
ಆರ್‌ಸಿ	---	3220	3660	2226 ಡಾಲರ್ಸ್

‘ಯುರೋಪ್ ಹೊರತುಪಡಿಸಿ ಉಳಿದೆಡೆ ಕೊರೊನಾ ಇಳಿಕೆ’

ಲಂಡನ್ (ಎಪಿ): ಯುರೋಪ್ ಹೊರತುಪಡಿಸಿ ವಿಶ್ವದ ಇತರ ದೇಶಗಳಲ್ಲಿ ಕೊರೊನಾ ವೈರಸ್ ಸೋಂಕಿನ ಪ್ರಕರಣಗಳು ಕಡಿಮೆಯಾಗಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಬುಧವಾರ ಹೇಳಿದೆ.

‘ಯುರೋಪ್ ಮತ್ತೊಮ್ಮೆ ಸಾಂಕ್ರಾಮಿಕ ರೋಗದ ಕೇಂದ್ರಬಿಂದುವಾಗಿದೆ. ಕೋವಿಡ್ ಅನ್ನು ತಡೆಯಲು ಹೆಚ್ಚಿನ ಕ್ರಮಗಳನ್ನು ಕೈಗೊಳ್ಳದಿದ್ದರೆ, ಈ ಪ್ರದೇಶವು ಫೆಬ್ರುವರಿ ವೇಳೆಗೆ ಇನ್ನೂ 5 ಲಕ್ಷ ಸಾವುಗಳನ್ನು ಕಾಣುವ ಸಾಧ್ಯತೆ ಇದೆ’ ಎಂದು ಡಬ್ಲ್ಯುಎಚ್‌ಒ ಯುರೋಪ್‌ನ ನಿರ್ದೇಶಕ ಡಾ. ಹ್ಯಾನ್ಸ್ ಕ್ಲೂಗೆ ಎಚ್ಚರಿಕೆ ನೀಡಿದ್ದಾರೆ.

‘ಕಳೆದ ವಾರದ ಯುರೋಪ್‌ನಲ್ಲಿ ಕೋವಿಡ್‌ನಿಂದಾಗಿ ಸಾವಿಗೀಡಾಗುತ್ತಿರುವವರ ಪ್ರಮಾಣ ಶೇ 10ರಷ್ಟು ಹೆಚ್ಚಾಗಿದೆ. ವಿಶ್ವದ ಇತರ ಪ್ರದೇಶಗಳಲ್ಲಿ ಹೋಲಿಸಿದರೆ ಯುರೋಪ್‌ನಲ್ಲಿ ಮಾತ್ರ ಕೋವಿಡ್ ಪ್ರಕರಣಗಳು ಮತ್ತು ಸಾವಿನ ಸಂಖ್ಯೆ ಸ್ಥಿರವಾಗಿ ಏರುತ್ತಿದೆ. ಯುರೋಪ್ ಖಂಡಾದ್ಯಂತ ಸತತ ಆರು ವಾರಗಳಿಂದ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬರುತ್ತಿದೆ’ ಎಂದು ಡಬ್ಲ್ಯುಎಚ್‌ಒ ಆತಂಕ ವ್ಯಕ್ತಪಡಿಸಿದೆ.

‘ಅಮೆರಿಕ, ರಷ್ಯಾ, ಬ್ರಿಟನ್, ಟರ್ಕಿ ಮತ್ತು ಜರ್ಮನಿಯಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಕೋವಿಡ್‌ನ ಹೊಸ ಪ್ರಕರಣಗಳು ದಾಖಲಾಗುತ್ತಿವೆ. ಯುರೋಪ್ ಹೊರತುಪಡಿಸಿ ವಿಶ್ವದಾದ್ಯಂತ ಕೋವಿಡ್‌ನಿಂದ ಸಾವಿಗೀಡಾಗುತ್ತಿರುವವರ ಪ್ರಮಾಣದಲ್ಲಿ ಸುಮಾರು ಶೇ 4ರಷ್ಟು ಕಡಿಮೆಯಾಗಿದೆ.

ಡಬ್ಲ್ಯುಎಚ್‌ಒನ ಯುರೋಪ್ ವ್ಯಾಪ್ತಿಯಲ್ಲಿ ಬರುವ ರಷ್ಯಾ ಸೇರಿ ಒಟ್ಟು 61 ದೇಶಗಳಲ್ಲಿ ಕಳೆದ ವಾರ ಸೋಂಕಿನ ಪ್ರಮಾಣ ಶೇ 10 ರಷ್ಟು ಹೆಚ್ಚಾಗಿದೆ. ಆಗ್ನೇಯ ಏಷ್ಯಾ ಮತ್ತು ಆಫ್ರಿಕಾದಲ್ಲಿ ಲಸಿಕೆ ಕೊರತೆ ಹೊರತಾಗಿಯೂ, ಕೋವಿಡ್ ಸಾವುಗಳು ಮೂರನೇ ಒಂದು ಭಾಗದಷ್ಟು ಕಡಿಮೆಯಾಗಿದೆ’ ಎಂದೂ ತಿಳಿಸಿದೆ.

ಭಾರತದ ಕೋವ್ಯಾಕ್ಸಿನ್: ವಿಯೆಟ್ನಾಂ ಒಪ್ಪಿಗೆ

ಹೊನೊಯ್: ಭಾರತದ ಕೋವ್ಯಾಕ್ಸಿನ್ ಲಸಿಕೆಯ ತುರ್ತು ಬಳಕೆಗೆ ವಿಯೆಟ್ನಾಂ ಬುಧವಾರ ಅನುಮೋದನೆ ನೀಡಿದೆ. ಕೋವ್ಯಾಕ್ಸಿನ್ ಸೇರಿದಂತೆ ಈವರೆಗೆ ಒಟ್ಟು 9 ಲಸಿಕೆಗಳ ತುರ್ತು ಬಳಕೆಗೆ ದೇಶ ಅನುಮೋದನೆ ನೀಡಿದೆ ಎಂದು ಎಂದು ವಿಯೆಟ್ನಾಂನ ಆರೋಗ್ಯ ಸಚಿವಾಲಯ ಬುಧವಾರ ತಿಳಿಸಿದೆ.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ಮಲಾಲಾ

ಲಂಡನ್/ಕರಾಚಿ (ಪಿಟಿಐ): ನೊಬೆಲ್ ಪುರಸ್ಕೃತೆ, ಬಾಲಕಿಯರ ಶಿಕ್ಷಣಕ್ಕಾಗಿ ಶ್ರಮಿಸುತ್ತಿರುವ ಪಾಕಿಸ್ತಾನದ ಕಾರ್ಯಕರ್ತೆ ಮಲಾಲಾ ಯೂಸುಫ್‌ಜಾಯ್ (24) ಅವರು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಹಿರಿಯ ಅಧಿಕಾರಿ ಅಸರ್ ಮಲಿಕ್ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

ಬರ್ಮಿಂಗ್‌ಹ್ಯಾಂನಲ್ಲಿನ ತನ್ನ ನಿವಾಸದಲ್ಲಿ ಕುಟುಂಬದವರ ಸಮ್ಮುಖದಲ್ಲಿ ನೆರವೇರಿರುವ ವಿವಾಹದ ಫೋಟೊಗಳನ್ನು ಮಲಾಲಾ ಅವರು ತನ್ನ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

‘ಇಂದು ನನ್ನ ಜೀವನದ ಅಮೂಲ್ಯವಾದ ದಿನವಾಗಿದ್ದು, ಅಸರ್ ಮತ್ತು ನಾನು ಬಾಳ ಸಂಗಾತಿಯಾಗಿದ್ದೇವೆ. ನಿಮ್ಮ ಪ್ರಾರ್ಥನೆಗಳು ನಮಗಿರಲಿ’ ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಮಲಿಕ್ ಅವರು ಪಿಸಿಬಿಯ ಹೈ ಪರ್ಫಾರ್ಮೆನ್ಸ್ ಸೆಂಟರ್‌ನ ಜನರಲ್ ಮ್ಯಾನೇಜರ್ ಆಗಿದ್ದಾರೆ. ಎರಡು ವರ್ಷಗಳ ಹಿಂದೆ ಮೊದಲ ಬಾರಿಗೆ ಭೇಟಿಯಾಗಿದ್ದ ಈ ಜೋಡಿ, ನಂತರ ಸಂಪರ್ಕದಲ್ಲಿದ್ದರು. ನಿಕಟ ಸ್ನೇಹ ಬೆಳೆಸಿಕೊಂಡಿದ್ದ ಅವರು ಎರಡೂ ಕುಟುಂಬಗಳ ಒಪ್ಪಿಗೆ ಪಡೆದು ವಿವಾಹವಾಗಿದ್ದಾರೆ.

ಮಲಿಕ್ ಅವರು ಎರಡು ವರ್ಷಗಳ ಹಿಂದೆ ಲಾಹೋರ್‌ನಲ್ಲಿರುವ ಪಿಸಿಬಿಯ ಹೈ ಪರ್ಫಾರ್ಮೆನ್ಸ್ ಸೆಂಟರ್‌ನ ವ್ಯವಸ್ಥಾಪಕರಾಗಿ ಸೇರಿದ್ದರು. ಬಳಿಕ ಜನರಲ್ ಮ್ಯಾನೇಜರ್ ಹುದ್ದೆಗೆ ಬಡ್ತಿ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಹಿರಿಯ ಅಧಿಕಾರಿ ಅಸರ್ ಮಲಿಕ್ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನೊಬೆಲ್ ಪುರಸ್ಕೃತೆ ಮಲಾಲಾ ಯೂಸುಫ್‌ಜಾಯ್

ಶ್ರೀಲಂಕಾದಲ್ಲಿ ಭಾರಿ ಮಳೆ, ಪ್ರವಾಹ: 16 ಮಂದಿ ಸಾವು

ಕೊಲಂಬೊ (ಎಪಿ): ಶ್ರೀಲಂಕಾದಲ್ಲಿ ಒಂದು ವಾರದಿಂದೀಚೆಗೆ ಸುರಿಯುತ್ತಿರುವ ಭಾರಿ ಮಳೆಗೆ ಉಂಟಾದ ಪ್ರವಾಹ ಮತ್ತು ಭೂಕುಸಿತದಿಂದ ಕನಿಷ್ಠ 16 ಮಂದಿ ಮೃತಪಟ್ಟಿದ್ದು, ಸಾವಿರಾರು ಜನರು ಸ್ಥಳಾಂತರವಾಗಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

5,000ಕ್ಕೂ ಹೆಚ್ಚು ಜನರು ತಮ್ಮ ಮನೆಗಳಿಂದ ಸ್ಥಳಾಂತರಗೊಂಡಿದ್ದಾರೆ. ಸಂಬಂಧಿಕರ ಮನೆಗಳಲ್ಲಿ ಅಥವಾ ಸರ್ಕಾರ ನಡೆಸುತ್ತಿರುವ ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಪಡೆದಿದ್ದಾರೆ ಎಂದು ವಿಪತ್ತು ನಿರ್ವಹಣಾ ಕೇಂದ್ರ ತಿಳಿಸಿದೆ.

ಇಮ್ರಾನ್‌ಗೆ ಪಾಕ್ ‘ಸುಪ್ರೀಂ’ ಚಾಟಿ

ಇಸ್ಲಾಮಾಬಾದ್ (ಪಿಟಿಐ): 2014ರಲ್ಲಿ ಸೇನಾ ಪಬ್ಲಿಕ್ ಶಾಲೆಯ ಮೇಲೆ ನಡೆದ ಭಯೋತ್ಪಾದಕ ದಾಳಿಯ ಅಪರಾಧಿಗಳೊಂದಿಗೆ ‘ನೀವು ಏಕೆ ಮಾತುಕತೆ ನಡೆಸುತ್ತಿದ್ದೀರಿ’ ಎಂದು ಸುಪ್ರೀಂ ಕೋರ್ಟ್ ಪೀಠವು, ವಿಚಾರಣೆ ವೇಳೆ ಬುಧವಾರ ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಚಾಟಿ ಬೀಸಿದೆ.

ಎಥೆನಾಲ್ ಬೆಲೆ ಹೆಚ್ಚಳಕ್ಕೆ ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ): ಕಬ್ಬಿನಿಂದ ತಯಾರಿಸಲಾದ, ಪೆಟ್ರೋಲ್‌ನಲ್ಲಿ ಬೆರೆಸುವ ಎಥೆನಾಲ್ ಬೆಲೆಯನ್ನು ಕೇಂದ್ರ ಸಚಿವ ಸಂಪುಟವು ಲೀಟರಿಗೆ ₹ 1.47ರವರೆಗೆ ಹೆಚ್ಚಿಸಿದೆ. ಇದು ಡಿಸೆಂಬರ್‌ನಿಂದ ಶುರುವಾಗಲಿರುವ 2021–22ನೇ ಸಾಲಿನ ಮಾರುಕಟ್ಟೆ ವರ್ಷಕ್ಕೆ ಅನ್ವಯವಾಗಲಿದೆ.

ಎಥೆನಾಲ್‌ಅನ್ನು ಪೆಟ್ರೋಲ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಿಶ್ರಣ ಮಾಡುವುದರಿಂದಾಗಿ ದೇಶಕ್ಕೆ ಪೆಟ್ರೋಲಿಯಂ ಆಮದು ವೆಚ್ಚ ತಗ್ಗಿಸಲು ಸಹಾಯ ಆಗುತ್ತದೆ. ಅಲ್ಲದೆ, ಕಬ್ಬು ಬೆಳೆಗಾರರಿಗೆ, ಸಕ್ಕರೆ ಕಾರ್ಖಾನೆಗಳಿಗೆ ಕೂಡ ಇದರಿಂದ ಸಹಾಯ ಆಗಲಿದೆ.

ತೈಲ ಮಾರಾಟ ಕಂಪನಿಗಳು ಕೇಂದ್ರ ಸರ್ಕಾರ ನಿಗದಿ ಮಾಡಿದ ಬೆಲೆಗೆ ಎಥೆನಾಲ್ ಖರೀದಿಸುತ್ತವೆ. 2025ರ ವೇಳೆಗೆ ಪೆಟ್ರೋಲ್‌ನಲ್ಲಿ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡುವುದು ಕೇಂದ್ರದ ಗುರಿ.

ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರಿಂದ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಕುಸ್ತಿಪಟು ವೀರೇಂದ್ರಸಿಂಗ್ —ಪಿಟಿಐ ಚಿತ್ರ

ಶ್ರವಣದೋಷವುಳ್ಳ ಅಥ್ಲೀಟ್‌ಗಳಿಗೆ ನೆರವು ನೀಡಿ: ‘ಗೂಂಗಾ ಪೈಲ್ವಾನ್’

ನವದೆಹಲಿ (ಪಿಟಿಐ): ಶ್ರವಣದೋಷವುಳ್ಳವರ ವಿಭಾಗದ ಅಥ್ಲೀಟ್‌ಗಳಿಗೆ ಮಾನ್ಯತೆ ನೀಡಬೇಕು ಎಂದು ’ಗೂಂಗಾ ಪೈಲ್ವಾನ್‌’ ವೀರೇಂದ್ರಸಿಂಗ್ ಯಾದವ್ ಅವರು ಹರಿಯಾಣ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಮಂಗಳವಾರ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಯಾದವ್ ಅವರು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ್ದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ’ಹರಿಯಾಣದ ಮುಖ್ಯಮಂತ್ರಿ ಮೋಹನಲಾಲ್ ಖಟ್ಟರ್ ಅವರೇ ನಾನಿವತ್ತು ಇಲ್ಲಿಯ ದೆಹಲಿ ಹರಿಯಾಣ ಭವನದ ಮುಂದಿನ ಪಾದಚಾರಿ ಮಾರ್ಗದಲ್ಲಿ ನಿಂತು ತಮಗೆ ಮನವಿ ಮಾಡುತ್ತಿದ್ದೇನೆ. ಶ್ರವಣದೋಷವುಳ್ಳ ಕ್ರೀಡಾಪಟುಗಳಿಗೂ ಮಾನ್ಯತೆ ನೀಡಬೇಕು. ಅಲ್ಲಿಯವರೆಗೂ ತಮ್ಮ ನಿವಾಸದ ಮುಂದೆ ಕುಳಿತಿರುತ್ತೇನೆ’ ಎಂದರು.

’ಕೇಂದ್ರ ಸರ್ಕಾರವೇ ನಮ್ಮ ವಿಭಾಗದ ಅಥ್ಲೀಟ್‌ಗಳಿಗೆ ಗೌರವ ಮತ್ತು ಮಾನ್ಯತೆ ನೀಡುತ್ತಿದೆ. ನೀವು ಏಯಾಗೆ ಕೊಡುತ್ತಿಲ್ಲ’ ಎಂದೂ ಪ್ರಶ್ನಿಸಿದ್ದಾರೆ.

ಬೇರೆ ಪ್ಯಾರಾ ಅಥ್ಲೀಟ್‌ಗಳಿಗೆ ಪ್ರತ್ಯೇಕವಾದ ಸಂಸ್ಥೆಗಳಿಲ್ಲ. ಆದರೆ, ಶ್ರವಣದೋಷವುಳ್ಳ ಅಥ್ಲೀಟ್‌ಗಳಿಗಾಗಿ ಅಂತರರಾಷ್ಟ್ರೀಯ ಡೆಫ್ ಕ್ರೀಡಾ ಸಮಿತಿ (ಐಸಿಎಸ್‌ಡಿ) ಇದೆ.

ಶ್ರವಣದೋಷವುಳ್ಳವರಿಗೆ ವಿಭಾಗದ ಕ್ರೀಡೆಗಳನ್ನು ಇದು ಆಯೋಜಿಸುತ್ತದೆ. ಡೆಫಿಲಿಂಪಿಕ್ಸ್ ಕೂಟಕ್ಕೆ ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿಯ ಮಾನ್ಯತೆ ಇದೆ. ಆದರೂ ಪ್ಯಾರಾಲಿಂಪಿಕ್ ಕೂಟಗಳಲ್ಲಿ ಶ್ರವಣದೋಷ ವಿಭಾಗದ ಅಥ್ಲೀಟ್‌ಗಳು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುತ್ತಿಲ್ಲ.

ಯಾದವ್ ಪದ್ಮಶ್ರೀ ಸ್ವೀಕರಿಸಿದ ಚಿತ್ರವನ್ನು ಟ್ವೀಟ್ ಮಾಡಿರುವ ಹರಿಯಾಣ ಮುಖ್ಯಮಂತ್ರಿ ಖಟ್ಟರ್, ’ ಫ್ರೀಸ್ಟೈಲ್ ಪ್ಯಾರಾ ಕುಸ್ತಿಪಟುವಾಗಿರುವ ಹರಿಯಾಣದ ಹೆಮ್ಮೆಯ ಪುತ್ರ ವೀರೇಂದ್ರಸಿಂಗ್ ಪುರಸ್ಕೃತರಾಗಿರುವುದು ಸಂತಸದ ವಿಷಯ. ಅವರಿಗೆ ಹಾರ್ದಿಕವಾಗಿ ಶುಭ ಕೋರುತ್ತೇನೆ’ ಎಂದು ಬರೆದಿದ್ದಾರೆ.

74 ಕೆಜಿ ವಿಭಾಗದಲ್ಲಿ ಸ್ಪರ್ಧಿಸುವ ಯಾದವ್, ಡೆಫಿಲಿಂಪಿಕ್ಸ್‌ನಲ್ಲಿ ಮೂರು ಚಿನ್ನ ಮತ್ತು ಒಂದು ಕಂಚಿನ ಪದಕ ಜಯಿಸಿದ್ದಾರೆ.

ಡಿಸೆಂಬರ್‌ನಲ್ಲಿ ದೇಶಿ ಬ್ಯಾಡ್ಮಿಂಟನ್ ಟೂರ್ನಿಗಳಿಗೆ ಚಾಲನೆ

ನವದೆಹಲಿ (ಪಿಟಿಐ): ಇಪ್ಪತ್ತು ತಿಂಗಳ ಬಿಡುವಿನ ನಂತರ ದೇಶಿ ಬ್ಯಾಡ್ಮಿಂಟನ್ ಋತು ಮುಂದಿನ ತಿಂಗಳಲ್ಲಿ ಚಾಲನೆ ಪಡೆದುಕೊಳ್ಳಲಿದೆ. ಡಿಸೆಂಬರ್ ತಿಂಗಳಿಂದ ಸತತವಾಗಿ ಸೀನಿಯರ್ ರ‍್ಯಾಂಕಿಂಗ್ ಟೂರ್ನಿಗಳನ್ನು ನಡೆಸಲಾಗುವುದು ಎಂದು ಭಾರತ ಬ್ಯಾಡ್ಮಿಂಟನ್‌ಸಂಸ್ಥೆಬುಧವಾರತಿಳಿಸಿದೆ.

ಮೊದಲ ಟೂರ್ನಿ ಚೆನ್ನೈಯಲ್ಲಿ ಡಿಸೆಂಬರ್ 16ರಿಂದ 22ರ ವರೆಗೆ ನಡೆಯಲಿದ್ದು ಡಿಸೆಂಬರ್ 24ರಿಂದ 30ರ ವರೆಗೆ ಹೈದರಾಬಾದ್‌ನಲ್ಲಿ ಮತ್ತೊಂದು ಟೂರ್ನಿ ನಡೆಯಲಿದೆ. ಈ ಎರಡೂ ಟೂರ್ನಿಗಳು ತಲಾ ₹ 10 ಲಕ್ಷ ಬಹುಮಾನ ಮೊತ್ತ ಹೊಂದಿರುತ್ತವೆ. ಇವುಗಳಲ್ಲಿ ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ ಹೊಸ ಮಾದರಿಗಳನ್ನು ಪರಿಚಯಿಸಲಾಗುವುದು ಎಂದು ತಿಳಿಸಲಾಗಿದೆ.ಸೀನಿಯರ್ ರ‍್ಯಾಂಕಿಂಗ್ ಟೂರ್ನಿ ಯನ್ನು ಮೂರು ಹಂತಗಳಾಗಿ ವಿಂಗಡಿಸಲಾಗಿದೆ.

ಮೂರನೇ ಹಂತದಲ್ಲಿ ವರ್ಷದಲ್ಲಿ ಆರು ಸರಣಿಗಳು ನಡೆಯಲಿವೆ. ಎರಡನೇ ಹಂತದಲ್ಲಿ ನಾಲ್ಕು ಸೂಪರ್ ಸೀರಿಸ್ ಹಾಗೂ ಒಂದನೇ ಹಂತದಲ್ಲಿ ಎರಡು ಪ್ರೀಮಿಯರ್ ಸೂಪರ್ ಸೀರಿಸ್ ಟೂರ್ನಿಗಳು ನಡೆಯಲಿವೆ.

₹ 2.2 ಕೋಟಿ ಬಹುಮಾನ ಮೊತ್ತ

ದೇಶಿ ಟೂರ್ನಿಗಳಿಗೆ ಒಟ್ಟಾರೆ ₹ 2.2 ಕೋಟಿ ಬಹುಮಾನ ಮೊತ್ತವನ್ನು ನಿಗದಿ ಮಾಡಿದ್ದು ಮೂರನೇ ಹಂತದ ಟೂರ್ನಿಗಳಿಗೆ ₹ 10 ಲಕ್ಷ, ಎರಡನೇ ಹಂತದ ಟೂರ್ನಿಗಳಿಗೆ ₹ 15 ಲಕ್ಷ ಮತ್ತು ಒಂದನೇ ಹಂತಕ್ಕೆ ₹ 25 ಲಕ್ಷವನ್ನು ನಿಗದಿ ಮಾಡಲಾಗಿದೆ. ಈ ಟೂರ್ನಿಗಳ ನಂತರ ರಾಷ್ಟ್ರೀಯ ಟೂರ್ನಿ ನಡೆಯಲಿದೆ. ಇದಕ್ಕೆ ₹ 50 ಲಕ್ಷ ಬಹುಮಾನ ಮೊತ್ತ ನಿಗದಿ ಮಾಡಲಾಗಿದೆ.

ಫೈನಲ್‌ಗೆ ಸ್ಮ್ಯಾಷಿಂಗ್ ಸ್ಕ್ವಾಷರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ ತಂಡವು ಮೊದಲ ಬಾರಿ ನಡೆಯುತ್ತಿರುವ ಬೆಂಗಳೂರು ಸ್ಕ್ವಾಷ್ ಲೀಗ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು.

ಬುಧವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ 4–3ರಿಂದ ಟೀಮ್ ಫಿಯರ್‌ಲೆಸ್ ತಂಡವನ್ನು ಮಣಿಸಿತು.

ಸ್ಮ್ಯಾಷಿಂಗ್ ಸ್ಕ್ವಾಷರ್ಸ್ ತಂಡದ ಸಂತೋಷ್ ಮೆನನ್ 9-11,5-11,11-9,12-10,14-12ರಿಂದ ಗೌರವ್ ಎದುರು, ಸಿದ್ಧಾಂತ್ ಪರ್ನಾಯಿಕ್ 11-7,11-6,10-12,11-6ರಿಂದ ಅಂಕುರ್ ವಿರುದ್ಧ, ವಿವೇಕ್ ನಾಯರ್ 11-8, 13-11,11-6ರಿಂದ ವಿಷಿ ಎದುರು ಹಾಗೂ ವಿವೇಕ್ ಶೇಷಾದ್ರಿ ಅವರು ಪಿಯೂಷ ಎದುರು ಗೆದ್ದು ಬೀಗಿದರು.

ಫಿಯರ್‌ಲೆಸ್ ಪರ ಆದಿತ್ಯ, ಶಿವ ಮತ್ತು ಅರವಿಂದ್ ಜಯ ಸಾಧಿಸಿದರು.

ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಟೀಮ್ ಸ್ಪಾಂಕಿ ಮತ್ತು ಬೀಜಿಂಗ್ ಬೈಟ್ಸ್ ಆಡಲಿವೆ. ಫೈನಲ್ ಪಂದ್ಯವು ಶುಕ್ರವಾರ ನಡೆಯಲಿದೆ.

ಉಡುಪಿಯಲ್ಲಿ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್

ಬೆಂಗಳೂರು: ರಾಜ್ಯ ಮಾಸ್ಟರ್ಸ್ ಅಥ್ಲೆಟಿಕ್ ಸಂಸ್ಥೆ ಮತ್ತು ಉಡುಪಿ ಜಿಲ್ಲಾ ಸಂಸ್ಥೆ ಆಯೋಜಿಸಿರುವ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಡಿಸೆಂಬರ್ 11 ಮತ್ತು 12ರಂದು ಉಡುಪಿಯಲ್ಲಿ ನಡೆಯಲಿದೆ.

ಅಜ್ಜರಕಾಡು ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಸ್ಪರ್ಧೆಗಳು ನಡೆಯಲಿದ್ದು ಪ್ರತಿ ಕ್ರೀಡಾಪಟುವಿಗೆ ಮೂರು ವಿಭಾಗಗಳಲ್ಲಿ ಕಣಕ್ಕೆ ಇಳಿಯಲು ಅವಕಾಶವಿದೆ. ಫೆಬ್ರುವರಿಯಲ್ಲಿ ತೆಲಂಗಾಣದಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡದ ಆಯ್ಕೆ ಇಲ್ಲಿ ನಡೆಯಲಿದೆ.

100, 200, 400, 800, 1500, 5000 ಮತ್ತು 10000 ಮೀಟರ್ಸ್ ಓಟದ ಸ್ಪರ್ಧೆ 60 ವರ್ಷದ ವರೆಗಿನವರಿಗಾಗಿ ನಡೆಯಲಿದೆ. 35ರಿಂದ 45 ವರ್ಷದ ವರೆಗಿನವರಿಗೆ 5 ಕಿಮೀ ವೇಗ ನಡಿಗೆ ಮತ್ತು 110 ಮೀಟರ್ಸ್ ಹರ್ಡಲ್ಸ್, 50ರಿಂದ 55 ವರ್ಷದ ವರೆಗಿನವರಿಗೆ 100 ಮೀಟರ್ಸ್ ಹರ್ಡಲ್ಸ್ ನಡೆಯಲಿದೆ.

ಮಹಿಳೆಯರ ವಿಭಾಗದಲ್ಲಿ 100, 200, 400, 800, 1500, 5000 ಮತ್ತು 10000 ಮೀಟರ್ಸ್ ಓಟ, 5 ಕಿಮೀ ವೇಗ ನಡಿಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯ ರ‍್ಯಾಂಕಿಂಗ್ ಟಿಟಿ 19ರಿಂದ

ಬೆಂಗಳೂರು: ಧಾರವಾಡದ ಕಾಸ್ಮಸ್ ಕ್ಲಬ್‌ನಲ್ಲಿ ಇದೇ 19 ರಿಂದ 22ರವರೆಗೆ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ ನಡೆಯಲಿದೆ.

ಬಾಲಕ ಮತ್ತು ಬಾಲಕಿಯರಿಗಾಗಿ ಕೆಡೆಟ್, ಸಬ್ ಜೂನಿಯರ್ ಮತ್ತು ಜೂನಿಯರ್ ವಿಭಾಗಗಳ ಸ್ಪರ್ಧೆಗಳು ನಡೆಯಲಿವೆ. 19 ವರ್ಷದೊಳಗಿನವರು ಮತ್ತು ಪುರುಷ, ಮಹಿಳೆಯರ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ. ಆಟಗಾರರು ನ. 16ರ ಸಂಜೆ 5ರೊಳಗೆ ಆನ್‌ಲೈನ್ http://karnatakatt.com ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು. ವಿವರಗಳಿಗೆ; ಮಂಜುನಾಥ್ (ಮೊಬೈಲ್: 98809 77827) ಅವರನ್ನು ಸಂಪರ್ಕಿಸಬೇಕು.



ಟಿ20 ವಿಶ್ವಕಪ್: ಡ್ಯಾರಿಲ್ ಮಿಚೆಲ್ ಭರ್ಜರಿ ಬ್ಯಾಟಿಂಗ್; ಇಂಗ್ಲೆಂಡ್ ತಂಡಕ್ಕೆ ನಿರಾಸೆ

ಮೊದಲ ಸಲ ಫೈನಲ್‌ಗೆ ಕಿವೀಸ್ ಲಗ್ಗೆ

ಅಬುಧಾಬಿ: ಡ್ಯಾರಿಲ್ ಮಿಚೆಲ್ ಅಜೇಯ ಅರ್ಧಶತಕದ ಬಲದಿಂದ ನ್ಯೂಜಿಲೆಂಡ್ ತಂಡವು ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಬಾರಿಗೆ ಫೈನಲ್‌ಗೆ ಲಗ್ಗೆ ಇಟ್ಟಿತು.

ಶೇಖ್ ಝಯೇದ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಕಿವೀಸ್ ಬಳಗವು 5 ವಿಕೆಟ್‌ಗಳಿಂದ ಇಂಗ್ಲೆಂಡ್ ವಿರುದ್ಧ ಜಯಿಸಿತು. ಟಾಸ್ ಗೆದ್ದ ಕೇನ್ ವಿಲಿಯಮ್ಸನ್ ಬಳಗವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೋಯಿನ್ ಅಲಿ (ಔಟಾಗದೆ 51; 37ಎಸೆತ, 3ಬೌಂಡರಿ, 2ಸಿಕ್ಸರ್) ಮತ್ತು ಡೇವಿಡ್ ಮಲಾನ್ (41; 30ಎಸೆತ, 4ಬೌಂಡರಿ, 1ಸಿಕ್ಸರ್) ಅವರ ಬ್ಯಾಟಿಂಗ್ ಬಲದಿಂದ ಇಂಗ್ಲೆಂಡ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 166 ರನ್ ಗಳಿಸಿತು. ಅದಕ್ಕುತ್ತ-ರವಾಗಿ ನ್ಯೂಜಿಲೆಂಡ್ ತಂಡವು 19 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 167 ರನ್ ಗಳಿಸಿ ಜಯಭೇರಿ ಬಾರಿಸಿತು.

ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ತಂಡದ ಆರಂಭ ಉತ್ತಮವಾಗಿರಲಿಲ್ಲ. ಮೂರು ಓವರ್‌ಗಳು ಮುಗಿಯುವ ಮುನ್ನವೇ ಮಾರ್ಟಿನ್ ಗಪ್ಟಿಲ್ ಮತ್ತು ಕೇನ್ ವಿಲಿಯಮ್ಸನ್ ಡಗ್‌ಔಟ್‌ಗೆ ಮರಳಲು ಇಂಗ್ಲೆಂಡ್ ವೇಗಿ ಕ್ರಿಸ್ ವೋಕ್ಸ್ ಕಾರಣರಾದರು. ಇದರಿಂದಾಗಿ ಕಿವೀಸ್ ಬಳಗದಲ್ಲಿ ಆತಂಕ ಮೂಡಿತ್ತು. ಆದರೆ, ಮಿಚೆಲ್ (ಔಟಾಗದೆ 72; 47ಎಸೆತ, 4ಬೌಂಡರಿ, 4ಸಿಕ್ಸರ್) ಮತ್ತು ಡೇವೊನ್ ಕಾನ್ವೆ (46; 38ಎಸೆತ, 5ಬೌಂಡರಿ, 1ಸಿಕ್ಸರ್) ಮೂರನೇ ವಿಕೆಟ್ ಜೊತೆಯಾಟದಲ್ಲಿ 82 ರನ್‌ಗಳನ್ನು ಸೇರಿಸಿದರು. ಇವರಿಬ್ಬರಿಗೂ ಅದೃಷ್ಟ ಕೂಡ ಜೊತೆ ಇತ್ತು. ಆದ್ದರಿಂದಲೇ ಮಿಚೆಲ್ ಮತ್ತು ಕಾನ್ವೆ ಅವರಿಗೆ ತಲಾ ಒಂದು ಜೀವದಾನ ಲಭಿಸಿತು.

ಆದರೆ 14ನೇ ಓವರ್‌ನಲ್ಲಿ ಕಾನ್ವೆ ವಿಕೆಟ್ ಗಳಿಸಿದ ಲಿಯಾಮ್ ಲಿವಿಂಗ್‌ಸ್ಟೋನ್ ಇಂಗ್ಲೆಂಡ್ ತಂಡದಲ್ಲಿ ಗೆಲುವಿನ ಆಸೆ ಚಿಗುರಿಸಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಅವರು ಗ್ಲೆನ್ ಫಿಲಿಪ್ಸ್ ವಿಕೆಟ್ ಕೂಡ ಕಬಳಿಸಿದರು. ಈ ಹಂತದಲ್ಲಿ ಮಿಚೆಲ್ ಜೊತೆಗೂಡಿದ ಜೇಮ್ಸ್ ನಿಶಾಮ್ (27 ರನ್) ಇಂಗ್ಲೆಂಡ್ ತಂಡದ ಕನಸಿಗೆ ಅಡ್ಡಿಯಾದರು. ಛಲ ಬಿಡದ ಡೆರಿಲ್ ತಂಡವನ್ನು ಗೆಲುವಿನ ದಡ ಸೇರಿಸಿದರು.

ಡೇವೊನ್ ಕಾನ್ವೆ –ರಾಯಿಟರ್ಸ್

ಡ್ಯಾರಿಲ್ ಮಿಚೆಲ್ ಬ್ಯಾಟಿಂಗ್ ವೈಖರಿ– ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಡೇವೊನ್ ಕಾನ್ವೆ, ನಿಶಾಮ್ ದಿಟ್ಟ ಬ್ಯಾಟಿಂಗ್
- ವೋಕ್ಸ್, ಲಿವಿಂಗ್‌ಸ್ಟೋನ್‌ಗೆ ತಲಾ ಎರಡು ವಿಕೆಟ್
- ಮೋಯಿನ್ ಅಲಿ ಅರ್ಧಶತಕ

ಟೂರ್ನಿಯುದ್ದಕ್ಕೂ ನಮ್ಮ ತಂಡ ತೋರಿದ ಸಾಮರ್ಥ್ಯದ ಬಗ್ಗೆ ಹೆಮ್ಮೆಯಿದೆ. ಅಗ್ರಕ್ರಮಾಂಕದಲ್ಲಿ ಮಿಚೆಲ್ ಅವರಿಂದ ಉತ್ತಮ ಆಟ ಮೂಡಿಬಂದಿತು. ಕೊನೆಯ ಹಂತದಲ್ಲಿ ಜಿಮ್ಮಿ ಆಟದ ಆವೇಗವನ್ನು ಬದಲಾಯಿಸಿದರು.

ಕೇನ್ ವಿಲಿಯಮ್ಸನ್
ನ್ಯೂಜಿಲೆಂಡ್ ತಂಡದ ನಾಯಕ

ಸ್ಕೋರ್ ಕಾರ್ಡ್

ಇಂಗ್ಲೆಂಡ್ 4ಕ್ಕೆ 166 (20 ಓವರ್)
ಬಟ್ಲರ್ ಎಲ್‌ಬಿಡಬ್ಲ್ಯು ಸೋಧಿ 29 (24 ಎ, 4x4), ಬೇಸ್ಟೊ ಸಿ ವಿಲಿಯಮ್ಸನ್ ಬಿ ಮಿಲ್ನೆ 13 (17 ಎ, 4x2), ಮಲಾನ್ ಸಿ ಕಾನ್ವೆ ಬಿ ಸೌಥಿ 41 (30 ಎ, 4x4, 6x1), ಮೋಯಿನ್ ಔಟಾಗದೆ 51 (37 ಎ, 4x3, 6x2), ಲಿವಿಂಗ್‌ಸ್ಟನ್ ಸಿ ಸ್ಯಾಂಟನರ್ ಬಿ ನೀಶಮ್ 17 (10 ಎ, 4x1, 6x1), ಮಾರ್ಗನ್ ಔಟಾಗದೆ 4 (2 ಎ)
ಇತರೆ (ಲೆಗ್‌ಬೈ 2, ವೈಡ್ 9) 11
ವಿಕೆಟ್ ಪತನ: 1-37 (ಜಾನಿ ಬೇಸ್ಟೊ, 5.1), 2-53 (ಜೋಸ್ ಬಟ್ಲರ್, 8.1), 3-116 (ಡೇವಿಡ್ ಮಲಾನ್, 15.2), 4-156 (ಲಿಯಾಮ್ ಲಿವಿಂಗ್‌ಸ್ಟನ್, 19.2)
ಬೌಲಿಂಗ್: ಟಿಮ್ ಸೌಥಿ 4–0–24–1, ಟ್ರೆಂಟ್ ಬೌಲ್ಟ್ 4–0–40–0, ಆ್ಯಡಂ ಮಿಲ್ನೆ 4–0–31–1, ಇಶ್ ಸೋಧಿ 4–0–32–1, ಮಿಚೆಲ್ ಸ್ಯಾಂಟನರ್ 1–0–8–0, ಜೇಮ್ಸ್ ನೀಶಮ್ 2–0–18–1, ಗ್ಲೆನ್ ಫಿಲಿಪ್ಸ್ 1–0–11–0

ನ್ಯೂಜಿಲೆಂಡ್ 5ಕ್ಕೆ 167 (19 ಓವರ್)
ಗಪ್ಟಿಲ್ ಸಿ ಅಲಿ ಬಿ ವೋಕ್ಸ್ 4 (3 ಎ, 4x1), ಡ್ಯಾರಿಲ್ ಮಿಚೆಲ್ ಔಟಾಗದೆ 72 (47 ಎ, 4x4, 6x4), ವಿಲಿಯಮ್ಸನ್ ಸಿ ರಶೀದ್ ಬಿ ವೋಕ್ಸ್ 5 (11 ಎ), ಡೇವಾನ್ ಸ್ಟಂಪ್ಡ್ ಬಟ್ಲರ್ ಬಿ ಲಿವಿಂಗ್‌ಸ್ಟನ್ 46 (38 ಎ, 4x5, 6x1), ಫಿಲಿಪ್ಸ್ ಸಿ ಬಿಲಿಂಗ್ಸ್ ಬಿ ಲಿವಿಂಗ್‌ಸ್ಟನ್ 2 (4 ಎ), ನೀಶಮ್ ಸಿ ಮಾರ್ಗನ್ ಬಿ ರಶೀದ್ 27(11ಎ, 4x1, 6x3), ಮಿಚೆಲ್ ಸ್ಯಾಂಟನರ್ ಔಟಾಗದೆ 1(1 ಎ)
ಇತರೆ (ಬೈ 1, ಲೆಗ್‌ಬೈ 4, ನೋಬಾಲ್ 1, ವೈಡ್ 4) 10
ವಿಕೆಟ್ ಪತನ: 1-4 (ಮಾರ್ಟಿನ್ ಗಪ್ಟಿಲ್, 0.3), 2-13 (ಕೇನ್ ವಿಲಿಯಮ್ಸನ್, 2.4), 3-95 (ಡೇವಾನ್ ಕಾನ್ವೆ, 13.4), 4-107 (ಗ್ಲೆನ್ ಫಿಲಿಪ್ಸ್, 15.1), 5-147 (ಜೇಮ್ಸ್ ನೀಶಮ್, 17.6)
ಬೌಲಿಂಗ್: ಕ್ರಿಸ್ ವೋಕ್ಸ್ 4–1–36–2, ಕ್ರಿಸ್ ಜೋರ್ಡಾನ್ 3–0–31–0, ಆದಿಲ್ ರಶೀದ್ 4–0–39–1, ಮಾರ್ಕ್ ವುಡ್ 4–0–34–0, ಲಿಯಾಮ್ ಲಿವಿಂಗ್‌ಸ್ಟನ್ 4–0–22–2

ಫಲಿತಾಂಶ: ನ್ಯೂಜಿಲೆಂಡ್‌ಗೆ 5 ವಿಕೆಟ್‌ಗಳ ಜಯ

ಮೋಹನ್ ಸಿಂಗ್‌ಗೆ ಗೌರವ

ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ಆಟಗಾರರು ಈಚೆಗೆ ನಿಧನರಾದ ಅಬುಧಾಬಿಯ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಕ್ಯುರೇಟರ್ ಮೋಹನ್ ಸಿಂಗ್ ಅವರಿಗೆ ಗೌರವ ಸಲ್ಲಿಸಿದರು. ಒಂದು ನಿಮಿಷ ಮೌನ ಆಚರಿಸಿದರು.

ಶೇಖ್ ಜಯೇದ್ ಕ್ರೀಡಾಂಗಣದಲ್ಲಿ ಮೋಹನ್ ಕಾರ್ಯನಿರ್ವಹಿಸಿದ್ದ-ರು. ಈಚೆಗೆ ನೇಣು ಬಿಗಿದ ಸ್ಥಿತಿಯಲ್ಲಿ ಅವರ ಮೃತದೇಹ ಪತ್ತೆಯಾಗಿತ್ತು. 45 ವರ್ಷದ ಮೋಹನ್ ಸಿಂಗ್ ಮೂಲತಃ ಉತ್ತರಾಖಂಡದವರು.

ರವಿಶಾಸ್ತ್ರಿಗೆ ಕೃತಜ್ಞತೆ ಸಲ್ಲಿಸಿದ ಕೊಹ್ಲಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಹುದ್ದೆಯಿಂದ ನಿರ್ಗಮಿಸುತ್ತಿರುವ ರವಿಶಾಸ್ತ್ರಿ ಮತ್ತು ನೆರವು ಸಿಬ್ಬಂದಿಗೆ ನಾಯಕ ವಿರಾಟ್ ಕೊಹ್ಲಿ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

'ತಮ್ಮೆಲ್ಲರೊಂದಿಗಿನ ಈ ಪಯಣವು ಸುಂದರವಾಗಿತ್ತು. ನಿಮ್ಮ ಮಾರ್ಗದ-ರ್ಶನದಲ್ಲಿ ತಂಡವಾಗಿ ಆಡಿದ್ದೇವೆ. ಈ ಬಳಗಕ್ಕೆ ನೀವು ನೀಡಿದ ಕಾಣಿಕೆ ಬಹು ಅಮೂಲ್ಯವಾದುದು. ಭಾರತದ ಕ್ರಿಕೆಟ್ ಇತಿಹಾಸದಲ್ಲಿ ತಮ್ಮ ಸಮರ್ಪಣೆಯು ಅವಿಸ್ಮರಣೀಯ' ಎಂದು ವಿರಾಟ್ ಟ್ವೀಟ್ ಮಾಡಿದ್ದಾರೆ.

ಟಿ20 ವಿಶ್ವಕಪ್ ನಂತರ ರವಿಶಾಸ್ತ್ರಿ, ಬೌಲಿಂಗ್ ಕೋಚ್ ಭರತ್ ಅರುಣ್ ಅವರ ಕಾರ್ಯಾವಧಿ ಮುಕ್ತಾಯಗೊಂಡಿದೆ. ವಿರಾಟ್ ಕೂಡ ಟಿ20 ತಂಡದ ನಾಯಕತ್ವ ಬಿಟ್ಟು ಕೊಟ್ಟಿದ್ದಾರೆ. ನ. 17ರಿಂದ ನ್ಯೂಜಿ ಲೆಂಡ್ ಎದುರು ನಡೆಯಲಿರುವ ಚುಟುಕು ಕ್ರಿಕೆಟ್ ಸರಣಿಗೆ ರೋಹಿತ್ ಶರ್ಮಾ ತಂಡವನ್ನು ಮುನ್ನಡೆಸುವರು. ರಾಹುಲ್ ದ್ರಾವಿಡ್ ಮುಖ್ಯ ಕೋಚ್ ಆಗಿ ಕಾರ್ಯಾರಂಭ ಮಾಡಲಿದ್ದಾರೆ.

ಕೊಹ್ಲಿ ಕುಟುಂಬಕ್ಕೆ ಬೆದರಿಕೆ ಪ್ರಕರಣ: ಆರೋಪಿ ಬಂಧನ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರ ಕುಟುಂಬಕ್ಕೆ ಆನ್‌ಲೈನ್ ಮೂಲಕ ಬೆದರಿಕೆ ಹಾಕಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಯನ್ನು ರಾಮನಾಗೇಶ್ ಅಕುಬಾತಿನಿ (23) ಎಂದು ಗುರುತಿಸಲಾಗಿದೆ. ಈತನು ಹೈದರಾಬಾದ್‌ನಲ್ಲಿ ಸಾಫ್ಟವೇರ್ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದನೆಂದು ಪೊಲೀಸರು ತಿಳಿಸಿದ್ದಾರೆ. ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಪಾಕಿಸ್ತಾನ ವಿರುದ್ಧ ಸೋತಿತ್ತು. ಈ ಸಂದರ್ಭದಲ್ಲಿ ಭಾರತದ ಬೌಲರ್ ಮೊಹಮ್ಮದ್ ಶಮಿ ಅವರನ್ನು ಮುಸ್ಲಿಂ ಧರ್ಮಿಯನೆಂಬ ಕಾರಣಕ್ಕೆ ಟ್ರೋಲ್ ಮಾಡಲಾಗಿತ್ತು. ಇದಕ್ಕೆ ತಿರುಗೇಟು ನೀಡಿದ್ದ ವಿರಾಟ್ ಶಮಿ ಬೆಂಬಲಕ್ಕೆ ನಿಂತಿದ್ದರು.

ಆಗ ವಿರಾಟ್ ಮತ್ತು ಅನುಷ್ಕಾ ದಂಪತಿಯ ಹೆಣ್ಣುಮಗುವಿನ ಮೇಲೆ ಅತ್ಯಾಚಾರ ಮಾಡುವುದಾಗಿ ಆನ್‌ಲೈನ್‌ನಲ್ಲಿ ಬೆದರಿಕೆಯೊಡ್ಡಲಾಗಿತ್ತು. ಆಗ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದ ದೆಹಲಿ ಮಹಿಳಾ ಆಯೋಗವು ತನಿಖೆ ನಡೆಸುವಂತೆ ಪೊಲೀಸರಿಗೆ ನೋಟಿಸ್ ನೀಡಿತ್ತು.

ಪಾಕ್ ಓಟಕ್ಕೆ ತಡೆಯೊಡ್ಡುವ ಛಲ

ಬಾಬರ್–ಆ್ಯರನ್ ಫಿಂಚ್ ಬಳಗದ ಸೆಮಿಫೈನಲ್ ಮುಖಾಮುಖಿ ಇಂದು

ದುಬೈ (ಎಎಫ್‌ಪಿ): ಆಲ್‌ರೌಂಡ್ ಆಟದ ಮೂಲಕ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಸೂಪರ್ 12 ಹಂತದ ಎಲ್ಲ ಪಂದ್ಯಗಳನ್ನು ಗೆದ್ದುಕೊಂಡಿರುವ ಪಾಕಿಸ್ತಾನಕ್ಕೆ ಸೆಮಿ-ಫೈನಲ್‌ನಲ್ಲಿ ಗುರುವಾರ ಆಸ್ಟ್ರೇಲಿಯಾ ಸವಾಲೊಡ್ಡಲಿದೆ.

ಡೇವಿಡ್ ವಾರ್ನರ್ ಒಳಗೊಂಡ ಅಗ್ರ ಕ್ರಮಾಂಕದ ಬ್ಯಾಟಿಂಗ್ ವಿಭಾಗ ಲಯ ಕಂಡುಕೊಂಡಿರುವುದು ಮತ್ತು ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ ಬೌಲಿಂಗ್‌ನಲ್ಲಿ ಮಿಂಚುತ್ತಿರುವುದು ಆ್ಯರನ್ ಫಿಂಚ್ ಬಳಗದಲ್ಲಿ ಭರವಸೆ ಮೂಡಿಸಿದೆ. ಸೂಪರ್ 12ರ ಎಲ್ಲ ಪಂದ್ಯಗಳಲ್ಲಿ ಭಾರತವೂ ಒಳಗೊಂಡಂತೆ ಎದುರಾಳಿಗಳನ್ನು ಮಣಿಸಿರುವುದು ಪಾಕಿಸ್ತಾನ ತಂಡದಲ್ಲಿ ನಿರೀಕ್ಷೆ ಗರಿಗೆದರುವಂತೆ ಮಾಡಿದೆ.

ಮೊದಲ ಗುಂಪಿನಲ್ಲಿ ನಾಲ್ಕು ಪಂದ್ಯಗಳಲ್ಲಿ ಗೆದ್ದು ರನ್ ರೇಟ್‌ನಲ್ಲಿ ದಕ್ಷಿಣ ಆಫ್ರಿಕಾವನ್ನು ಹಿಂದಿಕ್ಕುವ ಮೂಲಕ ಆಸ್ಟ್ರೇಲಿಯಾ ಸೆಮಿಫೈನಲ್ ಪ್ರವೇಶಿಸಿತ್ತು. 2012ರ ಬಳಿಕ ಈ ತಂಡ ಆಡಲಿರುವ ನಾಲ್ಕರ ಘಟ್ಟದ ಮೊದಲ ಹಣಾಹಣಿ ಇದು.

ಹ್ಯಾಟ್ರಿಕ್ ಸೇರಿದಂತೆ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಒಟ್ಟು ಐದು ಬಾರಿ ಚಾಂಪಿಯನ್ ಆಗಿರುವ ಆಸ್ಟ್ರೇಲಿಯಾ ತಂಡ ಟ್ವೆಂಟಿ–20 ವಿಶ್ವಕಪ್‌ನಲ್ಲಿ ಒಮ್ಮೆಯೂ ಪ್ರಶಸ್ತಿ ಗೆದ್ದುಕೊಂಡಿಲ್ಲ.

ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಮೊದಲ ಪಂದ್ಯಗಳಲ್ಲಿ ನಿರೀಕ್ಷಿತ ಸಾಮರ್ಥ್ಯ ತೋರಿರಲಿಲ್ಲ. ಆದರೆ ವೆಸ್ಟ್ ಇಂಡೀಸ್ ಮತ್ತು ಶ್ರೀಲಂಕಾ ವಿರುದ್ಧ ಭರ್ಜರಿ ಬ್ಯಾಟಿಂಗ್ ಮಾಡಿ ಕ್ರಮವಾಗಿ 89 ಮತ್ತು 65 ರನ್ ಕಲೆ ಹಾಕಿ ಟೀಕಾಕಾರರಿಗೆ ಉತ್ತರ ನೀಡಿದ್ದರು. ಸೆಮಿಫೈನಲ್‌ನಲ್ಲಿ ಶಹೀನ್ ಶಾ ಅಫ್ರಿದಿ ನೇತೃತ್ವದ ಪ್ರಬಲ ವೇಗದ ದಾಳಿಯನ್ನು ಎದುರಿಸುವ ಸವಾಲು ಅವರ ಮುಂದೆ ಇದೆ.

ಆ್ಯಡಂ ಜಂಪಾ ಸ್ಪಿನ್ ದಾಳಿಗೆ ಬಾಬರ್ ಆಜಂ, ಮೊಹಮ್ಮದ್ ರಿಜ್ವಾನ್ ಮತ್ತು ಶೋಯೆಬ್ ಮಲಿಕ್ ಅವರು ಹೇಗೆ ಉತ್ತರಿಸುತ್ತಾರೆ ಎಂಬುದು ಕೂಡ ಈ ಪಂದ್ಯದಲ್ಲಿ ಕುತೂಹಲ ಕೆರಳಿಸಿದೆ. ಪಾಕಿಸ್ತಾನದ ಬ್ಯಾಟಿಂಗ್ ಕೋಚ್ ಆಗಿ ಆಸ್ಟ್ರೇಲಿಯಾದ ಮಾಜಿ ಆರಂಭಿಕ ಬ್ಯಾಟರ್ ಮ್ಯಾಥ್ಯೂ ಹೇಡನ್ ಇದ್ದಾರೆ ಎಂಬುದು ಕೂಡ ಕುತೂಹಲದ ಸಂಗತಿ.

ಪಾಕಿಸ್ತಾನದ ಆರಂಭಿಕ ಜೋಡಿ ಬಾಬರ್ ಆಜಂ ಮತ್ತು ಮೊಹಮ್ಮದ್ ರಿಜ್ವಾನ್ ಟೂರ್ನಿಯಲ್ಲಿ ಅಮೋಘ ಆಟವಾಡಿದ್ದಾರೆ. ಭಾರತ ಎದುರಿನ ಪಂದ್ಯದಲ್ಲಿ 152 ರನ್‌ಗಳ ಜೊತೆಯಾಟದ ಮೂಲಕ 10 ವಿಕೆಟ್‌ಗಳ ಜಯಕ್ಕೆ ಅವರು ಕಾರಣರಾಗಿದ್ದರು. ಆಸಿಫ್ ಅಲಿ ರೂಪದಲ್ಲಿ ತಂಡಕ್ಕೆ ಉತ್ತಮ ಫಿನಿಷರ್ ಕೂಡ ಲಭಿಸಿದ್ದಾರೆ.

ಆ್ಯರನ್ ಫಿಂಚ್ –ಎಎಫ್‌ಪಿ ಚಿತ್ರ

ಬಾಬರ್ ಆಜಂ

ಸೂಪರ್ 12ರಲ್ಲಿ ಆಸ್ಟ್ರೇಲಿಯಾ ಸಾಧನೆ

ಎದುರಾಳಿ	ಫಲಿತಾಂಶ	ಅಂತರ
ದಕ್ಷಿಣ ಆಫ್ರಿಕಾ	ಜಯ	5 ವಿಕೆಟ್
ಶ್ರೀಲಂಕಾ	ಗೆಲುವು	7 ವಿಕೆಟ್
ಇಂಗ್ಲೆಂಡ್	ಸೋಲು	8 ವಿಕೆಟ್
ಬಾಂಗ್ಲಾದೇಶ	ಜಯ	8 ವಿಕೆಟ್
ವೆಸ್ಟ್ ಇಂಡೀಸ್	ಜಯ	8 ವಿಕೆಟ್

ಸೂಪರ್ 12ರಲ್ಲಿ ಪಾಕಿಸ್ತಾನದ ಸಾಧನೆ

ಎದುರಾಳಿ	ಫಲಿತಾಂಶ	ಅಂತರ
ಭಾರತ	ಗೆಲುವು	10 ವಿಕೆಟ್
ನ್ಯೂಜಿಲೆಂಡ್	ಜಯ	5 ವಿಕೆಟ್
ಅಫ್ಗಾನಿಸ್ತಾನ	ಜಯ	5 ವಿಕೆಟ್
ನಮೀಬಿಯಾ	ಗೆಲುವು	45 ರನ್
ಸ್ಕಾಟ್ಲೆಂಡ್	ಗೆಲುವು	72 ರನ್

ಟ್ವೆಂಟಿ–20 ರ‍್ಯಾಂಕಿಂಗ್

ಪಾಕಿಸ್ತಾನ	2
ಆಸ್ಟ್ರೇಲಿಯಾ	6

ಟ್ವೆಂಟಿ–20ಯಲ್ಲಿ ಮುಖಾಮುಖಿ

ಪಂದ್ಯ	23
ಪಾಕಿಸ್ತಾನ ಜಯ	12
ಆಸ್ಟ್ರೇಲಿಯಾ ಜಯ	9
ಟೈ	1
ಫಲಿತಾಂಶವಿಲ್ಲ	1

ಆರಂಭ : ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ದಕ್ಷಿಣ ಆಫ್ರಿಕಾ ತಂಡಕ್ಕೆ ಮಹಾರಾಜ್ ಸಾರಥ್ಯ

ಜೊಹಾನ್ಸ್‌ಬರ್ಗ್ (ಎಎಫ್‌ಪಿ): ಎಡಗೈ ಸ್ಪಿನ್ನರ್ ಕೇಶವ್ ಮಹಾರಾಜ್ ಅವರು ನೆದರ್ಲೆಂಡ್ಸ್ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮುನ್ನಡೆಸುವರು. ಐಸಿಸಿಯ ವಿಶ್ವಕಪ್ ಸೂಪರ್ ಸೀರಿಸ್ ಅಂಗವಾಗಿ ನಡೆಯಲಿರುವ ಮೂರು ಪಂದ್ಯಗಳ ಸರಣಿ ನವೆಂಬರ್ 26ರಂದು ಆರಂಭವಾಗಲಿದೆ.

16 ಮಂದಿಯ ತಂಡವನ್ನು ಕ್ರಿಕೆಟ್ ದಕ್ಷಿಣ ಆಫ್ರಿಕಾ ಬುಧವಾರ ಪ್ರಕಟಿಸಿದ್ದು ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ತಂಡವನ್ನು ಮುನ್ನಡೆಸಿದ್ದ ತೆಂಬಾ ಬವುಮಾ ಒಳಗೊಂಡಂತೆ ಪ್ರಮುಖ ಆಟಗಾರರನ್ನು ಕೈಬಿಡಲಾಗಿದೆ. ಬವುಮಾ ಜೊತೆಯಲ್ಲಿ ಬ್ಯಾಟರ್ ಏಡನ್ ಮರ್ಕರಮ್, ವಿಕೆಟ್ ಕೀಪರ್ ಬ್ಯಾಟರ್ ಕ್ವಿಂಟನ್ ಡಿ'ಕಾಕ್, ರಸಿ ವ್ಯಾನ್ ಡೆರ್ ಡುಸೆನ್, ವೇಗದ ಬೌಲರ್‌ಗಳಾದ ಕಗಿಸೊ ರಬಾಡ ಹಾಗೂ ಆ್ಯನ್ರಿಚ್ ನಾರ್ಕಿಯ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಸತತವಾಗಿ ಬಯೊಬಬ-ಲ್‌ನಲ್ಲಿ ಇದ್ದ ಕಾರಣ ಮತ್ತು ಅತಿಯಾದ ಕಾರ್ಯ ಒತ್ತಡದ ಹಿನ್ನೆಲೆಯಲ್ಲಿ ಅವರಿಗೆ ವಿಶ್ರಾಂತಿ ನೀಡಲಾಗಿದೆ ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ ತಿಳಿಸಿದೆ. ತಂಡದಿಂದ ಹೊರಗಿಟ್ಟವರನ್ನು ಡಿಸೆಂಬರ್-ಜನವರಿಯಲ್ಲಿ ಭಾರತದ ವಿರುದ್ಧ ನಡೆಯಲಿರುವ ಟೆಸ್ಟ್ ಸರಣಿಗೆ ಪರಿಗಣಿಸುವ ಸಾಧ್ಯತೆ ಇದೆ.


ಮಹಾರಾಜ್

ತಂಡ: ಕೇಶವ್ ಮಹಾರಾಜ್ (ನಾಯಕ), ಡ್ಯಾರಿನ್ ದುಪವಿಲಾನ್, ಜುಬೈರ್ ಹಂಸ, ರೀಜಾ ಹೆನ್ರಿಕ್ಸ್, ಸಿಸಾಂಡ ಮಗಾಲ, ಜೇನ್‌ಮನ್ ಮಲಾನ್, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ವೇಯ್ನ್ ಪಾರ್ನೆಲ್, ಆ್ಯಂಡಿಲೆ ಪಿಶು ವಾಯೊ, ಡ್ವೇನ್ ಪ್ರಿಟೋರಿಯಸ್, ರಯಾನ್ ರಿಕೆಲ್ಟನ್, ತಬ್ರೇಜ್ ಶಂಸಿ, ಕೈಲ್ ವೆರೆಯೆನ್ (ವಿಕೆಟ್ ಕೀಪರ್), ಲಿಜಾದ್ ವಿಲಿಯಮ್ಸ್, ಖಯಾ ಜೊಂಡೊ.

ರ‍್ಯಾಂಕಿಂಗ್: ಐದನೇ ಸ್ಥಾನದಲ್ಲಿ ರಾಹುಲ್

ದುಬೈ(ಪಿಟಿಐ):ಭಾರತ ತಂಡದ ಕೆ.ಎಲ್. ರಾಹುಲ್ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ)ಯ ಟಿ20 ಕ್ರಿಕೆಟ್ ರ‍್ಯಾಂಕಿಂಗ್‌ನ ಬ್ಯಾಟಿಂಗ್ ವಿಭಾಗದಲ್ಲಿ ಐದನೇ ಸ್ಥಾನ ಉಳಿ-ಸಿಕೊಂಡಿದ್ದಾರೆ. ಆದರೆ, ನಾಯಕ ವಿರಾಟ್ ಕೊಹ್ಲಿ ಎಂಟನೇ ಸ್ಥಾನಕ್ಕೆ ಇಳಿದಿದ್ದಾರೆ.

ಈ ವಿಭಾಗದ ಅಗ್ರಸ್ಥಾನದಲ್ಲಿ ಪಾಕಿಸ್ತಾನ ತಂಡದ ಬಾಬರ್ ಆಜಂ ಮುಂದುವರಿದಿದ್ದಾರೆ. ಇಂಗ್ಲೆಂಡ್‌ನ ಡೇವಿಡ್ ಮಲಾನ್ ಹಾಗೂ ದಕ್ಷಿಣ ಆಫ್ರಿಕಾದ ಏಡನ್ ಮರ್ಕರಂ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನಗಳನ್ನು ಹಂಚಿಕೊಂಡಿದ್ದಾರೆ.

ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್ ನಾಲ್ಕನೇ ಸ್ಥಾನ ಕಾಯ್ದು-ಕೊಂಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಿಲಿಯರ್ಡ್ಸ್: ಕೆಎಸ್‌ಬಿಎ ತಂಡಗಳಿಗೆ ಜಯ

ಬೆಂಗಳೂರು: ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯ (ಕೆಎಸ್‌ಬಿಎ) 'ಬಿ' ಮತ್ತು 'ಡಿ' ತಂಡಗಳು ಎಂ.ಚೆನ್ನಯ್ಯಪ್ಪನ್ ಸ್ಮಾರಕ ಟೂರ್ನಿಯಲ್ಲಿ ಬುಧವಾರ ಜಯ ಗಳಿಸಿದವು.

ಆತಿಥೇಯ ಕೆಎಸ್‌ಬಿಎ 'ಬಿ' ತಂಡ 2–1ರಲ್ಲಿ ಬೌರಿಂಗ್ ಸಂಸ್ಥೆಯ ತಂಡವನ್ನು ಮಣಿಸಿತು. ಮೊದಲ ಹಣಾಹಣಿಯಲ್ಲಿ ಎಂ.ಎಲ್. ಲಕ್ಷ್ಮಣ್ 50–100ರಲ್ಲಿ ಅರ್ಜುನ್ ಮೆಹ್ತಾ ಎದುರು ಸೋತು ನಿರಾಸೆ ಮೂಡಿಸಿದರು. ಆದರೆ ಸತೀಶ್ ಚಾಬ್ರಿಯಾ ಮತ್ತು ಜಿ.ಕಿಶೋರ್ ಅವರು ಅಮೋಘ ಆಟವಾಡಿ ತಂಡಕ್ಕೆ ಜಯ ತಂದುಕೊಟ್ಟರು.

ಸತೀಶ್ 100–0ಯಿಂದ ಕುಶಾಲ್ ವಿರುದ್ಧ ಜಯ ಗಳಿಸಿದರೆ ಕಿಶೋರ್ 100–30ರಲ್ಲಿ ಬ್ರಿಜೇಶ್ ವಿರುದ್ಧ ಗೆದ್ದರು. ಕೆಎಸ್‌ಬಿಎ 'ಡಿ' ತಂಡ ಬೆಂಗಳೂರು ಕ್ಲಬ್ ಎದುರು 2–1ರಲ್ಲಿ ಜಯ ಸಾಧಿಸಿತು. ಮೊದಲ ಹಣಾಹಣಿಯಲ್ಲಿ ಮಯಾಂಕ್ 90–100ರಲ್ಲಿ ನೀರವ್‌ಗೆ ಮಣಿದರೆ ಚಿತ್ರಾ ಎಂ 100–0ಯಿಂದ ಸುಹೇಲ್ ಅವರನ್ನೂ ಸಾಯಿರಾಮ್ 100–92ರಲ್ಲಿ ನೆವಿಲ್ ಅವರನ್ನೂ ಸೋಲಿಸಿದರು.ಕೆಎಸ್‌ಸಿಎ ಮತ್ತು ಕೆಎಸ್‌ಬಿಎ ಮಹಿಳಾ ತಂಡಗಳ ನಡುವಿನ ಪಂದ್ಯದಲ್ಲಿ ಕೆಎಸ್‌ಸಿಎ 2–1ರಲ್ಲಿ ಜಯ ಗಳಿಸಿತು. ಇಂದಿರಾ ಗೌಡಗೆ ಕಮಲೇಶ್ 57–100ರಲ್ಲಿ ಮಣಿದರು. ನಿಹಾಲ್,ವರ್ಷಾ ಸಂಜೀವ್ ಎದುರು ಮತ್ತು ಸಂತೋಷ್ ಆರಾಧನಾ ನಾಯಕ್ ಅವರನ್ನು ಮಣಿಸಿದರು.

ನಾಳೆಯಿಂದ ರಾಜ್ಯ ರ‍್ಯಾಂಕಿಂಗ್ ಕೇರಂ

ಬೆಂಗಳೂರು: ಕರ್ನಾಟಕ ಕೇರಂ ಸಂಸ್ಥೆಯ ಸಹಯೋಗದೊಂದಿಗೆ ಸ್ಟ್ರೈಕರ್ಸ್ ಕೇರಂ ಸಂಸ್ಥೆಯು ಇದೇ 12ರಿಂದ ರಾಜ್ಯ ರ‍್ಯಾಂಕಿಂಗ್ ಟೂರ್ನಿಯನ್ನು ಆಯೋಜಿಸಿದೆ.

ಲಿಂಗರಾಜಪುರಂನ ಕಲ್ಯಾಣ ಮಂಟಪದಲ್ಲಿ ಟೂರ್ನಿ ನಡೆಯಲಿದೆ. ಮಾಹಿತಿ ಹಾಗೂ ನೋಂದಣಿಗಾಗಿ ಅರ್ಜುನ್ (ಮೊಬೈಲ್ ಸಂಖ್ಯೆ 9972006053) ಅವರನ್ನು ಸಂಪರ್ಕಿಸಬೇಕು.

ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ಇಂದಿನಿಂದ

ಕಣಕ್ಕೆ ಮರಳುತ್ತಿರುವ ಗೀತಾ ಫೋಗಟ್

ಗೊಂಡಾ, ಉತ್ತರಪ್ರದೇಶ (ಪಿಟಿಐ): ಸುಮಾರು ಮೂರು ವರ್ಷಗಳ ಬಳಿಕ ಕಣಕ್ಕಿಳಿಯುತ್ತಿರುವ ಗೀತಾ ಫೋಗಟ್ ಹಾಗೂ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಸರಿತಾ ಮೋರ್ ನಡುವಣ ಪೈಪೋಟಿಗೆ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ವೇದಿಕೆಯಾಗುವ ನಿರೀಕ್ಷೆಯಿದೆ.

ಗೀತಾ ಫೋಗಟ್

ಗುರುವಾರ ಇಲ್ಲಿ ಆರಂಭವಾಗಲಿರುವ ಚಾಂಪಿಯನ್‌ಷಿ-ಪ್‌ನಲ್ಲಿ ನರಸಿಂಗ್ ಯಾದವ್ (74 ಕೆಜಿ ವಿಭಾಗ) ಮತ್ತು ಗೌರವ್ ಬಲಿಯಾನ್ (79) ಮೇಲೂ ಕಣ್ಣು ನೆಟ್ಟಿದೆ.

ಗೀತಾ ಅವರ ಸಹೋದರಿ, ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಬಜರಂಗ್ ಪೂನಿಯಾ ಅವರ ಪತ್ನಿ ಸಂಗೀತಾ ಫೋಗಟ್ ಅವರು ಗಾಯದಿಂದ ಚೇತರಿಸಿಕೊಂಡ ಬಳಿಕ ವಿಶ್ವ ಚಾಂಪಿಯನ್‌ಷಿಪ್ ಟ್ರಯಲ್ಸ್ ಗೆದ್ದಿದ್ದರು. 62 ಕೆಜಿ ವಿಭಾಗದಲ್ಲಿ ಅವರು ಕಣಕ್ಕಿಳಿಯುತ್ತಿದ್ದು ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸದಲ್ಲಿದ್ದಾರೆ.2018ರಲ್ಲಿ ಪುತ್ರ ಅರ್ಜುನ್‌ಗೆ ಜನ್ಮ ನೀಡಿದ್ದ ಗೀತಾ ಆ ಬಳಿಕ ಸ್ಪರ್ಧಾತ್ಮಕ ಕುಸ್ತಿಗೆ ಮರಳಿರಲಿಲ್ಲ. ಈ ಚಾಂಪಿಯನ್‌ಷಿ-ಪ್‌ನಲ್ಲಿ 59 ಕೆಜಿ ವಿಭಾಗದಲ್ಲಿ ಅವರು ಸ್ಪರ್ಧಿಸುತ್ತಿದ್ದು, 2024ರ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವ ಗುರಿಯಿಟ್ಟುಕೊಂ-ಡಿದ್ದಾರೆ.

ಸೋನಮ್ ಮಲಿಕ್, ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಅನ್ಶು ಮಲಿಕ್ ಹಾಗೂ ವಿನೇಶಾ ಫೋಗಟ್ ಕೂಡ ಕಣಕ್ಕಿಳಿಯುತ್ತಿಲ್ಲ. ಬಜರಂಗ್ ಪೂನಿಯಾ, ರವಿ ದಹಿಯಾ ಮತ್ತು ದೀಪಕ್ ಪೂನಿಯಾ ಸ್ಪರ್ಧಿಸುತ್ತಿಲ್ಲ.

ಕುಸ್ತಿಪಟು ಸಾವು; ಗೊಂದಲ

ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಬಂದಿದ್ದ ನಿಶಾ ದಹಿಯಾ ಅವರ ಹೆಸರಿನ ಕುಸ್ತಿಪಟು ಹಾಗೂ ಅವರ ಸಹೋದರರೊಬ್ಬರು ಸೋನೆಪತ್‌ನಲ್ಲಿ ಸಾವಿಗೀಡಾದ ಹಿನ್ನೆಲೆಯಲ್ಲಿ ಗೊಂಡಾದಲ್ಲಿ ಬುಧವಾರ ಸಂಜೆ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ನಿಶಾ ಎಂಬುವವರ ತಾಯಿಯೂ ಗಾಯಗೊಂಡಿದ್ದರು.

ಅಭ್ಯಾಸ ನಿರತ ನಿಶಾ ಅವರಿಗೆ ನಿರಂತರ ಫೋನ್ ಕರೆಗಳು ಬರತೊಡಗಿದವು. ಕರೆ ಮಾಡಿದವರಿಗೆಲ್ಲ 'ನಾನು ಜೀವಂತ ಇದ್ದೇನೆ' ಎಂದು ಹೇಳಿ ನಿಶಾ ಸುಸ್ತಾದರು.

ಕುಸ್ತಿಪಟು ಸುಶೀಲ್ ಕುಮಾರ್ ಅವರ ಸೋನೆಪತ್‌ನ ಕುಸ್ತಿ ಅಕಾಡೆಮಿಯ ಹೊರಭಾಗದಲ್ಲಿ ನಿಶಾ ಅವರನ್ನು ಗುಂಡಿಟ್ಟು ಕೊಲೆ ಮಾಡಲಾಗಿದೆ ಎಂಬ ಸುದ್ದಿ ಬರುತ್ತಿದ್ದಂತೆ ನೂರಾರು ಕುಸ್ತಿಪಟುಗಳು, ಕೋಚ್‌ಗಳು ಮತ್ತು ಅಧಿಕಾರಿಗಳು ಗುಂಪುಗೂಡಿ ಪರಸ್ಪರ ಮಾತುಕತೆಯಲ್ಲಿ ತೊಡಗಿದರು. ತನಗೇನೂ ಆಗಿಲ್ಲ ಎಂದು ನಿಶಾ ಹೇಳುತ್ತಿದ್ದಂತೆ ಎಲ್ಲರೂ ಸಮಾಧಾನಪಟ್ಟು-ಕೊಂಡರು.